ಸೋಮವಾರ, ಆಗಸ್ಟ್ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 242 | ಪುಟ 12 + 2

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು

ಶಿಕ್ಷಣ

ವಿದ್ಯಾರ್ಥಿಗಳು ವೃತ್ತಿ ಮತ್ತು ಕೋರ್ಸ್ ಆಯ್ಕೆಯಲ್ಲಿ ಎಡವುತ್ತಿದ್ದಾರೆ. ಹಾಗಾದರೆ, ವೃತ್ತಿ ಮತ್ತು ಕೋರ್ಸ್ ಆಯ್ಕೆಯ ಪ್ರಕ್ರಿಯೆ ಹೇಗೆ?

EXCEL ACADAMICS®
Bengaluru
IIT-Main & Advanced | NEET | BITS | AIIMS | JIPMER | CET | COMED-K
Administrative Office - EXCEL ACADAMICS :
#326, Opp. People Tree Hospital, Sheshadripuram College Road Yelahanka New Town - 560064, Bangalore
Postal Coaching For PUC + CET / NEET / IIT-JEE / AIIMS / JIPMER Contact 9036357494
CELEBRATING 12 SUCCESSFUL YEARS with Hardwork & Dedication EXCEL ACADAMICS
Registration Started for
PCB / PCM Droppers Course
II PUC/12th/+2 Passed Students
NEET / JEE / CET LONG TERM (REPEATERS) COURSE
THE ONLY INSTITUTE ACHIEVING HIGHEST NO.OF MEDICAL SEATS EVERY YEAR
ONLINE TAB 10.01" Tab for Online Exam Practice
The only Institute in INDIA successfully conducting "Daily Test" for NEET / IIT-JEE aspirants.
Scholarship available for Meritorious Students
Separate Deluxe Hostel for Boys and Girls
7676-91-7777, 95136 57041, 9535656277

ನಿರಂತರ ಸದೃಢ ಆರೋಗ್ಯಕ್ಕಾಗಿ
SDM AYURVEDA PHARMACY
ಚ್ಯವನಪ್ರಾಶ ಲೇಹ
ತಯಾರಕರು ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ, ಉಡುಪಿ
Ph: 0820-2520852, 8970977513

ಹಣ ಮಂಜೂರಾತಿಯ ರಾಜ್ಯಗಳ ಅಧಿಕಾರ ಮೊಟಕು

ಗಣಿ ನಿಧಿಗೆ ಕೇಂದ್ರದ ಕಣ್ಣು

ಪ್ರಜಾವಾಣಿ ವಾರ್ತೆ

ನವದೆಹಲಿ: ಜಿಲ್ಲಾ ಖನಿಜ ನಿಧಿಯಿಂದ (ಡಿಎಂಎಫ್) ಹಣ ಮಂಜೂರು ಮಾಡುವ ಅಥವಾ ಈ ನಿಧಿಯಿಂದ ಯಾವುದೇ ವೆಚ್ಚಕ್ಕೆ ಅನುಮೋದನೆ ನೀಡುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ರದ್ದುಪಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಗಣಿ ಗುತ್ತಿಗೆದಾರರಿಂದ ಪಡೆಯುವ ಕಡ್ಡಾಯ ದೇಣಿಗೆಯ ಮೂಲಕ ಈ ನಿಧಿ ರೂಪುಗೊಳ್ಳುತ್ತದೆ. 'ಈ ನಿಧಿಯ ಎಲ್ಲ ಹಕ್ಕುಗಳನ್ನು ಕೇಂದ್ರ ಸರ್ಕಾರವು ತನ್ನ ವಶಕ್ಕೆ ಪಡೆಯುವುದು ರಾಜ್ಯಗಳ ಹಕ್ಕುಗಳ ಉಲ್ಲಂಘನೆ. ಇದು ದೇಶದ ಒಕ್ಕೂಟ ವ್ಯವಸ್ಥೆಯನ್ನೇ ಬಾಧಿಸಲಿದೆ' ಎಂದು ವಿರೋಧ ಪಕ್ಷಗಳು ಆಕ್ಷೇಪಿಸುವ ಸಾಧ್ಯತೆ ಇದೆ. ಹಾಗಾಗಿ, ಕೇಂದ್ರದ ನಿರ್ಧಾರವು ರಾಜಕೀಯ ಬಿರುಗಾಳಿ ಎಬ್ಬಿಸಬಹುದು ಎನ್ನಲಾಗಿದೆ.

ಆದರೆ, ಖನಿಜ ಸಚಿವಾಲಯವು ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ. ಈ ಹಣವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಿತ್ತೋ ಅದರ ಬದಲಿಗೆ ಬೇರೆ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ಎಂದು ದೂರುಗಳು ಬಂದಿವೆ. ಹಾಗಾಗಿ, ಈ ಹೆಜ್ಜೆ ಇಡುವುದು ಕೇಂದ್ರ ಸರ್ಕಾರಕ್ಕೆ ಅಗತ್ಯವಾಗಿತ್ತು ಎಂದು ಹೇಳಿದೆ.

ಗಣಿ ಪ್ರದೇಶ ಅಭಿವೃದ್ಧಿಗೆ ಬಳಕೆ

ಎಂಎಂಡಿಆರ್ (ತಿದ್ದುಪಡಿ) ಕಾಯ್ದೆ 2015ರ ಪ್ರಕಾರ, ರಾಜ್ಯ ಸರ್ಕಾರವು ಎಲ್ಲ ಜಿಲ್ಲೆಗಳಲ್ಲಿ ಕಡ್ಡಾಯವಾಗಿ ಜಿಲ್ಲಾ ಖನಿಜ ಪ್ರತಿಷ್ಠಾನಗಳನ್ನು ಸ್ಥಾಪಿಸಬೇಕು. ಗಣಿ ಗುತ್ತಿಗೆದಾರರು ಸರ್ಕಾರಕ್ಕೆ ನೀಡುವ ರಾಯಧನದ ಹೊರತಾಗಿ, ಡಿಎಂಎಫ್‌ಗೆ ಕೊಡುಗೆ ನೀಡಬೇಕು. ಹೀಗೆ ಸಂಗ್ರಹಿಸಿದ ಹಣವು ಗಣಿಬಾಧಿತ ಪ್ರದೇಶ ಹಾಗೂ ಜನರ ಅಭಿವೃದ್ಧಿ/ ಪುನರ್ವಸತಿಗೆ ಬಳಕೆಯಾಗಬೇಕು. ಗಣಿ ಬಾಧಿತ ಪ್ರದೇಶದಲ್ಲಿ ಕುಡಿಯುವ ನೀರು, ಶಾಲೆ ಹಾಗೂ ಇತರ ಮೂಲಸೌಕರ್ಯ ಕಲ್ಪಿಸಲು ಬಳಸಬೇಕು.

ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ ಅಡಿಯಲ್ಲಿ, ಡಿಎಂಎಫ್ ನಿಧಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿತ್ತು.

ಜಿಲ್ಲಾ ಖನಿಜ ನಿಧಿ ಆರಂಭವಾದ 2015–16ರಿಂದ ಇಲ್ಲಿಯವರೆಗೆ ₹ 50,499 ಕೋಟಿ ಹಣ ಸಂಗ್ರಹವಾಗಿದೆ. ಆದರೆ, ಆ ಪೈಕಿ ₹ 47,288 ಕೋಟಿ ಮೊತ್ತ ಬಿಡುಗಡೆಯಾಗಿದೆ. ಅದರಲ್ಲಿ ₹24,499 ಕೋಟಿ ಮೊತ್ತವು ಬೇರೆ ಯೋಜನೆಗಳಿಗೆ ಖರ್ಚಾಗಿದೆ ಎಂದು ಖನಿಜ ಸಚಿವಾಲಯ ತಿಳಿಸಿದೆ.

ಒಡಿಶಾದಲ್ಲಿ ಗರಿಷ್ಠ ಪ್ರಮಾಣದಲ್ಲಿ ಡಿಎಂಎಫ್ ಸಂಗ್ರಹವಾಗಿದೆ (₹13,728 ಕೋಟಿ). ಛತ್ತೀಸಗಡದಲ್ಲಿ ₹ 7,151 ಕೋಟಿ, ಜಾರ್ಖಂಡ್‌ನಲ್ಲಿ ₹ 6,974 ಕೋಟಿ ನಿಧಿ ಸಂಗ್ರಹವಾಗಿದೆ. ಕರ್ನಾಟಕದಲ್ಲಿ ಒಟ್ಟು 2,712 ಕೋಟಿ ನಿಧಿ ಸಂಗ್ರಹವಾಗಿದೆ. ಇದುವರೆಗೆ ₹ 944 ಕೋಟಿ ಖರ್ಚಾಗಿದ್ದು, ಬೇರೆ ಯೋಜನೆಗಳಿಗೆ ಬಳಕೆಯಾಗಿದೆ ಎಂದು ಹೇಳಿದೆ.

ಸಚಿವಾಲಯವು ಜುಲೈ 12ರಂದು ಹೊರಡಿಸಿದ ಆದೇಶದಲ್ಲಿ, 'ನಿಧಿಯನ್ನು ಯಾವುದೇ ರೂಪದಲ್ಲಿ ರಾಜ್ಯದ ಬೊಕ್ಕಸಕ್ಕೆ ವರ್ಗಾಯಿಸುವಂತಿಲ್ಲ ಅಥವಾ ಮುಖ್ಯಮಂತ್ರಿಗಳ ಪರಿಹಾರ ನಿಧಿಯಾಗಲೀ ಇಲ್ಲವೇ ಇತರ ಯೋಜನೆಗಳಿಗಾಗಲೀ ನೀಡುವಂತಿಲ್ಲ' ಎಂದು ಹೇಳಿತ್ತು.

ರಾಜ್ಯ ಸರ್ಕಾರವಾಗಲಿ ಅಥವಾ ರಾಜ್ಯಮಟ್ಟದ ಸಂಸ್ಥೆಯಾಗಲಿ, ಈ ನಿಧಿಯ ಬಳಕೆಗೆ ಅನುಮತಿ ನೀಡುವಂತಿಲ್ಲ ಎಂದೂ ಹೇಳಿತ್ತು.

ಆದರೆ, ಈ ನಿಧಿಯ ಉದ್ದೇಶವನ್ನೇ ಕೈಬಿಟ್ಟು ರಾಜ್ಯದ ಅನ್ಯ ಯೋಜನೆಗಳಿಗೆ ಹಣವು ವರ್ಗಾವಣೆಯಾಗುತ್ತಿರುವ ನಿದರ್ಶನಗಳು ಕಂಡುಬಂದಿದ್ದರಿಂದ ಈ ಹೆಜ್ಜೆ ಇಡಬೇಕಾಯಿತು ಎಂದು ಖನಿಜ ಸಚಿವಾಲಯದ ಆದೇಶ ತಿಳಿಸಿದೆ.

ಒಳ ಪುಟಗಳು

ಅತ್ಯಾಚಾರ; ತೀವ್ರಗೊಂಡ ತನಿಖೆ 9

ದಾಳಿ–ಪ್ರತಿದಾಳಿಯ ಪ್ರತೀಕಾರ 10

'ರಾಕಿ ಭಾಯಿ' ಜೊತೆ ಮನೆಯಲ್ಲೇ 'ಆಫ್ಟರ್ ಪಾರ್ಟಿ' 9

ನೆಹರೂ ಚಿತ್ರ ಕೈಬಿಟ್ಟ ಐಸಿಎಚ್‌ಆರ್: ಚಿದಂಬರಂ ಖಂಡನೆ 10

ಆಳ–ಅಗಲ

ಉಗ್ರರ ನಿಲುಕಿನಲ್ಲಿ ಅಫ್ಗನ್ ಶಸ್ತ್ರ ಕೋಠಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ಯಾರಾಲಿಂಪಿಕ್ಸ್: ಭಾರತಕ್ಕೆ ಎರಡು ಬೆಳ್ಳಿ

ಭಾವಿನಾಬೆನ್ ಪಟೇಲ್

ನಿಶಾದ್ ಕುಮಾರ್

ಟೋಕಿಯೊ (ಪಿಟಿಐ): ಭಾವಿನಾಬೆನ್ ಪಟೇಲ್ ಮತ್ತು ನಿಶಾದ್ ಕುಮಾರ್, ಪ್ಯಾರಾಲಿಂಪಿಕ್ಸ್‌ನಲ್ಲಿ ಭಾನುವಾರ ಭಾರತಕ್ಕೆ ಬೆಳ್ಳಿ ಪದಕಗಳನ್ನು ಗೆದ್ದುಕೊಟ್ಟರು. ವಿನೋದ್ ಕುಮಾರ್ ಅವರಿಗೆ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಕಂಚಿನ ಪದಕ ಒಲಿದಿತ್ತು. ಆದರೆ ಅವರನ್ನು ಎಫ್–52 ವಿಭಾಗಕ್ಕೆ ಸೇರಿಸಿದ್ದರ ಬಗ್ಗೆ ಆಕ್ಷೇಪ ಕೇಳಿಬಂದ ಹಿನ್ನೆಲೆಯಲ್ಲಿ ಪದಕವನ್ನು ತಡೆಹಿಡಿಯಲಾಗಿದೆ.

ಮಹಿಳೆಯರ ಕ್ಲಾಸ್–4 ವಿಭಾಗದ ಟೇಬಲ್ ಟೆನಿಸ್‌ನ ಫೈನಲ್‌ನಲ್ಲಿ ಭಾವಿನಾ ಬೆನ್ ಚೀನಾದ ಯಿಂಗ್ ಜೌ ಅವರಿಗೆ ಮಣಿದರು. ಪುರುಷರ ಟಿ–47 ವಿಭಾಗದ ಹೈಜಂಪ್‌ನಲ್ಲಿ ನಿಶಾದ್ ಕುಮಾರ್ ತಮ್ಮದೇ ಹೆಸರಿನಲ್ಲಿದ್ದ ಏಷ್ಯನ್ ದಾಖಲೆ ಮುರಿದರು. ಭಾವಿನಾಬೆನ್ ಗುಜರಾತ್‌ನವರು. ಅವರಿಗೆ ಅಲ್ಲಿನ ಸರ್ಕಾರ ₹ 3 ಕೋಟಿ ನಗದು ಬಹುಮಾನ ಘೋಷಿಸಿದೆ. ನಿಶಾದ್ ಹಿಮಾಚಲ ಪ್ರದೇಶದವರು. 12

ಗಣೇಶೋತ್ಸವ, ಪ್ರಾಥಮಿಕ ಶಾಲೆ ಆರಂಭ ಇಂದು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ಮತ್ತು 1 ರಿಂದ 8ರವರೆಗಿನ ಮಕ್ಕಳಿಗೂ ಭೌತಿಕ ತರಗತಿ ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆಯುವ ಕೋವಿಡ್ ತಾಂತ್ರಿಕ ತಜ್ಞರ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಕೇರಳದಲ್ಲಿ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರಿಕೆ ಆಗುತ್ತಿರುವುದರಿಂದ ರಾಜ್ಯದಲ್ಲಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಸಾರ್ವಜನಿಕ ಗಣೇಶೋತ್ಸವಕ್ಕೆ ಅವಕಾಶ ನೀಡಬೇಕು ಎಂದು ಸಾರ್ವಜನಿಕರಿಂದ ಒತ್ತಾಯ ಕೇಳಿ ಬರುತ್ತಿದ್ದರೂ, ಕೋವಿಡ್ ಸಂಭಾವ್ಯ ಮೂರನೇ ಅಲೆಯ ಭೀತಿ ಇರುವುದರಿಂದ ಸಲಹಾ ಸಮಿತಿಯ ನಿರ್ಧಾರವೇ ಅಂತಿಮವಾಗಲಿದೆ.

ಶಾಲೆ ಆರಂಭಕ್ಕೆ ಸಿದ್ಧತೆ: 'ರಾಜ್ಯದಲ್ಲಿ 1ರಿಂದ 8ರವರೆಗಿನ ಮಕ್ಕಳಿಗೂ ಭೌತಿಕ ತರಗತಿ ಆರಂಭಿಸಲು ಶಿಕ್ಷಣ ಇಲಾಖೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ತಾಂತ್ರಿಕ ಸಲಹಾ ಸಮಿತಿ ಒಪ್ಪಿಗೆ ನೀಡಿದ ಮರುದಿನದಿಂದಲೇ ಶಾಲೆಗಳನ್ನು ಆರಂಭಿಸುವ ಬಗ್ಗೆ ತೀರ್ಮಾನಿಸಲಾಗುವುದು' ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

> **ಖಾಸಗಿ ಶಾಲೆಗಳ ಶುಲ್ಕದ ವಿಚಾರವಾಗಿ ಮುಖ್ಯಮಂತ್ರಿ ಜೊತೆ ಪ್ರತ್ಯೇಕವಾಗಿ ಚರ್ಚಿಸಿ, ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಲಾಗುವುದು**
>
> **ಬಿ.ಸಿ.ನಾಗೇಶ್**
> ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

'ಶಿಕ್ಷಣ ಇಲಾಖೆಯ ಮುಂದೆ ಎರಡು ಆಯ್ಕೆಗಳಿವೆ. ಮೊದಲು 6ರಿಂದ 8ನೇ ತರಗತಿ ಆರಂಭಿಸಿ, ಮಕ್ಕಳು ಹಾಗೂ ಪೋಷಕರ ಪ್ರತಿಕ್ರಿಯೆ ಆಧರಿಸಿ 15 ದಿನಗಳ ಬಳಿಕ 1ರಿಂದ 5ನೇ ತರಗತಿ ಆರಂಭಿಸುವ ಯೋಚನೆಯಿದೆ. ಒಮ್ಮೆಗೆ 1ರಿಂದ 8ನೇ ತರಗತಿ ಆರಂಭಿಸುವ ಬಗ್ಗೆಯೂ ಯೋಚಿಸಲಾಗುತ್ತಿದೆ' ಎಂದಿದ್ದಾರೆ.

'ಮಕ್ಕಳ ಸಂಖ್ಯೆ ಕಡಿಮೆ ಇರುವ ಶಾಲೆಗಳಲ್ಲಿ ನಿರ್ವಹಣೆ ಸಮಸ್ಯೆ ಇಲ್ಲ. ಸುಮಾರು 10 ಸಾವಿರ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚು ಇದೆ. ಅಂಥ ಶಾಲೆಯಲ್ಲಿ ನಿರ್ವಹಣೆ ಸ್ವಲ್ಪ ಕಷ್ಟವಿದೆ. ಅಂಥವುಗಳಲ್ಲಿ ಪಾಳಿ ಪದ್ಧತಿ ಅಥವಾ ಬೇರೆ ಯಾವುದಾದರೂ ವಿಧಾನದ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ತಾಂತ್ರಿಕ ಸಲಹಾ ಸಮಿತಿ ನೀಡುವ ಅಭಿಪ್ರಾಯ ಹಾಗೂ ಮಾರ್ಗಸೂಚಿಯಂತೆ ಶಾಲೆಗಳು ಆರಂಭವಾಗಲಿದೆ' ಎಂದು ಅವರು ತಿಳಿಸಿದ್ದಾರೆ.

Google

ಪ್ರತಿ ದಿನ,
Google Play Protect
100 ಬಿಲಿಯನ್* ಇನ್‌ಸ್ಟಾಲ್‌ಮಾಡಿದ
ಆಪ್‌ಗಳನ್ನು ಸ್ಕ್ಯಾನ್‌ಮಾಡುತ್ತದೆ

ಹಾಗಾಗಿ ನೀವು ಸುರಕ್ಷಿತವಾಗಿರಬಹುದು **#SaferWithGoogle**



Safer with Google

*Google ಗ್ಲೋಬಲ್ ಇಂಟರ್ನಲ್ ಡೇಟಾ

ನೈಋತ್ಯ ರೈಲ್ವೆ

TENDER NOTICE No . B/E.29/ 2021-22/OT/08 Dated: 24.08.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ವಯಸ್ಸು ಮತ್ತು ಸ್ಥಿತಿ ಆಧಾರದ ಮೇಲೆ ಎಲ್ ಟಿ ಮತ್ತು ಎಎಮ್‌ಎಫ್ ಪ್ಯಾನೆಲ್‌ಗಳ ಬದಲಿ	Rs. 50,52,630/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–09–2021, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು / ಎಲೆಕ್ಟ್ರಿಕಲ್ ಬೆಂಗಳೂರು

PUB/160/AASP/PRB/SWR/2021-22

₹ 21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲಿರುವ ಏರ್‌ಟೆಲ್

ನವದೆಹಲಿ (ಪಿಟಿಐ): ಹಾಲಿ ಷೇರುದಾರರಿಗೆ ವಿಶೇಷ ಬೆಲೆಗೆ ಷೇರುಗಳ ಮಾರಾಟದ ಮೂಲಕ ಒಟ್ಟು ₹ 21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಭಾರ್ತಿ ಏರ್‌ಟೆಲ್ ಆಡಳಿತ ಮಂಡಳಿಯು ಭಾನುವಾರ ಒಪ್ಪಿಗೆ ನೀಡಿದೆ.

ಈ ಕ್ರಮವು ಏರ್‌ಟೆಲ್ ಕಂಪನಿಗೆ ದೂರಸಂಪರ್ಕ ಕ್ಷೇತ್ರದಲ್ಲಿನ ಸ್ಪರ್ಧೆ ಎದುರಿಸಲು ದೊಡ್ಡ ಮಟ್ಟದಲ್ಲಿ ನೆರವು ನೀಡಲಿದೆ ಎನ್ನಲಾಗಿದೆ. ಭಾರ್ತಿ ಏರ್‌ಟೆಲ್‌ನಲ್ಲಿ ಪ್ರವರ್ತಕರು ಶೇ 55.8ರಷ್ಟು, ಸಾರ್ವಜನಿಕರು ಶೇ 44.09ರಷ್ಟು ಷೇರುಗಳನ್ನು ಹೊಂದಿದ್ದಾರೆ.

ಏರ್‌ಟೆಲ್ ಕಂಪನಿಯು ಭಾರತದ ಎರಡನೆಯ ಅತಿದೊಡ್ಡ ಮೊಬೈಲ್ ಸೇವಾ ಕಂಪನಿ. ಜೂನ್ ವೇಳೆಗೆ ಈ ಕಂಪನಿಯು 35.2 ಕೋಟಿ ಗ್ರಾಹಕರನ್ನು ಹೊಂದಿತ್ತು.

ಕೃಷ್ಣ ಜನ್ಮಾಷ್ಟಮಿ: ಆರಾಧನೆಗೆ ನಗರ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ಬಂಧದೊಂದಿಗೆ ಸೋಮವಾರ ಕೃಷ್ಣ ಜನ್ಮಾಷ್ಟಮಿ ಆಚರಣೆಗೆ ನಗರದ ಧಾರ್ಮಿಕ ಕೇಂದ್ರಗಳು ಹಾಗೂ ದೇವಾಲಯಗಳು ಸಿದ್ಧತೆ ಮಾಡಿಕೊಂಡಿವೆ. ವಿವಿಧ ಸಂಘ–ಸಂಸ್ಥೆಗಳು ಮಕ್ಕಳಿಗೆ ವೇಷಭೂಷಣ ಸ್ಪರ್ಧೆ, ಗಾಯನ, ನೃತ್ಯ, ಪಾರಾಯಣ, ಭಜನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿವೆ.

ಇಸ್ಕಾನ್ ದೇವಸ್ಥಾನ, ಶಂಕರಪುರದ ಉತ್ತರಾದಿ ಮಠ ಸೇರಿದಂತೆ ಕೆಲವೆಡೆ ಭಾನುವಾರ ಸಹ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು.

ಬಸವನಗುಡಿಯ ಪುತ್ತಿಗೆ ಮಠದ ಗೋವರ್ಧನಗಿರಿ ಗುಹಾಲಯ ಕ್ಷೇತ್ರ, ವಿದ್ಯಾಪೀಠದ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ ಸೇರಿದಂತೆ ವಿವಿಧ ಧಾರ್ಮಿಕ ಕೇಂದ್ರಗಳು ಹಾಗೂ ದೇವಾಲಯಗಳು ಹಬ್ಬದ ಆಚರಣೆಗೆ ಸಜ್ಜುಗೊಂಡಿವೆ. ಕೃಷ್ಣ–ರಾಧೆಯ ವಿಗ್ರಹಗಳಿಗೆ ವಿಶೇಷ ಅಲಂಕಾರ ಮಾಡಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ.ಸೋಮವಾರಮುಂಜಾನೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ನೇರ ಪ್ರಸಾರ ಮಾಡಲು ಆಡಳಿತ ಮಂಡಳಿಗಳು ಮುಂದಾಗಿವೆ.

ಸಂಜಯನಗರದ ರಾಧಾಕೃಷ್ಣ ದೇವಸ್ಥಾನ, ದೊಡ್ಡ ಬೊಮ್ಮಸಂದ್ರದ ಕೃಷ್ಣ ದೇವಾಲಯ, ಇಂದಿರಾನಗರದ ಕೃಷ್ಣ ದೇವಾಲಯ, ಮಲ್ಲೇಶ್ವರದ ವೇಣುಗೋಪಾಲ ಸ್ವಾಮಿ ದೇವಸ್ಥಾನ, ಕಾಡುಗೊಂಡನಹಳ್ಳಿಯ ಲಕ್ಷ್ಮೀ ನರಸಿಂಹ ಮತ್ತು ವೇಣುಗೋಪಾಲ ಸ್ವಾಮಿ ದೇವಸ್ಥಾನ, ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಇಸ್ಕಾನ್ ದೇವಾಲಯ ಸೇರಿದಂತೆ ನಗರದ ವಿವಿಧ ಕೃಷ್ಣ ದೇವಾಲಯಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ.

ಪೇಜಾವರ ಮಠವು ಇಲ್ಲಿನ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಯಕ್ಷಗಾನ ತಾಳ ಮದ್ದಲೆ ಆಯೋಜಿಸಿದೆ. ಉಡುಪಿಯ ಪುತ್ತಿಗೆ ಮಠವು ಬಸವನಗುಡಿಯ ಗೋವರ್ಧನಗಿರಿ ಗುಹಾಲಯದಲ್ಲಿ ಬೆಳಿಗ್ಗೆ 7.30ರಿಂದ ರಾತ್ರಿ 12 ಗಂಟೆಯವರೆಗೂ ವಿವಿಧ ಧಾರ್ಮಿಕ ವಿಧಿವಿಧಾನ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಂಜೆ 6.30ಕ್ಕೆ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅನುಗ್ರಹ ಸಂದೇಶ ನೀಡಲಿದ್ದಾರೆ.

ಸಂಭ್ರಮಿಸಿದ ಮಕ್ಕಳು: ಕೃಷ್ಣ ಜನ್ಮಾಷ್ಟಮಿಯ ಮುನ್ನಾದಿನವಾದ ಭಾನುವಾರ ಕೂಡ ಕೆಲ ಧಾರ್ಮಿಕ ಮತ್ತು ಶೈಕ್ಷಣಿಕ ಸಂಘ–ಸಂಸ್ಥೆಗಳು ಆನ್‌ಲೈನ್ ವೇದಿಕೆಯಲ್ಲಿ ರಾಧಾ–ಕೃಷ್ಣರ ವೇಷ ಸ್ಪರ್ಧೆಯನ್ನು ಆಯೋಜಿಸಿದ್ದವು. ಪೋಷಕರು ಮಕ್ಕಳಿಗೆ ರಾಧಾ–ಕೃಷ್ಣರ ವೇಷ ತೊಡಿಸಿ, ಸಂಭ್ರಮಿಸಿದರು. ಮೈಗೆ ನೀಲಿಬಣ್ಣ, ತಲೆಗೆ ಕಿರೀಟ, ಕೈಯಲ್ಲಿ ಕೊಳಲು ಹಿಡಿದ ಪುಟಾಣಿಗಳು ಕೃಷ್ಣನ ವಿವಿಧ ಭಂಗಿಯಲ್ಲಿ ನಿಂತು ಫೋಟೋ ಕ್ಲಿಕ್ಕಿಸಿಕೊಂಡರು. ಸೋಮವಾರ ಕೂಡ ಸ್ಪರ್ಧೆಯನ್ನು ನಡೆಸಲಾಗುತ್ತಿದೆ.

ಕೃಷ್ಣ ಜನ್ಮಾಷ್ಟಮಿ ಮುನ್ನಾದಿನವಾದ ಭಾನುವಾರ ಸಾರ್ವಜನಿಕರು ಕೆ.ಆರ್.ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಖರೀದಿಗೆ ಮುಗಿಬಿದ್ದಿದ್ದರು –ಪ್ರಜಾವಾಣಿ ಚಿತ್ರಗಳು

2 ಸಾವಿರ ವಿಗ್ರಹಗಳ ಅಲಂಕಾರ

ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಸಹಕಾರ ನಗರದಲ್ಲಿರುವ ತಿರುಮಲಾಚಾರ್ ಅವರು ತಮ್ಮ ನಿವಾಸದಲ್ಲಿ 2 ಸಾವಿರ ಕೃಷ್ಣನ ವಿಗ್ರಹಗಳನ್ನು ಅಲಂಕರಿಸಿ, ಪ್ರದರ್ಶನಕ್ಕೆ ಇರಿಸಿದ್ದಾರೆ. ದಸರಾ ಬೊಂಬೆಯ ಮಾದರಿಯಲ್ಲಿ ಹೂವು ಮತ್ತು ಹಣ್ಣಿನಿಂದ ಅಲಂಕಾರ ಮಾಡಿದ್ದಾರೆ. ಪುರಾತನ ಮತ್ತು ವಿಶೇಷ ಕೃಷ್ಣನ ವಿಗ್ರಹಗಳನ್ನು ಕೂಡ ಇರಿಸಿದ್ದಾರೆ. 80 ವರ್ಷದ ಅವರು ಪ್ರತಿವರ್ಷ ವಿಶೇಷ ರೀತಿಯಲ್ಲಿ ಕೃಷ್ಣನ ವಿಗ್ರಹಗಳನ್ನು ಅಲಂಕಾರ ಮಾಡುತ್ತಾ ಬಂದಿದ್ದಾರೆ.

ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ನಗರದ ನಾಯಂಡಹಳ್ಳಿ ಬಳಿ ಮಹಿಳೆಯೊಬ್ಬರು ಕೃಷ್ಣನ ವಿಗ್ರಹವನ್ನು ಖರೀದಿಸುತ್ತಿರುವ ದೃಶ್ಯ ಭಾನುವಾರ ಕಂಡುಬಂತು

ಸಹಕಾರ ನಗರದಲ್ಲಿ ತಿರುಮಲಾಚಾರ್ ಅವರು ಭಾನುವಾರ ತಮ್ಮ ನಿವಾಸದಲ್ಲಿ ಕೃಷ್ಣನ 2 ಸಾವಿರ ವಿಗ್ರಹಗಳನ್ನು ಅಲಂಕರಿಸಿ ಆರಾಧಿಸಿದರು

ಆನ್‌ಲೈನ್ ಮೂಲಕ ಕೃಷ್ಣನ ಆರಾಧನೆ

ನಗರದ ಇಸ್ಕಾನ್ ದೇವಾಲಯದಲ್ಲಿ ಭಾನುವಾರ ಮುಂಜಾನೆಯಿಂದ ರಾತ್ರಿಯವರೆಗೂ ವಿವಿಧ ಕಾರ್ಯಕ್ರಮಗಳು ನಡೆದವು. ಭಕ್ತರು ಆನ್‌ಲೈನ್ ಮೂಲಕವೇ ಕೃಷ್ಣನ ಪೂಜೆ ಮತ್ತು ಇತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪ್ರವಚನಗಳೂ ನಡೆದವು. ತಡರಾತ್ರಿಯವರೆಗೂ ನಿರಂತರ ಕಾರ್ಯಕ್ರಮಗಳು ಜರುಗಿದವು. ಸೋಮವಾರ ಕೂಡ ಬೆಳಿಗ್ಗೆಯಿಂದ ರಾತ್ರಿವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಕೋವಿಡ್ ನಿರ್ಬಂಧದಿಂದಾಗಿ ಭಕ್ತಾದಿಗಳಿಗೆ ಪ್ರವೇಶಕ್ಕೆ ಅವಕಾಶವಿಲ್ಲ. ಎಲ್ಲ ಕಾರ್ಯಕ್ರಮಗಳು www.iskconbangalore.org ಮೂಲಕ ವೀಕ್ಷಿಸಬಹುದಾಗಿದೆ ಎಂದು ಇಸ್ಕಾನ್ ತಿಳಿಸಿದೆ.

ಸಿ.ಎಂ ಜಂಟಿ ಕಾರ್ಯದರ್ಶಿಯಾಗಿ ಜಿ. ಜಗದೀಶ್ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಭಾನುವಾರ ಆದೇಶ ಹೊರಡಿಸಿದ್ದು, ಉಡುಪಿ ಜಿಲ್ಲಾಧಿಕಾರಿಯಾಗಿದ್ದ ಜಿ. ಜಗದೀಶ್ ಅವರನ್ನು ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಂ. ಕೂರ್ಮಾ ರಾವ್ ಅವರನ್ನು ಉಡುಪಿ ಜಿಲ್ಲಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ಹುದ್ದೆ ನಿರೀಕ್ಷೆಯಲ್ಲಿದ್ದ ಯಶವಂತ್ ವಿ. ಗಾಂವ್ಕರ್ ಅವರನ್ನು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕರನ್ನಾಗಿ ನೇಮಿಸಲಾಗಿದೆ.

ಜಿಎಸ್‌ಟಿ: ಕ್ಷಮಾದಾನ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಮಾಸಿಕ ವಿವರಗಳನ್ನು ತಡವಾಗಿ ಸಲ್ಲಿಸಿದವರು ಕಡಿಮೆ ಮೊತ್ತದ ದಂಡ ಪಾವತಿಸಿ ಕ್ಷಮಾದಾನ ಪಡೆದುಕೊಳ್ಳುವ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವಾಲಯವು ನವೆಂಬರ್ 30ರವರೆಗೆ ವಿಸ್ತರಿಸಿದೆ.

ವಿವರ ಸಲ್ಲಿಸುವುದನ್ನು ಬಾಕಿ ಇರಿಸಿಕೊಂಡವರು ಕಡಿಮೆ ಮೊತ್ತದ ದಂಡ ಪಾವತಿಸಿ ಕ್ಷಮಾದಾನ ಪಡೆಯುವ ಯೋಜನೆಯನ್ನು ಜಾರಿಗೆ ತರಲು ಜಿಎಸ್‌ಟಿ ಮಂಡಳಿಯು ಮೇ ತಿಂಗಳಿನಲ್ಲಿ ತೀರ್ಮಾನಿಸಿತ್ತು.

ತೆರಿಗೆ ಪಾವತಿಸಬೇಕಾಗಿಲ್ಲದವರು 2017ರ ಜುಲೈನಿಂದ 2021ರ ಏಪ್ರಿಲ್‌ವರೆಗಿನ ಜಿಎಸ್‌ಟಿಆರ್–3ಬಿ ವಿವರ ಸಲ್ಲಿಸುವುದು ಬಾಕಿ ಇದ್ದರೆ, ಪ್ರತಿ ವಿವರಕ್ಕೆ ₹ 500 ದಂಡ ಪಾವತಿಸಬೇಕು. ತೆರಿಗೆ ಪಾವತಿಸಬೇಕಾದವರು ವಿವರ ಸಲ್ಲಿಸುವುದನ್ನು ಬಾಕಿ ಇರಿಸಿಕೊಂಡಿದ್ದರೆ, ಪ್ರತಿ ವಿವರಕ್ಕೆ ₹ 1,000 ದಂಡ ಪಾವತಿಸಬೇಕು. ಬಾಕಿ ಇರುವ ವಿವರಗಳನ್ನು ಆಗಸ್ಟ್ 31ರೊಳಗೆ ಸಲ್ಲಿಸಬೇಕಿತ್ತು.

‘ಈಗ ಈ ಸೌಲಭ್ಯ ಪಡೆಯಲು ಇರುವ ಕಡೆಯ ದಿನಾಂಕವನ್ನು ಆಗಸ್ಟ್ 31ರ ಬದಲಿಗೆ ನವೆಂಬರ್ 30ರವರೆಗೆ ವಿಸ್ತರಿಸಲಾಗಿದೆ’ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಮನೆ ಬಾಗಿಲಿಗೆ ಆನ್‌ಲೈನ್ ಮಾರುಕಟ್ಟೆ ಮೂಲಕ ಹಣ್ಣು ತರಕಾರಿ ಒದಗಿಸುವ ಯೋಜನೆಗೆ ಚಾಲನೆ: ತೋಟಗಾರಿಕೆ ಸಚಿವ ಮುನಿರತ್ನ, ಅಧ್ಯಕ್ಷತೆ: ಶಾಸಕ ಉದಯ್ ಗರುಡಾಚಾರ್, ಆಯೋಜನೆ ಮತ್ತು ಸ್ಥಳ: ಹಾಪ್‌ಕಾಮ್ಸ್, ಲಾಲ್‌ಬಾಗ್, ಬೆಳಿಗ್ಗೆ 7

ಪ್ರಶಸ್ತಿ ಪ್ರದಾನ: ‘ಎಂ. ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ’ ಪುರಸ್ಕೃತರು: ಸಯ್ಯದ್ ಇಸಾಕ್, ‘ನಂಜನಗೂಡು ತಿರುಮಲಾಂಬ ಪ್ರಶಸ್ತಿ’ ಪುರಸ್ಕೃತರು: ಆರ್. ಪೂರ್ಣಿಮಾ, ಪ್ರಶಸ್ತಿ ಪ್ರದಾನ: ಎಸ್. ಸುರೇಶ್ ಕುಮಾರ್, ಅಧ್ಯಕ್ಷತೆ: ಡಾ. ವಸುಂಧರಾ ಭೂಪತಿ, ಮುಖ್ಯ ಅತಿಥಿಗಳು: ಪ್ರಕಾಶ್ ಕಂಬತ್ತಳ್ಳಿ, ಉಪಸ್ಥಿತಿ: ಎ.ಆರ್. ಉಡುಪ, ಸೃಷ್ಟಿ ನಾಗೇಶ್, ನ. ರವಿಕುಮಾರ್, ಆಯೋಜನೆ: ಕರ್ನಾಟಕ ಪ್ರಕಾಶಕರ ಸಂಘ, ಸ್ಥಳ: ಜ್ಞಾನಯೋಗ ಮಂದಿರ, ಎಂ.ಸಿ. ಬಡಾವಣೆ, ವಿಜಯನಗರ, ಬೆಳಿಗ್ಗೆ 11

ಡಾ. ಚಂದ್ರಶೇಖರ ಕಂಬಾರರ ನಾಟಕೋತ್ಸವ: ಮುಖ್ಯ ಅತಿಥಿಗಳು: ರಾಜೇಶ್ ಕಶ್ಯಪ್, ಗಣೇಶ್ ಯಾಜಿ, ರಜನಿ ಕುಮಾರ್, ಗೀತಾ ವಿಶ್ವನಾಥ್, ಎಸ್. ರಾಜಗೋಪಾಲ್, ನಾಟಕ ಪ್ರದರ್ಶನ: ‘ಹರಕೆಯ ಕುರಿ’, ಆಯೋಜನೆ: ಮೀನಾಕ್ಷಿ ಕಲಾವೃಂದ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡ ನಗರ, ಮಧ್ಯಾಹ್ನ 3

ಸಮಾಜಮುಖಿ ಡಾ.ಕೆಎಂಎಸ್: ಕೆ. ಮರುಳಸಿದ್ದಪ್ಪ ಅವರಿಗೆ ಗೌರವ ಕಾರ್ಯಕ್ರಮ, ಗೋಷ್ಠಿ 1: ‘ಡಾ.ಕೆಎಂಎಸ್ ಅವರ ರಂಗಚಿಂತನೆ ಮತ್ತು ನಾಟಕ ಅನುವಾದಗಳು, ಅಧ್ಯಕ್ಷತೆ: ಪ್ರೊ.ಎಸ್.ಆರ್. ರಮೇಶ್, ಉಪನ್ಯಾಸಕರು: ಸಿ. ಬಸವಲಿಂಗಯ್ಯ, ಕೆ.ವೈ. ನಾರಾಯಣಸ್ವಾಮಿ, ಗೋಷ್ಠಿ 2: ಡಾ.ಕೆಎಂಎಸ್ ಮತ್ತು ಜನಪರ ಚಳವಳಿ, ಅಧ್ಯಕ್ಷತೆ: ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಉಪನ್ಯಾಸಕರು: ಎಸ್. ಚಂದ್ರಶೇಖರ್, ಶೂದ್ರ ಶ್ರೀನಿವಾಸ್, ವಿಮಲಾ ಕೆ.ಎಸ್., ಡಾ.ಕೆಎಂಎಸ್ ಅವರೊಂದಿಗೆ ಸಂವಾದ, ಭಾಗವಹಿಸುವವರು: ಪ್ರಸನ್ನ, ಟಿ.ಎಸ್. ನಾಗಾಭರಣ, ಎಸ್. ಜಾಫೆಟ್, ಎನ್. ಗಾಯತ್ರಿ, ಆಯೋಜನೆ: ಡಾ.ಕೆಎಂಎಸ್ ಅಭಿಮಾನಿಗಳ ಬಳಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಮಧ್ಯಾಹ್ನ 3

ಕೆ. ಮರುಳಸಿದ್ದಪ್ಪ

ಶ್ರೀಕೃಷ್ಣ ಜಯಂತಿ ಅಂಗವಾಗಿ ಯಕ್ಷಗಾನ ತಾಳಮದ್ದಲೆ: ಪ್ರಸಂಗ: ‘ವಿದುರಾತಿಥ್ಯ’, ಅರ್ಥದಾರಿಗಳು: ವಿದ್ಯೇಶತೀರ್ಥ ಶ್ರೀಪಾದರು, ಕೃಷ್ಣ: ವಿಶ್ವಪ್ರಸನ್ನತೀರ್ಥ ಶ್ರೀಪಾದರು, ವಿದ್ವಾನ್ ಉಮಾಕಾಂತ್ ಭಟ್, ವಿದ್ವಾನ್ ಎ. ಹರಿದಾಸ್ ಭಟ್, ಆಯೋಜನೆ: ಪೇಜಾವರ ಮಠ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ (ಆನ್‌ಲೈನ್‌ನಲ್ಲಿ ನೇರ ಪ್ರಸಾರ), ಮಧ್ಯಾಹ್ನ 3.30

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಶ್ರೀಕೃಷ್ಣ ಜನ್ಮಾಷ್ಟಮಿ: ಮುಖ್ಯ ಅತಿಥಿ: ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ವಿಜಯಭಾರತಿ ವಿದ್ಯಾಲಯ, ಬೆಳಿಗ್ಗೆ 9.30

ಭಗವದ್ಗೀತೆ ಕಲಿಕಾ ಯೋಜನೆಗೆ ಚಾಲನೆ: ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಆಯೋಜನೆ: ವಿಶ್ವ ಹಿಂದೂ ಪರಿಷತ್, ಸ್ಥಳ: ಭಗವದ್ಗೀತಾ ಮಂದಿರ, ವಿಶ್ವ ಶಾಂತಿ ಆಶ್ರಮ, ನೆಲಮಂಗಲ, ಮಧ್ಯಾಹ್ನ 3

CSB Bank

PUBLIC NOTICE ON AUCTION OF PLEDGED GOLD ORNAMENTS

The borrower/s in specific and interested bidders in general are hereby informed that on account of non-repayment of Bank's dues by the borrowers as under despite the payment notice and recall/auction notice issued by the Bank, the gold ornaments pledged with the bank as security by the respective borrowers for the loans availed by them will be sold in public auction on "as is where is" and "non- recourse" basis through e-auction portal http://csbgold.auctiontiger.net on 3rd September, 2021 at 03:00 p.m . The auction may be adjourned to any other later date at the discretion of the bank upon publication of the same in the Bank's notice board. The borrowers are hereby further informed that the gold ornaments will be disposed off by private sale if the public auction is not successful and if there is a further balance to be recovered thereafter, legal action will be initiated against the borrower/s for recovery of the balance amounts due to the bank.

S.No.	Branch	Account Name	Client ID	No. of Acc.	Bal. Outstanding as on 26-08-2021	Weight (grams)
374	Kanakapura	SAMPATH KUMAR T N	4176768	1	196203.75	48
375	Kanakapura	SANTHOSHA .	4150843	1	311189.75	76
376	Kanakapura	SANTOSH .	3992137	1	280492.75	68
377	Kanakapura	SARADAMMA .	3948540	1	164149.75	40
378	Kanakapura	SARASAMMA .	3836445	1	145362.75	35
379	Kanakapura	SARITHA MS .	3833424	1	185308.75	45
380	Kanakapura	SAROJA .	4083490	1	383564.75	98
381	Kanakapura	SHARATH KUMAR T S .	4150856	1	211365.75	52
382	Kanakapura	SHIVA	4016629	2	266297.5	73
383	Kanakapura	SHIVAKUMAR S	4055923	1	54256.75	19
384	Kanakapura	SHIVALINGAIAH .	3913464	1	39684.75	14
385	Kanakapura	SHIVAMMA	3925028	1	100295.75	27.7
386	Kanakapura	SHIVAMMA .	3984452	1	154261.75	37.8
387	Kanakapura	SHIVAPPA M C	4071122	3	166384	42
388	Kanakapura	SHIVARAMU .	3869345	1	22742.75	8
389	Kanakapura	SHIVARUDRA	4002986	1	654049.75	170
390	Kanakapura	SHIVARUDRAMMA	3837950	1	183131.75	44.5
391	Kanakapura	SHUBHA SRI	4207552	1	242760.75	70.5
392	Kanakapura	SRIDHARA	4133465	1	45093.75	11
393	Kanakapura	SRINIVAS G V	4134868	1	885982.75	216.2
394	Kanakapura	SUDHA .	4149853	1	219372.75	54
395	Kanakapura	SUDHA N .	4202370	1	178253.75	43.2
396	Kanakapura	SUKANYA	4101442	1	393143.75	101.5
397	Kanakapura	SUMA A	3729847	1	207946.75	51
398	Kanakapura	SUNANDA M C .	1389352	1	26760.75	10
399	Kanakapura	SUNIL .	4003179	1	159995.75	39
400	Kanakapura	SUNIL KUMAR	3997645	1	156691.75	38.5
401	Kanakapura	SUNIL KUMAR	3907252	2	696366.5	174
402	Kanakapura	SUNIL M	4211783	1	220712.75	54
403	Kanakapura	SUNITHA.K .	3601143	1	198387.75	49
404	Kanakapura	SUSHEELAMMA	4204812	1	71551.75	18
405	Kanakapura	SUSHILA .	3912220	1	198900.75	48
406	Kanakapura	SWAMY D .	3742018	1	226365.75	65
407	Kanakapura	SYED ILYAS PASHA .	2804509	1	293215.75	71.5
408	Kanakapura	SYED MUNAWAR .	19172	1	206163.75	69.3
409	Kanakapura	THIMMEGOWDA S	4210481	1	377193.75	92
410	Kanakapura	USHA K S .	3958922	1	227375.75	60
411	Kanakapura	VEENA K S	7045072	1	165907.75	44
412	Kanakapura	VEERABHADRACHARI .	3918551	1	146771.75	36
413	Kanakapura	VENKATESH	3974969	1	191135.75	46
414	Kanakapura	YASHASWINI D	4139016	1	437410.75	105
415	Devanahalli	AMARANATH J	7251740	2	60912.5	20.6
416	Devanahalli	DHANUSHREE S	3983183	2	466382.5	120.4
417	Devanahalli	KEPANNA . .	3954624	1	20324.75	5.6
418	Devanahalli	MOHAN B N	7242055	2	480289.5	124.9
419	Devanahalli	MUNEGOWDA .	3959028	1	107199.75	27.7
420	Devanahalli	NARAYANASWAMY .	4021189	1	153859.75	39
421	Devanahalli	SHANKAR LAL	2707097	1	768593.75	206
422	Devanahalli	VENKATARAJA N	7305821	1	47358.75	13

For more details/account wise information borrowers/interested bidders may contact respective branches and for participating in the auction, please visit/login to the e-auction portal http://csbgold.auctiontiger.net

Authorised Officer
CSB Bank

Bangalore | August 29, 2021

COFFEE DAY Brewing new possibilities.

ಕಾಫೀ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್.

ನೊಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ: 23/2, ಕಾಫೀ ಡೇ ಸ್ಕ್ವೇರ್, ವಿಠ್ಠಲ ಮಲ್ಯ ರಸ್ತೆ, ಬೆಂಗಳೂರು – 560 001, ಕರ್ನಾಟಕ, ಭಾರತ
ಫೋನ್: +91 80 4001 2345; ಫ್ಯಾಕ್ಸ್: +91 80 4001 2650;
ವೆಬ್‌ಸೈಟ್: www.coffeeday.com; ಇಮೇಲ್: investors@coffeedaygroup.com
ಕಾರ್ಪೊರೇಟ್ ಐಡೆಂಟಿಫಿಕೇಶನ್ ನಂಬರ್: L55101KA2008PLC046866

ಕಾಫೀ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್‌ನ 13ನೇ ವಾರ್ಷಿಕ ಮಹಾಸಭೆಯ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ,

1. ಕಂಪನಿಯ 13ನೇ ವಾರ್ಷಿಕ ಮಹಾಸಭೆಯನ್ನು (ಎಜಿಎಂ) ಬುಧವಾರ, 22ನೇ ಸೆಪ್ಟೆಂಬರ್ 2021 ರಂದು ಬೆಳಗ್ಗೆ 11:00 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ) ಅಥವಾ ಇತರೆ ಆಡಿಯೋ ವಿಷುಯಲ್ ಮಾಧ್ಯಮಗಳ (ಒಎವಿಎಂ) ಐಎಸ್‌ಟಿ ವಿಡಿಯೋ ಕಾನ್ಫರೆನ್ಸ್ ('ವಿಸಿ')/ಇತರೆ ಆಡಿಯೋ ವಿಷುಯಲ್ ಮಾಧ್ಯಮಗಳ ('ಒಎವಿಎಂ') ('ಇ-ಎಜಿಎಂ') ಮುಖಾಂತರ ಕೈಗೊಳ್ಳಲಾಗುತ್ತಿದ್ದು, ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರುಗಳ ಭೌತಿಕ ಹಾಜರಾತಿ ಇಲ್ಲದೆಯೇ ಸದರಿ ಸಭೆಯಲ್ಲಿ ಎಜಿಎಂ ನೋಟಿಸ್‌ನಲ್ಲಿ ('ನೋಟಿಸ್') ನಿಗದಿಪಡಿಸಲಾಗಿರುವ ಸಾಮಾನ್ಯ ವ್ಯಾಪಾರ ವಹಿವಾಟುಗಳನ್ನು ಚರ್ಚಿಸಲಾಗುತ್ತದೆ.

2. ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 108 ಅನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') (ಲಿಸ್ಟಿಂಗ್ ಆಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಾವಳಿಗಳು, 2015ರ ನಿಯಮಾವಳಿ 44 ಅನ್ನು ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಪ್ರಕಾರ ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ದಿನಾಂಕ ಮೇ 5, 2020ರ ಸುತ್ತೋಲೆಯನ್ನು ದಿನಾಂಕ ಏಪ್ರಿಲ್ 8, 2020 ಹಾಗೂ ಏಪ್ರಿಲ್ 13, 2020ರ ಸುತ್ತೋಲೆಗಳೊಂದಿಗೆ ('ಎಂಸಿಎ ಸುತ್ತೋಲೆಗಳು') ಓದಿಕೊಂಡಂತೆ ಪ್ರದತ್ತವಾದ ಇನ್ನಿತರ ಅನ್ವಯಿಕ ನಿಯಮಗಳು, ಸೆಬಿ ಹೊರಡಿಸಿರುವ ದಿನಾಂಕ ಮೇ 12, 2020ರ ಸುತ್ತೋಲೆ ಮತ್ತು ನಿರಂತರ ಸುತ್ತೋಲೆ ಸಾಮಾನ್ಯ ಸುತ್ತೋಲೆ ನಂ. 02/2021 ದಿನಾಂಕ 13.01.2021 [illegible]

3.–11. [illegible]

ದಿನಾಂಕ : 27ನೇ ಆಗಸ್ಟ್ 2021
ಸ್ಥಳ : ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

REAL ESTATE BUYING

Sites

Anjanapura

BDA-SITES WANTED @ Banashankari VI Stage Vishweshwraiah Layout, Jayanagar, Anjanapura, Kempegowda Layout 20x30, 30x40, 40x60, 50x80 Imediate Settlement Call:9741072999

RENTAL PROPERTIES

Accommodation Available

Commercial

COMMERCIAL SPACE available on Lease/Rent in Banashankari 6th Stage, 1st Block, 60Ft Road, near Sri Convention Centre, around 2700Sft. in first floor, Ideal for IT Companies or Small, Medium Enterprises. Power, Lift, Security available 24x7, with Vehicle Parking space. Scenic with nature adjacent to Turahalli Forest. Interested contact 9945427003

BUSINESS

Business to Business

Consultants

SAI RAM,I CA.SHEELA PILLAI D intend to procure the goodwill of M/s V T GOVARDHAN & Company and M/s G S & Company.Objections may be sent to SIRC of ICAI,ICAI BHAWAN,122, M G ROAD,Nungambakkam,Chennai 600034.

Finance

AISHWARYA GROUP (Bengaluru) Invest Min.20K to 5-Lakhs in Trading, Multiple Businesses. Weekly/ Monthly-10% Secured Fixed Returns. Investors, Referral Welcome.Good Regular Income. Phone:-7892818780.

EDUCATIONAL

Admission

DIRECT FINAL/ REGULAR:Ph.D/ M.Phil/LL.B/ (3/5 Years)/ B.Tech/ Diploma/BAMS/BHMS/ NURSING/ B.Pharma/ D.Pharma/B.Sc (MLT/ Audiology/ Ophthalmology/ Orthopedics/ Renal Etc.) GOVT Recognised, Limited Seats, Join Immediately, Asha Institute,Bangalore:9448460103

JOB OPPORTUNITIES

Marketing & Sales

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

WANTED 200 candidates for field cum sales executive and tele-callers for dry fruits B2B whole sale company in Bangalore. 6366283318

Part-Time Jobs

LIMITED MNC COMPANY Lost Job, Provide Work From Home Earn 30K to35K: 7019215243/ 9886641282

PERSONAL

Change of Name

I, ABHILASH KUMAR, residing at: No. 235, Divya Paradise, 1st Main, 4th Cross, Naidu Layout, Chikkalasandra, Bengaluru-560061 have changed my name to ABHILASH KUMAR SOANS vide Affidavit dated 27.08.2021, sworn to before Notary L.Puttaraju, Bengaluru

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE WWW.DHCLASSIFIEDS.COM

ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION CONTACT 9880856233 | 9886213331
Email: santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಜಿಬಿಎಂಎ ಅಗತ್ಯಗಳನ್ನು ಪೂರೈಸುವಲ್ಲಿ 2020ರ ಬಿಬಿಎಂಪಿ ಕಾಯ್ದೆ ವಿಫಲ ● ಹೊಸ ಶಾಸನಕ್ಕೆ ತಜ್ಞರ ಒತ್ತಾಯ

ಸಮಗ್ರ ಮೆಟ್ರೊಪಾಲಿಟನ್ ಆಡಳಿತ ಮರೀಚಿಕೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಜಗತ್ತಿನಲ್ಲಿ ಅತ್ಯಂತ ತ್ವರಿತವಾಗಿ ಬೆಳೆಯುತ್ತಿರುವ ನಗರಗಳಲ್ಲೊಂದಾದ ಬೆಂಗಳೂರು ಮಹಾನಗರದ (ಮೆಟ್ರೊಪಾಲಿಟನ್) ಆಡಳಿತಕ್ಕೆ ಪ್ರತ್ಯೇಕ ಹಾಗೂ ಸಮಗ್ರ ಶಾಸನ ಬೇಕು ಎಂಬುದು ದಶಕಗಳ ಬೇಡಿಕೆ. ಈ ಉದ್ದೇಶದಿಂದಲೇ 2020ರಲ್ಲಿ ಬಿಬಿಎಂಪಿ ಕಾಯ್ದೆಯನ್ನು ರೂಪಿಸಲಾಗಿದ್ದು, ಅದರ ಜಾರಿಗಾಗಿಯೇ ಬಿಬಿಎಂಪಿ ಚುನಾವಣೆಯನ್ನು ಮುಂದೂಡಲಾಯಿತು. ಚುನಾಯಿತ ಆಡಳಿತ ವ್ಯವಸ್ಥೆ ಇಲ್ಲದೆ ಬಿಬಿಎಂಪಿ ಆಡಳಿತ ಒಂದು ವರ್ಷ ಪೂರೈಸುವ ಹೊಸ್ತಿಲಲ್ಲಿದೆ. ಈಗಲೂ ಈ ಮಹಾನಗರದ (ಮೆಟ್ರೋಪಾಲಿಟನ್) ಆಡಳಿತಕ್ಕೆ ಸಮಗ್ರ ಶಾಸನ ಕನಸಾಗಿಯೇ ಉಳಿದಿದೆ.

ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ 1992ರ ಧ್ಯೇಯೋದ್ದೇಶಗಳನ್ನು ಅಳವಡಿಸಲು 2020ರ ಬಿಬಿಎಂಪಿ ಕಾಯ್ದೆ ವಿಫಲವಾಗಿದೆ. ಮಹಾನಗರ ಯೋಜನಾ ಸಮಿತಿಯ (ಎಂಪಿಸಿ) ರಚನೆ ಮತ್ತು ಸಂರಚನೆ, ಮೆಟ್ರೋಪಾಲಿಟನ್ ಪ್ರದೇಶದ ವ್ಯಾಖ್ಯಾನ ಮತ್ತು ಈ ಪ್ರದೇಶಕ್ಕೆ ಕರಡು ಅಭಿವೃದ್ಧಿ ಯೋಜನೆ ಸಿದ್ಧಪಡಿಸುವ ವಿಧಿವಿಧಾನಗಳನ್ನು ನಿರೂಪಿಸಲು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 367ರಲ್ಲಿ ಗೊತ್ತುಪಡಿಸಿರುವ ನಿಬಂಧನೆಗಳು ಮಹಾನಗರ ಪ್ರದೇಶದ ಸಮರ್ಪಕ ಆಡಳಿತಕ್ಕೆ ಏನೇನೂ ಸಾಲುವುದಿಲ್ಲ. ಏಕೆಂದರೆ, ಸಂವಿಧಾನದ ಅನುಚ್ಛೇದ 243-ಪಿ (ಸಿ) ಮತ್ತು 243 ಜೆಡ್‌ಇಯಲ್ಲಿ ಹೇಳಲಾದ ಖಂಡಗಳನ್ನು ಸುಧಾರಣೆಯಿಲ್ಲದೆಯೇ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 367ರಲ್ಲಿ ಯಥಾವತ್ತಾಗಿ ಬಳಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ ನಗರಾಡಳಿತ ತಜ್ಞರು.

ಸಮಗ್ರ ಮೆಟ್ರೊಪಾಲಿಟನ್ ಶಾಸನವೇ ಏಕೆ?: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಪ್ರದೇಶಗಳನ್ನು ಬೆಂಗಳೂರು ಮಹಾನಗರ ಪ್ರದೇಶವೆಂದು (ಬಿಎಂಆರ್) 1985ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯಲ್ಲಿ ಗುರುತಿಸಲಾಗಿದೆ. ಈ ಸರಹದ್ದಿನ ವ್ಯವಸ್ಥಿತ ಮತ್ತು ಯೋಜಿತ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು (ಬಿಎಂಆರ್‌ಡಿಎ) ರಚಿತವಾಗಿದೆ. ಈ ಸಂಸ್ಥೆಯನ್ನು ಸಶಕ್ತಗೊಳಿಸಲು ಮೆಟ್ರೊಪಾಲಿಟನ್ ಆಡಳಿತದ ವಿಧಿವಿಧಾನಗಳನ್ನು ಸಮರ್ಪಕವಾಗಿ ಅಳವಡಿಸಿಕೊಂಡ ಸಮಗ್ರ ಶಾಸನ ಅವಶ್ಯ ಎನ್ನುವುದು ತಜ್ಞರ ಪ್ರತಿಪಾದನೆ.

'1976ರ ಕೆಎಂಸಿ ಕಾಯ್ದೆಗೆ ತಿದ್ದುಪಡಿ ತಂದು ಸೆಕ್ಷನ್ 503–ಬಿಯನ್ನು ಅಳವಡಿಸಲಾಗಿತ್ತು. ಬಿಬಿಎಂಪಿ ಕಾಯ್ದೆಯ ಸೆಕ್ಷನ್ 367ರಲ್ಲಿ ಇದನ್ನು ಯಥಾವತ್ತಾಗಿ ಸೇರಿಸಲಾಗಿದೆ. ಇದು ಸಾಲದು. ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರಕ್ಕಾಗಿ ಜನಸ್ನೇಹಿ ಆಡಳಿತ ನಿರ್ವಹಿಸಬಲ್ಲ ಸಮಗ್ರ ಶಾಸನ ವ್ಯವಸ್ಥೆ ಹೊಂದುವುದೇ ಸಮಯೋಚಿತ ಮತ್ತು ಸುಧಾರಿತ ಕ್ರಮ' ಎನ್ನುತ್ತಾರೆ ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್‌ನ ನಿರ್ದೇಶಕ ಪಿ.ಜಿ.ಶೆಣೈ.

'ಬಿಎಂಆರ್ ವ್ಯಾಪ್ತಿಯಲ್ಲಿ ಬಿಡಿಎ, ಬಿಬಿಎಂಪಿ, ಜಲಮಂಡಳಿ, ಬಿಎಂಟಿಸಿ, ಬಿಎಂಆರ್‌ಸಿಎಲ್ ಮುಂತಾದ ಸರ್ಕಾರಿ ಸಂಸ್ಥೆಗಳಿವೆ. ಒಂದು ಸಂಯೋಜಿತ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳ ಸಿದ್ಧಪಡಿಸುವಿಕೆ ಮತ್ತು ನಿರ್ವಹಣೆಗಾಗಿ ಇಡೀ ಬಿಎಂಆರ್ ವ್ಯಾಪ್ತಿಯನ್ನು 'ಬೃಹತ್ ಬೆಂಗಳೂರು ಮಹಾನಗರ ಪ್ರದೇಶ'ವೆಂದು (ಜಿಬಿಎಂಎ) ಗುರುತಿಸಿ, ಇದರ ಆಡಳಿತಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಯೋಜನಾ ಸಮಿತಿಯನ್ನು (ಜಿಬಿಎಂಪಿಸಿ) ರಚಿಸಿ, ಅದರ ಮೂಲಕ ಸಮನ್ವಯ ಮತ್ತು ಮೇಲ್ವಿಚಾರಣೆ ನಡೆಸುವುದು ಅತ್ಯವಶ್ಯಕ. ಇಂತಹ ವ್ಯವಸ್ಥೆಯಿಲ್ಲದೇ ಜಿಬಿಎಂಎ ವ್ಯಾಪ್ತಿಯ ವಿವಿಧ ಸಂಸ್ಥೆಗಳ ನಡುವೆ ಸಮನ್ವಯ ಕೊರತೆಯುಂಟಾಗಿ ಭೌತಿಕ, ಸಾಮಾಜಿಕ ಮತ್ತು ಆಡಳಿತಾತ್ಮಕ ಸಂಕೀರ್ಣತೆಗಳು ತಲೆದೋರುತ್ತಿವೆ. ಪೌರಾಡಳಿತಕ್ಕೆ ಸೀಮಿತವಾದ ಬಿಬಿಎಂಪಿ ಕಾಯ್ದೆಯು ಜಿಬಿಎಂಎ ಬೇಡಿಕೆಗಳನ್ನು ಪೂರೈಸದು' ಎಂದು ಅವರು ಅಭಿಪ್ರಾಯಪಡುತ್ತಾರೆ.

ಮಹಾನಗರ ಪ್ರದೇಶಗಳ ಆಡಳಿತದ ವಿಕಸನ: 'ದೇಶದ ಬಹುತೇಕ ನಗರ ಪಾಲಿಕೆಗಳ ಸುತ್ತಲಿನ ನಗರ ಕೇಂದ್ರಿತ ಬೆಳವಣಿಗೆಯು ಬಹುತೇಕವಾಗಿ ಗ್ರಾಮ ಪಂಚಾಯತಿ ವ್ಯಾಪ್ತಿಯೊಳಗೆ ವಿಸ್ತರಣೆಯಾಗುತ್ತಿದೆ. ಇಂತಹ ವಿಸ್ತೃತ ನಗರ ಕೇಂದ್ರಗಳಿಗೆ ನಗರ ಸೇವೆಗಳನ್ನು ಒದಗಿಸಲು ನಗರ ಪಾಲಿಕೆಗಳಗೆ ಸದ್ಯದ ಪರಿಸ್ಥಿತಿಯಲ್ಲಿ ಹೊರೆಯಾಗುತ್ತಿದ್ದು, ತಮ್ಮ ಅಧಿಕಾರದ ವ್ಯಾಪ್ತಿ ಮೀರಿದ ಜವಾಬ್ದಾರಿಗಳಿಂದ ನುಣುಚಿಕೊಳ್ಳುವುದು ಪಾಲಿಕೆಗಳಿಗೆ ಅನಿವಾರ್ಯವಾಗುತ್ತಿದೆ. ಸರಿಯಾದ ಮೆಟ್ರೊಪಾಲಿಟನ್ ಆಡಳಿತದ ಚೌಕಟ್ಟಿಲ್ಲದ ಕಾರಣ ನಗರದ ಬೆಳವಣಿಗೆ ಅಸ್ತವ್ಯಸ್ತವಾಗಿದೆ ಮತ್ತು ಅನಿಯಮಿತವಾಗಿದೆ. ಇದರ ಪರಿಣಾಮವಾಗಿ ಸಾರ್ವಜನಿಕ ಸೇವೆಗಳು ಮತ್ತು ಮೂಲಸೌಕರ್ಯಗಳ ಕುರಿತ ಅನೇಕ ಸಂಕೀರ್ಣ ನಿರ್ವಹಣಾ ಸಮಸ್ಯೆಗಳು ಉದ್ಭವಿಸುತ್ತಿವೆ' ಎಂದು ವಿಶ್ಲೇಷಿಸುತ್ತಾರೆ ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್‌ನ ನಿರ್ದೇಶಕ ಸಿ.ಆರ್. ರವೀಂದ್ರ.

'ದೇಶದಲ್ಲಿ ಬಿಎಂಆರ್‌ಡಿಎ ಸೇರಿದಂತೆ ಕೋಲ್ಕತ್ತಾ, ಚೆನ್ನೈ, ಮುಂಬೈ, ದೆಹಲಿ ರಾಜಧಾನಿ ಪ್ರದೇಶ, ಗುವಾಹಟಿ, ಆಂಧ್ರಪ್ರದೇಶ ರಾಜಧಾನಿ ಪ್ರದೇಶದ ಮಹಾನಗರ ಅಭಿವೃದ್ಧಿ ಪ್ರಾಧಿಕಾರಗಳಿಗೆ ಅನ್ವಯವಾಗುವ ಕಾನೂನುಗಳಲ್ಲಿ ಸಂವಿಧಾನದ ಅನುಚ್ಛೇದ 243-ಜೆಡ್‌ಇ ಎಂಪಿಸಿಯ ಬಗ್ಗೆ ಉಲ್ಲೇಖವಿಲ್ಲ. 2008ರ ಹೈದರಾಬಾದ್ ಮೆಟ್ರೋಪಾಲಿಟನ್ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯಡಿಯಲ್ಲಿ ಪ್ರಾಧಿಕಾರವು ಕಳುಹಿಸುವ ಕರಡು ಮೆಟ್ರೊಪಾಲಿಟನ್ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸುವ ಪೂರ್ವದಲ್ಲಿ ತೆಲಂಗಾಣ ಸರ್ಕಾರವು ಎಂಪಿಸಿಯೊಡನೆ ಸಮಾಲೋಚಿಸಿಯೇ ಮಂಜೂರಾತಿಯ ನೀಡಬೇಕೆಂದು ಹೇಳಿದೆ. ಪ್ರಸ್ತಾಪಿತ ನವ ಬೆಂಗಳೂರು ಆಡಳಿತ ಕಾಯ್ದೆಯಲ್ಲಿ, ಜಿಬಿಎಂಪಿಸಿಯು ಸಿದ್ಧಪಡಿಸುವ ಕರಡು ಅಭಿವೃದ್ಧಿ ಯೋಜನೆಯು ಅದರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವ ಬಿಎಂಆರ್‌ಎ ಮೂಲಕ ನಿರೂಪಿಸಲು ಸಾಂಸ್ಥಿಕ ಮತ್ತು ವ್ಯಾವಹಾರಿಕ ಚೌಕಟ್ಟನ್ನು ಒಳಗೊಂಡಿದೆ. ಇಂತಹ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವ ಪದ್ಧತಿಯನ್ನು ಕರ್ನಾಟಕ ಸರ್ಕಾರವು ಪ್ರಪ್ರಥಮ ಬಾರಿಗೆ ಜಾರಿಗೆ ತರಲು ಇದು ಸುಸಂದರ್ಭ' ಎಂದು ರವೀಂದ್ರ ವಿವರಿಸಿದರು.

ಬೆಂಗಳೂರಿನಲ್ಲಿ ಮೆಟ್ರೊಪಾಲಿಟನ್ ಆಡಳಿತ: 'ಕೆಎಂಸಿ ಕಾಯ್ದೆಯ ಸೆಕ್ಷನ್ 503–ಬಿ ಜಾರಿಯಾದ ಬಳಿಕ 2014ರ ಜನವರಿಯಲ್ಲಿ ಪ್ರಥಮ ಬಾರಿಗೆ ಬೆಂಗಳೂರು ಎಂಪಿಸಿಯನ್ನು ರಚಿಸಲಾಯಿತಾದರೂ ಬಿಎಂಪಿಸಿಯ ಕಾರ್ಯಾಚಾರಣೆಗೆ ಸರ್ಕಾರವು ಉತ್ಸಾಹವನ್ನೇ ತೋರಿಸಲಿಲ್ಲ. 2014ರ ಸೆಪ್ಟೆಂಬರ್‌ನಿಂದ 2016ರ ಫೆಬ್ರುವರಿ ಅಸ್ತಿತ್ವದಲ್ಲಿದ್ದ ಸಮಿತಿ ಸಭೆ ನಡೆಸದೆಯೇ ವಿಸರ್ಜನೆಗೊಂಡಿತು. ಸುದೀರ್ಘ ಕಾನೂನು ಹೋರಾಟದ ಬಳಿಕ 30 ಸದಸ್ಯರನ್ನು ಒಳಗೊಂಡ ಎರಡನೇ ಬಿಎಂಪಿಸಿ (ಇತ್ತೀಚಿನದು) 2018ರ ಜೂನ್ 8ರಂದು ರಚನೆಯಾಯಿತು. ಇದೂ ಸಹ ಅನೇಕ ಸಲ ಅನೌಪಚಾರಿಕವಾಗಿ ಸಭೆ ಸೇರಿತ್ತಾದರೂ ಐದಾರು ನಿಮಿಷಗಳಲ್ಲೇ ಅವು ಸಂಪನ್ನಗೊಂಡಿದ್ದವು' ಎಂದರು.

ಬೆಳೆಯುತ್ತಿರುವ ಬೆಂಗಳೂರು —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

'ಜಿಬಿಎಂಪಿಸಿ'ಯ ಅಧಿಕಾರ ಮತ್ತು ಕಾರ್ಯಗಳು

- ಮಹಾನಗರ ವ್ಯಾಪ್ತಿ ಪ್ರದೇಶಕ್ಕೆ 5-ವರ್ಷದ ಕರಡು ಅಭಿವೃದ್ಧಿ ಯೋಜನೆ ಸಿದ್ಧಪಡಿಸುವುದು.
- ಈ ಯೋಜನೆಯಲ್ಲಿ ಜಿಬಿಎಂಎ ವ್ಯಾಪ್ತಿ ಪ್ರದೇಶದ ಗ್ರಾಮೀಣ ಮತ್ತು ನಗರ ಭಾಗಗಳ ಭೂ ಉಪಯೋಗ ಯೋಜನೆ, ಅಭಿವೃದ್ಧಿ ಗುರಿಗಳು, ಧ್ಯೇಯೋದ್ದೇಶಗಳು, ನೀತಿಗಳು ಮತ್ತು ಆದ್ಯತೆಗಳನ್ನು ನಿರೂಪಿಸುವುದು
- ಕರಡು ಅಭಿವೃದ್ಧಿ ಯೋಜನೆಯ ಅನುಷ್ಠಾನ ನಿಯಂತ್ರಣ ಮತ್ತು ಉಸ್ತುವಾರಿಯನ್ನು ಜಿಬಿಎಂಪಿಸಿಯ ಮಾರ್ಗದರ್ಶನದಲ್ಲಿ ನಡೆಸುವುದು ಶಾಸನಾತ್ಮಕ ಚಟುವಟಿಕೆ. ಜಿಬಿಎಂಎ ವ್ಯಾಪ್ತಿಯ ಬಿಬಿಎಂಪಿ, ಇತರ ಪೌರ ಸಭೆಗಳು ಮತ್ತು ಗ್ರಾಮ ಪಂಚಾಯತಿಗಳ ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿ, ಪರಿಸರ ಸಂರಕ್ಷಣೆ ಮತ್ತು ಸ್ಥಳ ವಿಸ್ತಾರದ ಅಭಿವೃದ್ಧಿಯಂತಹ ಅಂಶಗಳ ಪ್ರಸ್ತುತತೆಯನ್ನು ಜಿಬಿಎಂಪಿಸಿಯು ಕಾಯ್ದುಕೊಳ್ಳಬೇಕು.
- 5 ವರ್ಷಗಳ ಕರಡು ಅಭಿವೃದ್ಧಿ ಯೋಜನೆಯನ್ನು 20 ವರ್ಷಗಳ 'ದೃಷ್ಟಿಕೋನ ಯೋಜನೆ'ಗೆ ಜೋಡಿಸಿಕೊಳ್ಳಬೇಕು. ಇದು ಇಡೀ ಜಿಬಿಎಂಎ ಪ್ರದೇಶದ ಅಭಿವೃದ್ಧಿ, ಪ್ರಾದೇಶಿಕ ಅಸಮತೋಲನ ನಿವಾರಣೆ, ಹಂತ ಹಂತವಾದ ಹೂಡಿಕೆ ಯೋಜನೆಯಂತಹ ಅಂಶಗಳನ್ನು ಒಳಗೊಂಡಿರಬೇಕು.
- ಬಿಬಿಎಂಪಿ, ಬಿಡಿಎ, ಬೆಂಗಳೂರು ಜಲಮಂಡಳಿ, ನಮ್ಮ ಮೆಟ್ರೊ, ಬಿಎಂಟಿಸಿ, ಇತ್ಯಾದಿ ಜಿಬಿಎಂಪಿಸಿಯ ಅಂಗ ಸಂಸ್ಥೆಗಳು ತಮ್ಮ ವಾರ್ಷಿಕ ಕಾರ್ಯಕಾರಿ ಯೋಜನೆ/ಅಭಿವೃದ್ಧಿ ಯೋಜನೆಗಳನ್ನು 5 ವರ್ಷದ ಕರಡು ಯೋಜನೆಯನ್ನು ಸರ್ಕಾರೇತರ ಸಂಸ್ಥೆಗಳು ಮತ್ತು ವೃತ್ತಿಪರ ತಾಂತ್ರಿಕ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಪ್ರತಿ ವರ್ಷವೂ ಪರಿಷ್ಕರಿಸಬೇಕು.

'ಬಿಎಂಆರ್‌ಎ ಮೇಲೆ ಜಿಬಿಎಂಪಿಸಿ ಉಸ್ತುವಾರಿ

ಜಿಬಿಎಂಪಿಸಿಯು ಬಿಎಂಆರ್‌ಎ ಕಾರ್ಯನಿರ್ವಹಣೆಯ ಪ್ರಮುಖ ನಿಯಂತ್ರಣ ಪ್ರಾಧಿಕಾರವಾಗಿರುತ್ತದೆ. ಬಿಡಿಎ ಸೇರಿದಂತೆ ಎಲ್ಲ ಸ್ಥಳೀಯ ಯೋಜನಾ ಪ್ರದೇಶಗಳ ಯೋಜನಾ ಪ್ರಾಧಿಕಾರಗಳು ಸಿದ್ದಪಡಿಸಿದ ಮಾಸ್ಟರ್ ಪ್ಲಾನ್‌ಗಳ ಅನುಮೋದನೆಗಾಗಿ ರಾಜ್ಯ ಸರ್ಕಾರದ ಅಧಿಕಾರವನ್ನು ಜಿಬಿಎಂಪಿಸಿಯು ಚಲಾಯಿಸುತ್ತದೆ.

ಬಿಎಂಆರ್‌ಎ ಸಲ್ಲಿಸುವ ಕರಡು ಅಭಿವೃದ್ಧಿ ಯೋಜನೆಗೆ ಜಿಬಿಎಂಪಿಸಿ 3 ತಿಂಗಳ ಅವಧಿಯಲ್ಲಿ ಅನುಮೋದನೆ ನೀಡಬೇಕಾಗುತ್ತದೆ. ಕರಡು ಅಭಿವೃದ್ಧಿ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು 'ಜಿಬಿಎಂಪಿಸಿ' ಅಧ್ಯಕ್ಷರು 'ಜಿಬಿಎಂಪಿಸಿ ಕಾರ್ಯದರ್ಶಿಗೆ ಸೂಚನೆಯನ್ನು ನೀಡಬೇಕು.

ಜಿಬಿಎಂಪಿಸಿಯ ವ್ಯಾಪ್ತಿ–ಗಾತ್ರ

- 2011ರ ಜನಗಣತಿಯನ್ವಯ 1.17 ಕೋಟಿಗೂ ಅಧಿಕ ಜನಸಂಖ್ಯೆ ಹೊಂದಿರುವ 8005 ಚದರ ಕಿ.ಮೀ. ವಿಸ್ತೀರ್ಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿ ಪ್ರದೇಶವನ್ನು (ಜಿಬಿಎಂಎ) ಜಿಬಿಎಂಪಿಸಿ ವ್ಯಾಪ್ತಿ ಪ್ರದೇಶವೆಂದು ಉಲ್ಲೇಖಿಸಿ ಕಾಯ್ದೆಯಲ್ಲೇ ನಿರ್ದಿಷ್ಟಪಡಿಸಬೇಕು.
- ಜಿಬಿಎಂಪಿಸಿ ಯ ಗಾತ್ರವನ್ನು ಗರಿಷ್ಠ 45 ಸದಸ್ಯರಿಗೆ ನಿಗದಿಪಡಿಸಬೇಕು. ಅದರ ಮೂರನೇ ಎರಡರಷ್ಟು (30 ಮಂದಿ) ಚುನಾಯಿತ ಸದಸ್ಯರಿರುತ್ತಾರೆ. ಮೇಯರ್, ಸ್ಥಾಯಿ ಸಮಿತಿ/ವಲಯ ಸಮಿತಿಗಳ ಅಧ್ಯಕ್ಷರು ಮತ್ತು ಪೌರಸಭೆಗಳ ಅಧ್ಯಕ್ಷರನ್ನು ನೇರವಾಗಿ ಆಯ್ಕೆ ಮಾಡುವ ಮೂಲಕ ಈ ಸ್ಥಾನಗಳನ್ನು ತುಂಬಬಹುದು.
- ಮೂರನೇ ಒಂದರಷ್ಟು ಖಾಲಿ ಸ್ಥಾನಗಳನ್ನು, (15 ಸದಸ್ಯರು) 'ಜಿಬಿಎಂಎ ವ್ಯಾಪ್ತಿಯ ವಿಧಾನಸಭಾ ಸದಸ್ಯರು ಮತ್ತು ಲೋಕಸಭಾ ಸದಸ್ಯರನ್ನು ನಾಮ ನಿರ್ದೇಶನಗೊಳಿಸಬಹುದು.
- ಜಿಬಿಎಂಪಿಸಿಯು ಬಿಬಿಎಂಪಿಯ ಮುಖ್ಯ ಆಯುಕ್ತರು, ಬಿಡಿಎ ಆಯುಕ್ತರು, ಜಲಮಂಡಳಿಯ ಅಧ್ಯಕ್ಷರು, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಡಿಎ ಆಯುಕ್ತರು, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ವೃತ್ತಿಪರ ಮತ್ತು ತಾಂತ್ರಿಕ ಸಂಸ್ಥೆಗಳು ಮತ್ತಿತರ ಏಜೆನ್ಸಿಗಳ ಮುಖ್ಯ ಕಾರ್ಯನಿರ್ವಾಹಕ ಪ್ರತಿನಿಧಿಗಳನ್ನು ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪ್ರತಿನಿಧಿಗಳನ್ನು ಹೊಂದಿರುತ್ತದೆ.

ಜಿಬಿಎಂಪಿಸಿ ಸಂರಚನೆಗೆ ಸಲಹೆಗಳು

- ಮುಖ್ಯಮಂತ್ರಿ ಅವರೇ 'ಜಿಬಿಎಂಪಿಸಿಯ ಅಧ್ಯಕ್ಷರೆಂದು ಕಾಯ್ದೆಯಲ್ಲೇ ನಿರ್ದಿಷ್ಟಪಡಿಸಬೇಕು.
- ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯನ್ನು - ಜಿಬಿಎಂಪಿಸಿಯ ಕಾರ್ಯದರ್ಶಿಯಾಗಿ ನೇಮಿಸಬೇಕು.
- ಜಿಬಿಎಂಪಿಸಿಯು ಮೂರು ಅಥವಾ ನಾಲ್ಕು ಕಾರ್ಯಕ್ಷೇತ್ರೀಯ (ಸೆಕ್ಟೋರಲ್) ಸಮಿತಿಗಳನ್ನು ಹೊಂದಬಹುದು. ಇವುಗಳ ಕಾರ್ಯಗಳನ್ನು ಮತ್ತು ವ್ಯವಹರಿಸಬೇಕಾದ ವಿಷಯಗಳನ್ನು ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಬೇಕು.
- 1985ರ ಬಿಎಂಆರ್‌ಡಿಎ ಕಾಯ್ದೆಯನ್ನು ಮರುರೂಪಿಸಿ 'ಬಿಎಂಆರ್‌ಡಿಎಯನ್ನು ಬೃಹತ್ ಬೆಂಗಳೂರು ಪ್ರಾದೇಶಿಕ ಪ್ರಾಧಿಕಾರ 'ಬಿಎಂಆರ್‌ಎ ಎಂದು ಪರಿವರ್ತಿಸಬೇಕು. ಇದನ್ನು ಜಿಬಿಎಂಪಿಸಿಯ ತಾಂತ್ರಿಕ ಸಚಿವಾಲಯವನ್ನಾಗಿ ನೇಮಿಸಬೇಕು. ನಗರ ಯೋಜನೆ, ಸಂಚಾರ ಮತ್ತು ಸಾರಿಗೆ, ಪರಿಸರ ರಕ್ಷಣೆ ಮತ್ತು ಸಾಂಸ್ಥಿಕ ಹಣಕಾಸು ಕ್ಷೇತ್ರಗಳ ಪರಿಣಿತರನ್ನು ಸದಸ್ಯರನ್ನಾಗಿ ನೇಮಿಸಿ ಬಿಎಂಆರ್‌ಎಯನ್ನು ಬಲಪಡಿಸಬೇಕು.

ಜಿಬಿಎಂಎಯ ಅಭಿವೃದ್ಧಿ ಯೋಜನೆಗಳ ನಿರ್ವಹಣೆ ಮತ್ತು ಆಡಳಿತಕ್ಕಾಗಿ ನೂತನವಾದ ಸಮಗ್ರ ಕಾನೂನು ಅವಶ್ಯಕ. ಬಿಬಿಎಂಪಿ ಕಾಯ್ದೆಗೆ ಅಲ್ಲಿಲ್ಲೊಂದು ತಿದ್ದುಪಡಿ ತಂದರೆ ದಕ್ಷ ಮೆಟ್ರೊಪಾಲಿಟನ್ ಆಡಳಿತದ ಧ್ಯೇಯೋದ್ದೇಶ ಈಡೇರದು

ಪಿ. ಜಿ. ಶೆಣೈ, ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್‌ನ ನಿರ್ದೇಶಕ

ಯಾವ ರಾಜ್ಯವೂ ಇದುವರೆಗೆ ಮೆಟ್ರೊಪಾಲಿಟನ್ ಆಡಳಿತಕ್ಕಾಗಿ ಸಮಗ್ರ ಶಾಸನವನ್ನು ಹೊಂದಿಲ್ಲ. ನವ ಬೆಂಗಳೂರು ಆಡಳಿತಕ್ಕೆ ಶಾಸನಾತ್ಮಕ ಚೌಕಟ್ಟು ರೂಪಿಸಿದರೆ ದೇಶಕ್ಕೇ ಜನಸ್ನೇಹಿ ಮೆಟ್ರೊಪಾಲಿಟನ್ ಆಡಳಿತಕ್ಕೆ ಮೇಲ್ಪಂಕ್ತಿ ಹಾಕಿದಂತಾಗಲಿದೆ

ಸಿ.ಆರ್.ರವೀಂದ್ರ, ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್‌ನ ನಿರ್ದೇಶಕ

ಆಸ್ತಿ ನಗದೀಕರಣ: ಪ್ರತಿಭಟನೆಗೆ ಕಾಂಗ್ರೆಸ್ ಸಿದ್ಧತೆ

ನವದೆಹಲಿ (ಪಿಟಿಐ): ಆಸ್ತಿ ನಗದೀಕರಣ ಬಗ್ಗೆ ಕೇಂದ್ರ ಸರ್ಕಾರ ಕೈಗೊಂಡಿರುವ ನಿರ್ಧಾರ ವಿರೋಧಿಸಿ ದೇಶದಾದ್ಯಂತ ಪ್ರತಿಭಟನೆಗಳನ್ನು ನಡೆಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ.

ಬೇರುಮಟ್ಟದಲ್ಲಿ ಈ ವಿಷಯವನ್ನು ಜನರ ಬಳಿ ತೆಗೆದುಕೊಂಡು ಹೋಗಲಾಗುವುದು. ಇದಕ್ಕಾಗಿ, ಹಿರಿಯ ಮುಖಂಡರು ವಿವಿಧೆಡೆ ಪತ್ರಿಕಾಗೋಷ್ಠಿಗಳನ್ನು ಸಹ ನಡೆಸಲಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಬಂಡವಾಳ ಶಾಹಿ ಸ್ನೇಹಿತರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಟೀಕಿಸಿದ್ದಾರೆ.

'ದೇಶದ ₹6 ಲಕ್ಷ ಕೋಟಿ ಮೊತ್ತದ ಆಸ್ತಿಗಳನ್ನು ಮಾರಾಟ ಮಾಡಲು ಪ್ರಧಾನಿ ಮುಂದಾಗಿದ್ದಾರೆ. ರಸ್ತೆಗಳು, ರೈಲು, ಗಣಿ, ದೂರ ಸಂಪರ್ಕ, ವಿದ್ಯುತ್, ವಿಮಾನ ನಿಲ್ದಾಣಗಳು, ಬಂದರು, ಕ್ರೀಡಾಂಗಣಗಳು ಮುಂತಾದ ಆಸ್ತಿಗಳನ್ನು ಮಾರಾಟಕ್ಕೆ ಸಿದ್ಧರಾಗಿದ್ದಾರೆ' ಎಂದು ಟೀಕಿಸಿದ್ದಾರೆ.

ಸೋಂಕು ತಂದ ಕೇರಳ ವಿದ್ಯಾರ್ಥಿನಿಯರು

ಕೆಜಿಎಫ್: ನಗರದ ಆಂಡರಸನ್‌ಪೇಟೆಯ ಖಾಸಗಿ ನರ್ಸಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ 28 ವಿದ್ಯಾರ್ಥಿನಿಯರಿಗೆ ಕೋವಿಡ್ ಸೋಂಕು ಪತ್ತೆಯಾಗಿದ್ದು, ಅವರೆಲ್ಲರನ್ನೂ ಬಿಜಿಎಂಎಲ್ ಆಸ್ಪತ್ರೆಗೆ ಭಾನುವಾರ ದಾಖಲು ಮಾಡಲಾಗಿದೆ.

ಖಾಸಗಿ ನರ್ಸಿಂಗ್ ಕಾಲೇಜಿನಲ್ಲಿ ಕೇರಳ ಮೂಲದ ಸುಮಾರು 300 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಮೂರು ದಿನಗಳ ಹಿಂದೆ ಕೇರಳದಿಂದ ಬಂದ ಮೊದಲನೇ ವರ್ಷದ ವಿದ್ಯಾರ್ಥಿನಿಯರು ವಸತಿ ನಿಲಯದಲ್ಲಿ ಉಳಿದುಕೊಂಡಿದ್ದರು. ಅವರ ಮೂಲಕ ಇತರರಿಗೂ ಕೋವಿಡ್ ಸೋಂಕು ಹರಡಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ಸುನಿಲ್ ತಿಳಿಸಿದ್ದಾರೆ.

ಮೊದಲನೇ ವರ್ಷದ 13 ವಿದ್ಯಾರ್ಥಿನಿಯರು ಮತ್ತು ಎರಡನೇ ವರ್ಷದ 15 ವಿದ್ಯಾರ್ಥಿನಿಯರು ಕೋವಿಡ್ ಸೋಂಕಿಗೆ ಒಳಗಾಗಿರುವುದು ವೈದ್ಯಕೀಯ ಪರೀಕ್ಷೆಯಿಂದ ತಿಳಿದುಬಂದಿದೆ. ವಿದ್ಯಾರ್ಥಿನಿಯರು ಮತ್ತು ಸಿಬ್ಬಂದಿಯ ಕೋವಿಡ್ ಪರೀಕ್ಷೆ ಕಾರ್ಯ ಮುಂದುವರೆದಿದೆ. ಕೋವಿಡ್ ಸೋಂಕು ಇರುವವರ ಸಂಖ್ಯೆ ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ.

ತಾಲ್ಲೂಕಿನಲ್ಲಿ ಕೋವಿಡ್ ಪ್ರಮಾಣ ಇತ್ತೀಚಿನ ದಿನಗಳಲ್ಲಿ ಅತ್ಯಂತ ಕಡಿಮೆ ಇತ್ತು. ಕಳೆದ ಹತ್ತು ದಿನಗಳಿಂದ ಕೇವಲ 15 ಪ್ರಕರಣಗಳು ವರದಿಯಾಗಿದ್ದವು. ನರ್ಸಿಂಗ್ ಕಾಲೇಜಿನಲ್ಲಿ ಕೋವಿಡ್ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕಾಲೇಜು ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್ ಸೀಲ್ ಡೌನ್ ಮಾಡಲಾಗಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,37,286 ಒಟ್ಟು ಪ್ರಕರಣಗಳು ▲
(12,36,925 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,343 ▲	12,13,959 ▲	15,983 ▲

ದಿನದ ಏರಿಕೆ

ಹೊಸ ಪ್ರಕರಣ	361 ▲
ಗುಣಮುಖ	334 ▲
ಸಾವು	06 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಹೊರಗೆ ಹೋಗುವಾಗ ಮುಖಗವಸು ಧರಿಸಿ

'ಕೋವಿಡ್ ಭ್ರಷ್ಟಾಚಾರದಲ್ಲಿ ರಾಜ್ಯ ಸರ್ಕಾರ ನಂಬರ್ ಒನ್'

ಹುಬ್ಬಳ್ಳಿ: ಕೋವಿಡ್ ನಿರ್ವಹಣೆ ಹೆಸರಿನಲ್ಲಿ ನಡೆದ ಭ್ರಷ್ಟಾಚಾರದಲ್ಲಿ ರಾಜ್ಯ ಸರ್ಕಾರ ದೇಶಕ್ಕೆ ನಂಬರ್ ಒನ್ ಸ್ಥಾನದಲ್ಲಿದೆ. ಅದೇ ಕಾರಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಲಾಯಿತು. ಕಣ್ಣೀರು ಹಾಕುತ್ತಾ ಹುದ್ದೆ ತ್ಯಜಿಸಿದ್ದು ಏಕೆ ಎಂದು ಯಡಿಯೂರಪ್ಪ ಅವರೇ ಹೇಳಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ಚಿಕಿತ್ಸೆಗೆ ಕ್ಯೂ (ಸರದಿ), ಆಂಬುಲೆನ್ಸ್‌ಗೆ ಕ್ಯೂ, ಔಷಧ ಪಡೆಯಲು ಕ್ಯೂ ಕೊನೆಗೆ ಅಂತ್ಯಸಂಸ್ಕಾರಕ್ಕೂ ಕ್ಯೂ ನಿಲ್ಲಿಸಿದರು. ಇದು ಕ್ಯೂ ಸರ್ಕಾರ ಎಂದು ಟೀಕಿಸಿದರು. ಕೇಂದ್ರ ಸರ್ಕಾರವು ಕೋವಿಡ್ ನಿರ್ವಹಣೆಯಲ್ಲಿ ವಿಫಲವಾಗಿದ್ದು, ಇತ್ತೀಚೆಗೆ ನಡೆದ ಸಂಪುಟ ವಿಸ್ತರಣೆ ವೇಳೆ ಆರೋಗ್ಯ ಸಚಿವರನ್ನು ಮನೆಗೆ ಕಳುಹಿಸಿದರು ಎಂದರು.

ಇದಕ್ಕೆ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯೆ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ಡಿ.ಕೆ. ಶಿವಕುಮಾರ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ ಅಂದರೆ, ಭೂತದ ಬಾಯಲ್ಲಿ ಭಗವದ್ಗೀತೆ ಬಂದಂತೆ' ಎಂದರು.

ಎಂಜಿನಿಯರಿಂಗ್ ಕೋರ್ಸ್ ಶುಲ್ಕ ಹೆಚ್ಚಳ?

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕ ಶೇ 5ರಿಂದ 10ರಷ್ಟು ಏರಿಕೆ ಆಗುವ ಸಾಧ್ಯತೆ ಇದೆ.

'ಶುಲ್ಕ ಹೆಚ್ಚಿಸುವಂತೆ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳು ಬೇಡಿಕೆ ಇಟ್ಟಿವೆ. ಈ ಬೇಡಿಕೆಯನ್ನು ಪರಿಗಣಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ' ಎಂದು ಉನ್ನತ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

'ಮೂರು ವರ್ಷಗಳಿಂದ ಶುಲ್ಕ ಹೆಚ್ಚಳ ಮಾಡಿಲ್ಲ. ಸಿಬ್ಬಂದಿ ವೇತನ ಮತ್ತು ಕಾಲೇಜು ನಿರ್ವಹಣಾ ವೆಚ್ಚ ಹೆಚ್ಚಳ ಆಗಿರುವುದರಿಂದ ಕೋರ್ಸ್ ಶುಲ್ಕವನ್ನು ಶೇ 30ರಷ್ಟು ಹೆಚ್ಚಿಸುವಂತೆ ಆಡಳಿತ ಮಂಡಳಿಗಳು ಬೇಡಿಕೆ ಇಟ್ಟಿವೆ. ಆದರೆ, ಶೇ 10ರಷ್ಟು ಹೆಚ್ಚಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ. ಶುಲ್ಕ ಹೆಚ್ಚಿಸುವಂತೆ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳು ಬೇಡಿಕೆ ಇಟ್ಟಿದ್ದರೂ ಪರಿಗಣಿಸಿಲ್ಲ' ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಪ್ರತಿನಿಧಿಗಳ ಜೊತೆ ಸೆಪ್ಟೆಂಬರ್ ಎರಡನೇ ವಾರದಲ್ಲಿ ಸಭೆ ನಡೆಸಲಿದ್ದೇನೆ. ಶುಲ್ಕ ಹೆಚ್ಚಿಸುವ ಬಗ್ಗ ಈವರೆಗೂ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ' ಎಂದರು.

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿರುವ ಒಟ್ಟು ಸೀಟುಗಳಲ್ಲಿ ಶೇ 45ರಷ್ಟು ಸಿಇಟಿ, ಶೇ 30ರಷ್ಟು ಕಾಮೆಡ್‌-ಕೆ ಮತ್ತು ಶೇ 25ರಷ್ಟು ಎನ್‌ಆರ್‌ಐ ಮತ್ತು ಆಡಳಿತ ಮಂಡಳಿಗಳಿಗೆ ಹಂಚಿಕೆ ಮಾಡಲಾಗಿದೆ.

ರಸ್ತೆಯಲ್ಲಿ ಹೋಗುತ್ತಿದ್ದ ಬಾಲಕಿಗೆ ಚುಂಬನ: ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಾಲಕಿಗೆ ಬಲವಂತವಾಗಿ ಚುಂಬಿಸಿ, ಬಳಿಕ ಪ್ರೀತಿಸುವಂತೆ ಪೀಡಿಸಿದ ಯುವಕನನ್ನು ಪೀಣ್ಯ ಪೊಲೀಸರು ಬಂಧಿಸಿದ್ದಾರೆ.

16 ವರ್ಷದ ಬಾಲಕಿಯ ತಾಯಿ ಕೊಟ್ಟಿರುವ ದೂರಿನ ಆಧಾರದಲ್ಲಿ ಆಟೊ ಚಾಲಕನಾಗಿರುವ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

'ಬಾಲಕಿಯು ದೊಡ್ಡಬಿದರಕಲ್ಲು ನಿವಾಸಿಯಾಗಿದ್ದು, ಆರೋಪಿ ಕೂಡ ಇದೇ ಪ್ರದೇಶದಲ್ಲಿ ವಾಸವಿದ್ದ. ಬಾಲಕಿಯನ್ನು ಪ್ರೀತಿಸುತ್ತಿದ್ದ ಆತ ಒಮ್ಮೆ ಪ್ರೇಮ ನಿವೇದನೆ ಮಾಡಿಕೊಂಡಿದ್ದ. ಇದಕ್ಕೆ ಆಕೆ ಒಪ್ಪಿರಲಿಲ್ಲ. ಬಾಲಕಿ ಶನಿವಾರ ಸಂಜೆ ಏಕಾಂಗಿಯಾಗಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವುದನ್ನು ಗಮನಿಸಿ ಆಕೆಯನ್ನು ಹಿಂಬಾಲಿಸಿಕೊಂಡು ಬಂದಿದ್ದ ಆತ ನಂತರ ಬಲವಂತವಾಗಿ ಮುತ್ತು ಕೊಟ್ಟಿದ್ದ. ಆರೋಪಿಯ ವರ್ತನೆಯಿಂದ ಹೆದರಿದ ಬಾಲಕಿ ಸಹಾಯಕ್ಕಾಗಿ ಕೂಗಿಕೊಂಡಿದ್ದಳು. ತಕ್ಷಣವೇ ಆರೋಪಿ ಅಲ್ಲಿಂದ ಪರಾರಿಯಾಗಿದ್ದ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ತಿಳಿಸಿದ್ದಾರೆ.

'ಆರೋಪಿಯು ಯುವತಿಯನ್ನು ಚುಂಬಿಸುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿತ್ತು. ಈ ಸಂಬಂಧ ಹುಡುಗಿಯ ತಾಯಿ ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ' ಎಂದು ಅವರು ಹೇಳಿದ್ದಾರೆ.

ಲಾರಿಯಲ್ಲಿ ತುಂಬಿದ್ದ ಸಸಿಗಳ ಜತೆಗಿತ್ತು 3,400 ಕೆ.ಜಿ. ಗಾಂಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರ್ಸರಿಯಿಂದ ತಂದಿದ್ದ ಸಸಿಗಳ ಜೊತೆಯಲ್ಲೇ ಬೃಹತ್ ಪ್ರಮಾಣದ ಗಾಂಜಾ ಸಾಗಣೆ ಮಾಡುತ್ತಿದ್ದ ಮೂವರನ್ನು ಎನ್‌ಸಿಬಿ ಬೆಂಗಳೂರು ವಲಯದ ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ. ಲಾರಿಯಲ್ಲಿದ್ದ 3,400 ಕೆ.ಜಿ. ಗಾಂಜಾ ಜಪ್ತಿ ಮಾಡಿದ್ದಾರೆ.

ಡಿ.ಶಿಂಧೆ, ಎಂ.ಆರ್.ಕಾಂಬ್ಳೆ ಹಾಗೂ ಎನ್.ಜೋಗದಾಂದ್ ಬಂಧಿತರು. ಇವರೆಲ್ಲಾ ಮಹಾರಾಷ್ಟ್ರದ ಲಾತೂರ್ ಜಿಲ್ಲೆಯವರು.

ಲಾರಿಯ ಮೂಲಕ ಗಾಂಜಾ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭ್ಯವಾದ ಬೆನ್ನಲ್ಲೇ ಜಂಟಿ ಕಾರ್ಯಾಚರಣೆ ನಡೆಸಿದ ಬೆಂಗಳೂರು ಹಾಗೂ ಹೈದರಾಬಾದ್ ಅಧಿಕಾರಿಗಳ ತಂಡ ಹೈದರಾಬಾದ್ ಹೊರವರ್ತುಲ ರಸ್ತೆಯ ಟೋಲ್ ಸಂಗ್ರಹ ಕೇಂದ್ರದ ಬಳಿ ಲಾರಿಯನ್ನು ತಡೆದು ಪರಿಶೀಲಿಸಿತ್ತು. ಆಗ ಕೋಟ್ಯಂತರ ಮೌಲ್ಯದ ಗಾಂಜಾ ಪತ್ತೆಯಾಗಿದೆ.

ಆರೋಪಿಗಳಾದ ಡಿ.ಶಿಂಧೆ, ಎಂ.ಆರ್.ಕಾಂಬ್ಳೆ ಹಾಗೂ ಎನ್.ಜೋಗದಾಂದ್

'ಆರೋಪಿಗಳು ಗಾಂಜಾ ತುಂಬಿದ್ದ 141 ಪ್ಲಾಸ್ಟಿಕ್ ಚೀಲಗಳನ್ನು ಗಿಡಗಳ ಅಡಿಯಲ್ಲಿ ಅಡಗಿಸಿಟ್ಟಿದ್ದರು. ಗಿಡದ ಬುಡದಲ್ಲಿನ ಮಣ್ಣಿನಲ್ಲೂ ಗಾಂಜಾ ಪೊಟ್ಟಣಗಳು ಇದ್ದವು. ಇವುಗಳನ್ನು ಮುಂಬೈ, ಪುಣೆ, ಥಾಣೆ ನಗರಗಳು ಹಾಗೂ ಹೊರ ರಾಜ್ಯಗಳಿಗೆ ಪೂರೈಕೆ ಮಾಡಲು ಮುಂದಾಗಿದ್ದರು. ಆರೋಪಿಗಳ ಜೊತೆ ಮಹಾರಾಷ್ಟ್ರ ನೋಂದಣಿ ಹೊಂದಿದ್ದ ಲಾರಿಯನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇವರು ಶಾಲಾ, ಕಾಲೇಜು ವಿದ್ಯಾರ್ಥಿಗಳನ್ನೇ ಗುರಿಯಾಗಿಟ್ಟುಕೊಂಡು ಗಾಂಜಾ ಮಾರಾಟ ಮಾಡುತ್ತಿದ್ದರು. ಪಾರ್ಟಿಗಳಿಗೂ ಗಾಂಜಾ ಪೂರೈಕೆ ಮಾಡುತ್ತಿದ್ದರು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ. ಅವರಿಂದ ಇನ್ನಷ್ಟು ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ' ಎಂದು ಹೇಳಿದ್ದಾರೆ. 'ಕಳೆದ ವರ್ಷ ಒಟ್ಟು 1,971 ಕೆ.ಜಿ.ಗಾಂಜಾ ಜಪ್ತಿ ಮಾಡಿ, ಎಂಟು ಮಂದಿಯನ್ನು ವಶಕ್ಕೆ ಪಡೆಯಲಾಗಿತ್ತು. ಈ ವರ್ಷದಲ್ಲಿ ಈವರೆಗೆ 7,500 ಕೆ.ಜಿ.ಗಾಂಜಾ ಜಪ್ತಿ ಮಾಡಿ 25 ಮಂದಿಯನ್ನು ಬಂಧಿಸಲಾಗಿದೆ' ಎಂದೂ ಮಾಹಿತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ಊಟಕ್ಕೆ ಕರೆದು ವಿದ್ಯಾರ್ಥಿ ಮೇಲೆ ಗುಂಪು ಹಲ್ಲೆ: ಪ್ರಕರಣ ದಾಖಲು

ಬೆಂಗಳೂರು: ತಮ್ಮ ವಿರುದ್ಧ ಶಿಕ್ಷಕರಿಗೆ ದೂರು ನೀಡಿದ್ದರಿಂದ ಕೆರಳಿದ ವಿದ್ಯಾರ್ಥಿಗಳ ಗುಂಪೊಂದು ಸಹಪಾಠಿಯ ಮೇಲೆ ಹಲ್ಲೆ ನಡೆಸಿದ್ದು, ಈ ಸಂಬಂಧ ಬಸವನಗುಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಿ.ಸಾತ್ವಿಕ್ ಹಲ್ಲೆಗೊಳಗಾದ ವಿದ್ಯಾರ್ಥಿ. ಆತ ನೀಡಿರುವ ಲಿಖಿತ ದೂರಿನ ಆಧಾರದಲ್ಲಿ ತೇಜಸ್ ಆರ್.ಕೃಷ್ಣ, ಮನೋಜ್, ತುಷಾರ್ ಶಂಕರ್, ರೀಜಾ ಜೋಸೆಫ್, ಎಂ.ಡಿ.ಸುಜಿತ್ ರಾಜ್, ಅಖಿಲೇಶ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಾನೂನು ವ್ಯಾಸಂಗ ಮಾಡುತ್ತಿರುವ ಸಾತ್ವಿಕ್, ತರಗತಿಯ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದ. ತೇಜಸ್ ಹಾಗೂ ಇತರರು ಸರಿಯಾಗಿ ತರಗತಿಗಳಿಗೆ ಹಾಜರಾಗದಿರುವ ಬಗ್ಗೆ ಶಿಕ್ಷಕರಿಗೆ ದೂರು ನೀಡಿದ್ದ. ಇದರಿಂದ ತೇಜಸ್ ಹಾಗೂ ಆತನ ಸ್ನೇಹಿತರು ಕೆರಳಿದ್ದರು. ಜೊತೆಯಲ್ಲೇ ಊಟ ಮಾಡುವ ನೆಪದಲ್ಲಿ ಸಾತ್ವಿಕ್‌ನನ್ನು ಆಗಸ್ಟ್ 26ರ ಮಧ್ಯಾಹ್ನ ನೆಟ್ಟಕಲ್ಲಪ್ಪ ವೃತ್ತಕ್ಕೆ ಕರೆಸಿಕೊಂಡಿದ್ದರು. ಅಲ್ಲಿ ಆತನನ್ನು ಹಿಡಿದು ಥಳಿಸಿದ್ದರು. ಈ ಬಗ್ಗೆ ಯಾರಿಗಾದರೂ ದೂರು ನೀಡಿದರೆ ಮತ್ತೆ ಹಲ್ಲೆ ಮಾಡುವುದಾಗಿಯೂ ಬೆದರಿಸಿದ್ದರು' ಎಂದು ಅವರು ಹೇಳಿದ್ದಾರೆ.

'ಶೋಷಿತರಿಗೆ ಧ್ವನಿಯಾದ ಮಹಿಳೆಯರು'

ಬೆಂಗಳೂರು: ಆಲ್ ಲೇಡಿಸ್ ಲೀಗ್ ವಿತ್ ವಿಮೆನ್ಸ್ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್ ಸಂಘಟನೆಯು ನಗರದಲ್ಲಿ ಆಯೋಜಿಸಿದ 'ಮಹಿಳೆಯರಿಗಾಗಿ ಒಂದು ಸಂಜೆ' ಕಾರ್ಯಕ್ರಮದಲ್ಲಿ ಆ್ಯಸಿಡ್ ದಾಳಿಗೆ ಒಳಗಾದವರು ಹಾಗೂ ಸಮಾಜದಲ್ಲಿನ ಶೋಷಿತ ಮಹಿಳೆಯರಿಗೆ ಧೈರ್ಯ ತುಂಬಲಾಯಿತು.

ಆರು ವರ್ಷಗಳ ಹಿಂದೆ ಆ್ಯಸಿಡ್ ದಾಳಿಗೆ ಒಳಗಾಗಿದ್ದ ಸಾಮಾಜಿಕ ಕಾರ್ಯಕರ್ತೆ ಪ್ರಗ್ಯಾ ಸಿಂಗ್ ಅವರನ್ನು ಸನ್ಮಾನಿಸಿದ ಸಂಘಟನೆಯ ಕಾರ್ಯಕರ್ತೆಯರು, 'ಮಹಿಳೆಯರು ಮನೆಗೆ ಸೀಮಿತವಾಗಬಾರದು. ಸಮಾಜದ ಮುಖ್ಯವಾಹಿನಿಗೆ ಬಂದು, ಜನಸಾಮಾನ್ಯರ ಜೊತೆಗೆ ಸೇರಬೇಕು. ನೊಂದವರಿಗೆ ಧ್ವನಿಯಾಗಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶಾಸಕ ಅರವಿಂದ ಲಿಂಬಾವಳಿ ಮಾತನಾಡಿ, 'ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಸಮಾನ ಅವಕಾಶ ಸಿಗಬೇಕು. ಕೇಂದ್ರ ಸಚಿವ ಸಂಪುಟದಲ್ಲಿ ಈ ಬಾರಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ' ಎಂದರು.

ಶ್ರೀಮಂತ ಪಾಟೀಲಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ

ಬೆಂಗಳೂರು: 'ಕಾಗವಾಡ ಕ್ಷೇತ್ರದ ಶಾಸಕ ಶ್ರೀಮಂತ ಪಾಟೀಲ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು' ಎಂದು ಕ್ಷತ್ರಿಯ ಮರಾಠ ಮಹಾ ಒಕ್ಕೂಟದ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭಾನುವಾರ ಭೇಟಿ ಮಾಡಿ ಒತ್ತಾಯಿಸಿದರು.

ಮುಖ್ಯಮಂತ್ರಿಯ ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿ ಮಾಡಿದ ಮುಖಂಡರು, 'ಪಾಟೀಲ ಅವರನ್ನು ಸಚಿವರನ್ನಾಗಿ ಮಾಡುವ ಮೂಲಕ ಸಚಿವ ಸಂಪುಟದಲ್ಲಿ ಕ್ಷತ್ರಿಯ ಮರಾಠ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಬೇಕು' ಎಂದು ಮನವಿ ಮಾಡಿದರು.

'ಸಮುದಾಯವನ್ನು ಪ್ರವರ್ಗ 3 ಬಿಯಿಂದ 2ಎ ಗೆ ಬದಲಿಸಿ ಮೀಸಲಾತಿ ಒದಗಿಸಬೇಕು. ಅಲ್ಲದೆ, ಮರಾಠ ಅಭಿವೃದ್ಧಿ ಮಂಡಳಿಗೆ ಶೀಘ್ರದಲ್ಲಿ ಅಧ್ಯಕ್ಷರನ್ನು ನೇಮಕ ಮಾಡಬೇಕು' ಎಂದೂ ಮುಖಂಡರು ಒತ್ತಾಯಿಸಿದರು. ಪಿ.ಜಿ.ಆರ್. ಸಿಂಧ್ಯ, ಬೆಂಗಳೂರಿನ ಗೋ ಸಾಯಿ ಮಹಾಸಂಸ್ಥಾನಮಠದ ಮಂಜುನಾಥ ಸ್ವಾಮೀಜಿ ನಿಯೋಗದಲ್ಲಿ ಇದ್ದರು.

ಕಲಾವಿದರೊಬ್ಬರು ಕಲಾಕೃತಿಗೆ ಅಂತಿಮ ಸ್ಪರ್ಶ ನೀಡುತ್ತಿರುವುದನ್ನು ಬೇಳೂರು ರಾಘವೇಂದ್ರ ಶೆಟ್ಟಿ ಅವರು ವೀಕ್ಷಿಸಿದರು

'ಕಿನ್ನಾಳ ಕಲೆಗೆ ಮರುಜೀವ ನೀಡಲು ಅಗತ್ಯ ಕ್ರಮ'

ಬೆಂಗಳೂರು: 'ಕಿನ್ನಾಳ ಕಲೆಗೆ ಆಧುನಿಕ ಸ್ಪರ್ಶ ನೀಡುವುದರ ಜೊತೆಗೆ ಕಿನ್ನಾಳ ಕಲಾಕಾರರ ಶ್ರೇಯೋಭಿವೃದ್ಧಿಗೆ ಅಗತ್ಯ ಯೋಜನೆ ರೂಪಿಸಲಾಗುತ್ತದೆ. ಕಲಾಕಾರರಿಗೆ ವಸತಿ ಹಕ್ಕು ನೀಡುವ ಮತ್ತು ಅವರು ತಯಾರಿಸಿದ ಕರಕುಶಲ ವಸ್ತುಗಳ ಮಾರಾಟಕ್ಕೆ ಅಗತ್ಯ ಮಾರುಕಟ್ಟೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ತಿಳಿಸಿದರು.

ಕೊಪ್ಪಳ ಜಿಲ್ಲೆಯ ಕಿನ್ನಾಳಕ್ಕೆ ಭೇಟಿ ನೀಡಿ ಸ್ಥಳೀಯರ ಅಹವಾಲುಗಳನ್ನು ಆಲಿಸಿದ ಅವರು ಕಿನ್ನಾಳದಲ್ಲಿಯೇ ಕರಕುಶಲ ಅಭಿವೃದ್ಧಿ ನಿಗಮದ ನೂತನ ಕಚೇರಿ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

'ಕಿನ್ನಾಳ, ದೇಶದ ಪ್ರಮುಖ ಕಲಾ ನೆಲೆಗಳಲ್ಲಿ ಒಂದಾಗಿದೆ. ಈ ಗ್ರಾಮ 600 ವರ್ಷಗಳಷ್ಟು ಹಳೆಯ ಇತಿಹಾಸವನ್ನೂ ಹೊಂದಿದೆ. ಇಲ್ಲಿನ ಜನ ಶ್ರೀಕೃಷ್ಣದೇವರಾಯನ ಕಾಲದಿಂದಲೂ ವಿಶಿಷ್ಟ ಕಲಾಕೃತಿಗಳನ್ನು ನಿರ್ಮಿಸುತ್ತಾ ಬಂದಿದ್ದಾರೆ. ಅವರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಬದ್ಧನಾಗಿದ್ದೇನೆ. ಜಾಗತಿಕ ಮಟ್ಟದಲ್ಲೂ ಅವರ ಕಲಾಕೃತಿಗಳಿಗೆ ಮನ್ನಣೆ ಸಿಗಬೇಕು. ಆ ವ್ಯವಸ್ಥೆಯನ್ನು ನಿಗಮದ ವತಿಯಿಂದ ಮಾಡುತ್ತೇವೆ' ಎಂದು ಭರವಸೆ ನೀಡಿದರು.

ಶಾರದಾ ಇಂಟರ್‌ನ್ಯಾಷನಲ್ ಶಾಲೆಯ ಮುಖ್ಯಸ್ಥ ವಿ.ಆರ್.ಪಾಟೀಲ, ಪ್ರಾಂಶುಪಾಲ ಚಕ್ರವರ್ತಿ, ರಾಜ್ಯ ಪ್ರಶಸ್ತಿ ವಿಜೇತ ಕಲಾವಿದ ಶೇಷಪ್ಪ ಇದ್ದರು.

ಕೆಂಗೇರಿ– ಉತ್ತರಹಳ್ಳಿ ಮುಖ್ಯರಸ್ತೆ ವಿಸ್ತರಣೆ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಒಂದೂವರೆ ದಶಕಗಳ ದೀರ್ಘ ಭರವಸೆಯಾದ ಕೆಂಗೇರಿ–ಉತ್ತರಹಳ್ಳಿ ಮುಖ್ಯರಸ್ತೆ ವಿಸ್ತರಣೆ ಕಾಮಗಾರಿಗೆ ಭಾನುವಾರ ಗುದ್ದಲಿಪೂಜೆ ನೆರವೇರಿತು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆಂಗೇರಿ– ಉತ್ತರಹಳ್ಳಿ ರಸ್ತೆ ವಿಸ್ತರಣೆಗೆ 2007ರಲ್ಲೇ ಯೋಜನೆ ಸಿದ್ಧಪಡಿಸಲಾಗಿತ್ತು. ರಸ್ತೆಯಲ್ಲಿರುವ ನಿವೇಶನ ಮಾಲೀಕರಿಗೆ 18 ಅಡಿಗಳಷ್ಟು ಜಾಗವನ್ನು ರಸ್ತೆಗೆ ಬಿಟ್ಟು ಕಟ್ಟಡ ನಿರ್ಮಿಸುವಂತೆ ನೋಟಿಸ್ ನೀಡಲಾಗಿತ್ತು. ಕೆಲ ತಾಂತ್ರಿಕ ಹಾಗೂ ಕಾನೂನು ಸಮಸ್ಯೆಗಳಿಂದ ದಶಕಗಳು ಕಳೆದರೂ ರಸ್ತೆ ವಿಸ್ತರಣೆ ಕಾಮಗಾರಿಗೆ ಕಾಲ ಕೂಡಿ ಬಂದಿರಲಿಲ್ಲ.

ಈ ಅವಧಿಯಲ್ಲಿ ರಸ್ತೆ ವಿಸ್ತರಣೆ ಸಂಬಂಧ ಮೂರು ಬಾರಿ ನೋಟಿಸ್ ಪಡೆದಿದ್ದ ನಿವೇಶನದ ಮಾಲೀಕರು ಅತ್ತ ಕಟ್ಟಡ ನಿರ್ಮಿಸಲೂ ಆಗದೆ, ಮಾರಾಟ ಮಾಡಲೂ ಆಗದೆ ಪರಿತಪಿಸಿದ್ದರು.

ಈ ನಡುವೆ, ಕೆಂಗೇರಿ ಉತ್ತರಹಳ್ಳಿ ವ್ಯಾಪ್ತಿಯ ಬಡಾವಣೆಗಳು ತೀವ್ರಗತಿಯಲ್ಲಿ ಅಭಿವೃದ್ಧಿಯಾದ ಹಿನ್ನೆಲೆಯಲ್ಲಿ ಇಲ್ಲಿನ ಜನಸಂಖ್ಯೆಯೂ ಹೆಚ್ಚಿತ್ತು. ಗಿರಿನಗರ, ಹೊಸಕೆರೆಹಳ್ಳಿ, ಹನುಮಂತನಗರ, ರಾಜರಾಜೇಶ್ವರಿನಗರ ಸೇರಿದಂತೆ ಇನ್ನಿತರೆ ಕಡೆಗೆ ತೆರಳುವ ಸಾರ್ವಜನಿಕರಿಗೆ ಈ ರಸ್ತೆ ಅತ್ಯಂತ ಅನುಕೂಲಕರವಾದ ಬದಲಿ ರಸ್ತೆಯಾಗಿ ಬದಲಾಗಿತ್ತು. ಇದರಿಂದ ವಾಹನ ದಟ್ಟಣೆ ಹೆಚ್ಚಿ ಸಂಜೆ ವೇಳೆ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಗಿತ್ತು. ಅತಿಯಾದ ವಾಹನ ಸಂದಣಿಯಿಂದ ರಸ್ತೆಯು ಹದಗೆಟ್ಟು ವಾಹನ ಸವಾರರಿಗೆ ಕಿರಿಕಿರಿಯಾಗುತ್ತಿತ್ತು. ಶ್ರೀನಿವಾಸಪುರ ಬಳಿಯ ಆದಿತ್ಯ ಬೇಕರಿಯಿಂದ ಕೆಂಗೇರಿಯ ಕೃಷ್ಣಪ್ರಿಯಾ ಕಲ್ಯಾಣ ಮಂಟಪದವರೆಗೆ ನಿರ್ಮಾಣಗೊಳ್ಳಲಿರುವ ₹51ಕೋಟಿ ವೆಚ್ಚದ ರಸ್ತೆ ವಿಸ್ತರಣೆ ಕಾಮಗಾರಿಯಿಂದ ಈ ಎಲ್ಲ ಸಮಸ್ಯೆಗಳಿಗೆ ತೆರೆಬೀಳಲಿದೆ.

ಕಾಮಗಾರಿಗೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ರಾಕೇಶ್ ಸಿಂಗ್, ಬಿಬಿಎಂಪಿ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್, ಪ್ರಹ್ಲಾದ್ ಮತ್ತಿತರರು ಇದ್ದಾರೆ

ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, 'ಯಶವಂತಪುರ ಕ್ಷೇತ್ರ ವ್ಯಾಪ್ತಿಯ 110 ಹಳ್ಳಿಗಳ ಅಭಿವೃದ್ಧಿಗೆ ₹200 ಕೋಟಿ ಅನುದಾನ ದೊರಕಿದೆ' ಎಂದು ತಿಳಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕೆಲ ಕಾರಣಗಳಿಂದ ರಸ್ತೆ ವಿಸ್ತರಣೆ ಕಾಮಗಾರಿ ನನೆಗುದಿಗೆ ಬಿದ್ದಿತ್ತು. ಇದೀಗ ಕಾಮಗಾರಿಗೆ ಚಾಲನೆ ದೊರಕಿದ್ದು, ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿದರು. ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಇದ್ದರು.

ಬಯಲಲ್ಲೇ ಮೂತ್ರ ವಿಸರ್ಜನೆ; ನಾಗರಿಕರಿಗೆ ಕಿರಿಕಿರಿ

ಬೆಂಗಳೂರು: 'ಸಜ್ಜನ್ ರಾವ್ ವೃತ್ತದಿಂದ ಮಿನರ್ವ ವೃತ್ತಕ್ಕೆ ಸಾಗುವ ಮಾರ್ಗ ಮಧ್ಯದ ಜನತಾ ಹೋಟೆಲ್ ಸಮೀಪದ ಪ್ರದೇಶವು ಬಯಲು ಶೌಚಾಲಯದಂತಾಗಿದೆ. ರಸ್ತೆ ಬದಿಯಲ್ಲೇ ಅನೇಕರು ಮೂತ್ರ ವಿಸರ್ಜನೆ ಮಾಡುವುದರಿಂದ ನಾಗರಿಕರಿಗೆ ಕಿರಿಕಿರಿಯಾಗುತ್ತಿದೆ' ಎಂದು ಸ್ಥಳೀಯರು ದೂರಿದ್ದಾರೆ.

'ಜನವಸತಿ ಪ್ರದೇಶದಲ್ಲೇ ತ್ಯಾಜ್ಯ ಹಾಗೂ ವಾಹನಗಳ ಅನಗತ್ಯ ಬಿಡಿಭಾಗಗಳನ್ನು ಸುರಿಯಲಾಗುತ್ತಿದೆ. ಹೀಗಾಗಿ ಅಲ್ಲಲ್ಲಿ ಕಸದ ರಾಶಿ ನಿರ್ಮಾಣವಾಗಿದೆ. ವಾಹನ ಸವಾರರು ಹಾಗೂ ಪಾದಚಾರಿಗಳಿಗೂ ತೊಂದರೆಯಾಗುತ್ತಿದೆ. ಇದಕ್ಕೆ ಕೂಡಲೇ ಕಡಿವಾಣ ಹಾಕಬೇಕು' ಎಂದು ವಕೀಲರಾದ ಮುರಳೀಧರ ಹಾಗೂ ಅವರ ಸಹೋದ್ಯೋಗಿಗಳು ಒತ್ತಾಯಿಸಿದ್ದಾರೆ.

'ಈ ಸಮಸ್ಯೆ ಸರಿಪಡಿಸುವಂತೆ ಚಿಕ್ಕಪೇಟೆ ಕ್ಷೇತ್ರದ ಶಾಸಕ ಉದಯ ಬಿ.ಗರುಡಾಚಾರ್ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಮಾಡಲಾಗಿದೆ. ಹೀಗಿದ್ದರೂ ಅವರು ಯಾವುದೇ ಕ್ರಮ ಕೈಗೊಂಡಿಲ್ಲ. ಕೋವಿಡ್ ಕಾಲದಲ್ಲಿ ಅಧಿಕಾರಿಗಳು ಸ್ವಚ್ಛತೆಗೆ ಆದ್ಯತೆ ನೀಡದ ಕಾರಣ ಜನರು ಅನಾರೋಗ್ಯದ ಭೀತಿಯಲ್ಲೇ ದಿನ ಕಳೆಯುವಂತಾಗಿದೆ' ಎಂದರು.

ವ್ಯಕ್ತಿಯೊಬ್ಬರು ರಸ್ತೆ ಬದಿಯಲ್ಲೇ ಮೂತ್ರ ವಿಸರ್ಜಿಸುತ್ತಿರುವುದು

ಚಿತ್ರಾವಳಿ

ಹೆಬ್ಬಾಳ ಶಾಸಕ ಬೈರತಿ ಸುರೇಶ್ ಅವರು ಸ್ವಂತ ಹಣದಲ್ಲಿ ನಿರ್ಗತಿಕರಿಗೆ ಮನೆ ನಿರ್ಮಿಸಲು ಮುಂದಾಗಿದ್ದು, ಜೆ.ಸಿ. ನಗರ ವಾರ್ಡ್‌ನ ಮಠದಹಳ್ಳಿಯಲ್ಲಿ ಭಾನುವಾರ ಭೂಮಿ ಪೂಜೆ ನೆರವೇರಿಸಿದರು. ಕಾಂಗ್ರೆಸ್ ಪಕ್ಷದ ಮುಖಂಡರು, ಸ್ಥಳೀಯರು ಇದ್ದರು

ಯಲಹಂಕದಲ್ಲಿರುವ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್ ಸೊಸೈಟಿ ಆಫ್ ಇಂಡಿಯಾ ಮತ್ತು ಜರ್ಮನಿಯ ಇಒಎಸ್ ಜಿಎಂಬಿಎಚ್ ಸಂಸ್ಥೆಯ ಸಹಯೋಗದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ (ಉತ್ಕೃಷ್ಟತಾ ಕೇಂದ್ರ) ಕೇಂದ್ರ ಆರಂಭಿಸಲಾಯಿತು. ಪ್ರಾಧ್ಯಾಪಕರಾದ ಪ್ರೊ. ಲೋಕೇಶ್, ಜೆ. ಸುಧೀರ್ ರೆಡ್ಡಿ, ಸೂಪರ್ ಕ್ರಾಫ್ಟ್ 3ಡಿ ಪ್ರೈ.ಲಿ.ನ ವ್ಯವಸ್ಥಾಪಕ ನಿರ್ದೇಶಕ ಮಾಲತೇಶ್, ಮಹಾವಿದ್ಯಾಲಯದ ಡೀನ್ ಡಾ.ವಿ. ಶ್ರೀಧರ್, ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಆರ್. ಶೆಟ್ಟಿ, ಇಒಎಸ್ ಜಿಎಂಬಿಎಚ್‌ನ ದೇಶೀಯ ವ್ಯವಸ್ಥಾಪಕ ಪ್ರಕಾಸಂ ಆನಂದ್, ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಡಾ.ಎಲ್. ಜ್ಯೋತಿಷ್ ಕುಮಾರ್ ಹಾಗೂ ಪ್ರಾಂಶುಪಾಲ ಡಾ.ಎಚ್.ಸಿ. ನಾಗರಾಜ್ ಇದ್ದರು

ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ನೇತೃತ್ವದಲ್ಲಿ ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವು ಭಾನುವಾರ ಏರ್ಪಡಿಸಿದ ಕಾರ್ಯಕ್ರಮದಲ್ಲಿ ದಿನಪತ್ರಿಕೆ ವಿತರಕರಿಗೆ ದಿನಸಿ ಕಿಟ್‌ಗಳನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ವಿತರಿಸಿದರು. ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಮುಖಂಡರಾದ ಕೆ.ಎಂ. ನಾಗರಾಜ್, ಚೆಲುವರಾಯಸ್ವಾಮಿ, ಕೆ. ಚಂದ್ರಶೇಖರ್ ಮತ್ತಿತರರು ಇದ್ದರು

ಅರುಣ್‌ಸಿಂಗ್ ಇಂದಿನಿಂದ ರಾಜ್ಯ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ಅರುಣ್‌ಸಿಂಗ್ ರಾಜ್ಯದ ನಾಲ್ಕು ದಿನಗಳ ಪ್ರವಾಸಕ್ಕಾಗಿ ಸೋಮವಾರ (ಆ.30) ನಗರಕ್ಕೆ ಆಗಮಿಸಲಿದ್ದಾರೆ. ಮೈಸೂರು, ಚನ್ನರಾಯಪಟ್ಟಣ, ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ನಿಗದಿಯಾಗಿರುವ ಪಕ್ಷದ ಸಭೆಗಳಲ್ಲಿ ಅವರು ಭಾಗವಹಿಸಲಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಬಳಿಕ ಅವರು ಇದೇ ಮೊದಲ ಬಾರಿ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ. ಸೋಮವಾರ ಸಂಜೆ ಬೆಂಗಳೂರಿಗೆ ಬಂದು ಅಲ್ಲಿಂದ ನೇರವಾಗಿ ಮೈಸೂರಿಗೆ ತೆರಳಲಿದ್ದಾರೆ.

ಆ.31 ರಂದು ಬೆಳಿಗ್ಗೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಬಳಿಕ ಅವರು ಮೈಸೂರು, ಮೈಸೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲಾ ಮಟ್ಟದ ಪದಾಧಿಕಾರಿಗಳ ಸಭೆ, ಜಿಲ್ಲಾ ಕೋರ್ ಕಮಿಟಿ ಮತ್ತು ಮಂಡಲ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳ ಸಭೆ ನಡೆಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ಧರಾಜು ತಿಳಿಸಿದ್ದಾರೆ.

ಸೆಪ್ಟೆಂಬರ್ 1 ರಂದು ಹಾಸನ ಮತ್ತು ಮಂಡ್ಯ ಜಿಲ್ಲಾ ಪದಾಧಿಕಾರಿಗಳ ಸಭೆ ಚನ್ನರಾಯಪಟ್ಟಣದಲ್ಲಿ ನಡೆಯಲಿದೆ. ಜಿಲ್ಲಾ ಪ್ರಮುಖ ನಾಯಕರ ಸಭೆ, ಮಂಡಲ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸೆಪ್ಟೆಂಬರ್ 2 ರಂದು ಬೆಂಗಳೂರಿನ ಮಲ್ಲೇಶ್ವರದ ಹವ್ಯಕ ಭವನದಲ್ಲಿ ಬೆಂಗಳೂರು, ದಕ್ಷಿಣ ಮತ್ತು ಕೇಂದ್ರ ಜಿಲ್ಲೆಯ ಪದಾಧಿಕಾರಿಗಳ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 2.45 ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಿಂದ ಹುಬ್ಬಳ್ಳಿಗೆ ತೆರಳಿ ಅಲ್ಲಿ ಅವರು ಪೂರ್ವ ನಿರ್ಧರಿತ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಂಜೆ ಬೆಂಗಳೂರಿಗೆ ವಾಪಸ್ ಬರಲಿದ್ದು, ಆ ಸಂದರ್ಭದಲ್ಲಿ ಪಕ್ಷದ ರಾಜ್ಯ ನಾಯಕರು ಅರುಣ್‌ಸಿಂಗ್ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಸೆ.3 ರ ಬೆಳಿಗ್ಗೆ ಅವರು ದೆಹಲಿಗೆ ಹಿಂತಿರುಗುವರು.

ಡಿಕೆಶಿ, ಸಿದ್ದರಾಮಯ್ಯ ಫೋಟೊ ಫ್ರೆಂಡ್ಸ್: ಶ್ರೀರಾಮುಲು ಟೀಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ ದೆಹಲಿಗೆ ಹೋದಾಗ ಸ್ನೇಹಿತರಂತೆ ಇರುತ್ತಾರೆ. ರಾಜ್ಯಕ್ಕೆ ಮರಳಿದಾಗ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿಗಿಳಿಯುತ್ತಾರೆ' ಎಂದು ಸಾರಿಗೆ ಸಚಿವ ಶ್ರೀರಾಮುಲು ಟೀಕಿಸಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಶಿವಕುಮಾರ್ ಮತ್ತು ಸಿದ್ದರಾಮಯ್ಯ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಎದುರು ಮಾತ್ರ ಕೈಕುಲುಕುತ್ತಾರೆ. ಅವರ ಎದುರು ಫೋಟೊ ಫ್ರೆಂಡ್ಸ್ ಆಗಿರಲಿದ್ದು, ಹೊರಗೆ ಬಂದಾಗ ಮುಂದಿನ ಮುಖ್ಯಮಂತ್ರಿ ಸ್ಥಾನಕ್ಕೆ ಹಗಲು ಕನಸು ಕಾಣುತ್ತಾರೆ' ಎಂದು ವ್ಯಂಗ್ಯವಾಡಿದರು.

'ನಷ್ಟದಲ್ಲಿರುವ ಸಾರಿಗೆ ಇಲಾಖೆಯನ್ನು ಲಾಭದತ್ತ ಕೊಂಡೊಯ್ಯಲು ಕೆಲವು ಯೋಜನೆಗಳನ್ನು ರೂಪಿಸಲಾಗುತ್ತಿದೆ. ತೈಲ ಬೆಲೆ ಏರಿಕೆಯಾಗುತ್ತಿರುವ ಈ ಸಂದರ್ಭದಲ್ಲಿ ಇಲೆಕ್ಟ್ರಿಕ್ ಬಸ್ ಓಡಿಸಿದರೆ ಹೇಗೆ ಎನ್ನುವ ಕುರಿತು ಮುಖ್ಯಮಂತ್ರಿ ಹಾಗೂ ಕೇಂದ್ರದ ಜೊತೆ ಚರ್ಚಿಸಲಾಗಿದೆ' ಎಂದರು.

ಪೋಷಕರ ಮಡಿಲು ಸೇರಿತು ತಪ್ಪಿಸಿಕೊಂಡಿದ್ದ ಮಗು

ಹರಪನಹಳ್ಳಿ: ಪಟ್ಟಣದ ಬಡಾವಣೆಯೊಂದರ ಮನೆಯೊಂದರಿಂದ ತಪ್ಪಿಸಿಕೊಂಡಿದ್ದ ಎರಡು ವರ್ಷದ ಹೆಣ್ಣುಮಗು ಒಂದೂವರೆ ಗಂಟೆಯಲ್ಲಿ ಮತ್ತೆ ಪೋಷಕರ ಮಡಿಲು ಸೇರಿದೆ.

ಶ್ರೀನಿಧಿ ಎನ್ನುವ ಮಗು ಆಕಸ್ಮಿಕವಾಗಿ ಮನೆಯಿಂದ ಹೊರಬಂದಿತ್ತು. ಆಟವಾಡುತ್ತಾ ಪಟ್ಟಣದ ಮುಖ್ಯರಸ್ತೆಗೆ ಬಂದಿತ್ತು. ಸ್ಟೇಟ್ ಬ್ಯಾಂಕ್ ಮೈಸೂರು ಮುಂಭಾಗ ಅಳುತ್ತಾ ನಿಂತಿದ್ದ ಮಗುವನ್ನು ಇಬ್ಬರು ಕರೆದುಕೊಂಡು ಹೋಗಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದರು.

ಪಿಎಸ್‌ಐ ಸಿ. ಪ್ರಕಾಶ್ ಅವರ ತಂಡ ಮಗುವಿನ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟರು.

ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಮಗುವಿನ ಫೋಟೊ ಹರಿದಾಡಿದ ಕೆಲ ಗಂಟೆಗಳಲ್ಲಿಯೇ ಮಗುವಿನ ತಂದೆ ಮಂಜುನಾಥ್ ಠಾಣೆಗೆ ಬಂದು ಮಗು ತಮ್ಮದು ಎಂದು ತಿಳಿಸಿದರು. ಮಗು ಸಹ ತಂದೆ ಬಳಿ ಹೋಯಿತು. ಇದನ್ನು ಗಮನಿಸಿದ ಪೊಲೀಸರು ಮಗುವಿನ ಬಗ್ಗೆ ಕಾಳಜಿ ವಹಿಸುವಂತೆ ತಿಳಿವಳಿಕೆ ಹೇಳಿ ಪಾಲಕರಿಗೆ ಒಪ್ಪಿಸಿದರು.

'ಬದುಕು ರೂಪಿಸಿದ ನ್ಯಾಷನಲ್ ಕಾಲೇಜು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಷನಲ್ ಕಾಲೇಜು ಸಾಕಷ್ಟು ಮಂದಿ ಸಾಧಕರನ್ನು ಈ ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ. ಇಂತಹ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ ಎಂಬುದು ಹೆಮ್ಮೆಯ ವಿಷಯ' ಎಂದು ಆಂತರಿಕ ಭದ್ರತಾ ವಿಭಾಗದ ಎಡಿಜಿಪಿ ಹಾಗೂ ನ್ಯಾಷನಲ್ ಕಾಲೇಜಿನ ಹಳೆ ವಿದ್ಯಾರ್ಥಿ ಅರುಣ್ ಚಕ್ರವರ್ತಿ ಹೇಳಿದರು.

ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ನಡೆದ ಮೂರು ದಿನಗಳ ಸ್ಪರ್ಧಾತ್ಮಕ ಪರೀಕ್ಷೆಯ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ನನ್ನ ಬೆಳವಣಿಗೆಯಲ್ಲಿ ನ್ಯಾಷನಲ್ ಕಾಲೇಜಿನ ಕೊಡುಗೆ ಸಾಕಷ್ಟಿದೆ. ಈ ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಸಾಮಾಜಿಕ ಸೇವೆಯ ಅಗತ್ಯವನ್ನು ತಿಳಿಸಿಕೊಡುತ್ತದೆ. ಸಾಮಾಜಿಕ ಜವಾಬ್ದಾರಿ ಹಾಗೂ ಉನ್ನತ ಆಲೋಚನೆಗಳೊಂದಿಗೆ ಬದುಕುವುದನ್ನೂ ಕಲಿಸುತ್ತದೆ. ಇಂತಹ ಕಾರ್ಯವನ್ನು ನ್ಯಾಷನಲ್ ಕಾಲೇಜು ಹಿಂದಿನಿಂದಲೂ ಮಾಡಿಕೊಂಡು ಬಂದಿದೆ' ಎಂದರು.

ಇದೇ 24ರಿಂದ 27ರವರೆಗೂ ನಡೆದ ಈ ಕಾರ್ಯಾಗಾರದಲ್ಲಿ ಹಲವು ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಂಡಿದ್ದರು.

ಕಾಲೇಜಿನ ವತಿಯಿಂದ ಅರುಣ್ ಚಕ್ರವರ್ತಿ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಎ.ಎಚ್.ರಾಮರಾವ್, ಕಾರ್ಯದರ್ಶಿ ಪ್ರೊ. ಎಸ್.ಎನ್. ನಾಗರಾಜ ರೆಡ್ಡಿ, ಪ್ರಾಂಶುಪಾಲೆ ಅನ್ನಪೂರ್ಣಮ್ಮ, ಕಾಲೇಜು ಅಧ್ಯಾಪಕ ಮಂಡಳಿ ಕಾರ್ಯದರ್ಶಿ ಪ್ರೊ. ಪಿ.ಎಲ್.ರಮೇಶ್ ಇದ್ದರು.

ಪೀಣ್ಯ ದಾಸರಹಳ್ಳಿ ಸಮೀಪದ ಜಾಲಹಳ್ಳಿ ಕ್ರಾಸ್‌ನಲ್ಲಿರುವ ಕೃಷ್ಣಚಂದ್ರ ಕಲ್ಯಾಣಮಂಟಪದಲ್ಲಿ ನಡೆದ ಪೊಲೀಸ್ ಇಲಾಖೆಯ ಜನಸಂಪರ್ಕ ಸಭೆಯಲ್ಲಿ ಡಿಸಿಪಿ ಧರ್ಮೇಂದ್ರ ಕುಮಾರ್ ಹಾಗೂ ಸಹಾಯಕ ಪೊಲೀಸ್ ಆಯುಕ್ತ ಅರುಣ್ ನಾಗೇಗೌಡ, ಪೀಣ್ಯ ಠಾಣೆ ಇನ್‌ಸ್ಪೆಕ್ಟರ್ ಎಂ. ಬಾಲಾಜಿ ಅವರು ಅಹವಾಲುಗಳನ್ನು ಸ್ವೀಕರಿಸಿದರು.

'ಬಿಜೆಪಿಯವರು ಕ್ಷಮಾ ಯಾತ್ರೆ ಮಾಡಲಿ'

ಪ್ರಜಾವಾಣಿ ವಾರ್ತೆ

ಕಲಬುರ್ಗಿ: 'ನಾಲ್ವರು ಕೇಂದ್ರ ಸಚಿವರು ಈಚೆಗೆ ಜನಾಶೀರ್ವಾದ ಯಾತ್ರೆ ನಡೆಸಿದರು. ಕೋವಿಡ್ ಸಂದರ್ಭದಲ್ಲಿ ಸಮರ್ಪಕವಾಗಿ ಬೆಡ್, ಆಮ್ಲಜನಕ, ರೆಮ್‌ಡಿಸಿವಿರ್ ಚುಚ್ಚುಮದ್ದು ನೀಡದೇ ವಿಫಲರಾಗಿದ್ದಕ್ಕೆ ಜನರ ಕ್ಷಮೆ ಕೇಳಲು ಕ್ಷಮಾ ಯಾತ್ರೆ ಮಾಡಬೇಕಿತ್ತು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಟೀಕಿಸಿದರು.

'ರಾಜ್ಯದಲ್ಲಿ ಜನರು ಕೋವಿಡ್‌ನಿಂದ ಸಂಕಷ್ಟದಲ್ಲಿದ್ದು, ಬೆಲೆ ಏರಿಕೆಯಿಂದಲೂ ತತ್ತರಿಸಿದ್ದಾರೆ. ಅಚ್ಛೆ ದಿನ್ ಭರವಸೆ ನೀಡಿ ಅತ್ಯಂತ ಕೆಟ್ಟ ದಿನಗಳಲ್ಲಿ ನರಳುವಂತೆ ಮಾಡಿದ್ದಕ್ಕೆ, ₹ 13 ಸಾವಿರ ಕೋಟಿ ಜಿಎಸ್‌ಟಿ ಅನುದಾನ ಬಿಡುಗಡೆ ಮಾಡಿಸಲು ಆಗದಿದ್ದುದಕ್ಕೆ ಸಚಿವರು ಕ್ಷಮೆ ಯಾತ್ರೆ ನಡೆಸಬೇಕಿತ್ತು' ಎಂದು ಹೇಳಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ಕೋವಿಡ್ ವೇಳೆ ರಾಜ್ಯ ಸರ್ಕಾರ ₹ 2 ಸಾವಿರ ಕೋಟಿಯಷ್ಟು ಭ್ರಷ್ಟಾಚಾರ ಎಸಗಿದೆ. ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬದವರಿಗೆ ರಾಜ್ಯ ಸರ್ಕಾರವು ತಲಾ ₹ 5 ಲಕ್ಷ ಪರಿಹಾರ ನೀಡಬೇಕು' ಎಂದೂ ಒತ್ತಾಯಿಸಿದರು.

'ಯಾದಗಿರಿಯಲ್ಲಿ ಕೇಂದ್ರ ಸಚಿವರ ಸ್ವಾಗತದ ವೇಳೆ ಗಾಳಿಯಲ್ಲಿ ಗುಂಡುಹಾರಿಸಿದ್ದು ಉತ್ತರ ಪ್ರದೇಶ ಮತ್ತು ಬಿಹಾರದ ಸಂಸ್ಕೃತಿಯಾಗಿದ್ದು, ಅದನ್ನು ಬಿಜೆಪಿ ರಾಜ್ಯದಲ್ಲಿ ಪರಿಚಯಿಸುತ್ತಿದೆ. ಇದು ನಾಚಿಕೆಗೇಡು' ಎಂದು ಹೇಳಿದರು.

ಜಮಖಂಡಿ: ನಾಲ್ಕು ಜೀವ ತೆಗೆದ 21 ಗುಂಟೆ ಆಸ್ತಿ!

ಆರ್.ಎಸ್.ಹೊನಗೌಡ

ಜಮಖಂಡಿ: ಕೇವಲ 21 ಗುಂಟೆ ಜಮೀನಿನ ವ್ಯಾಜ್ಯಕ್ಕೆ ನಾಲ್ಕು ಜೀವಗಳು ಬಲಿಯಾದ ತಾಲ್ಲೂಕಿನ ಮಧುರಖಂಡಿ ಗ್ರಾಮ ಅಕ್ಷರಶಃ ತತ್ತರಿಸಿದೆ.

ಮಳೆಯ ನೀರಿನೊಂದಿಗೆ ಶನಿವಾರ ರಾತ್ರಿ ಹರಿದ ರಕ್ತದ ಓಕುಳಿ ಇಡೀ ಗ್ರಾಮವನ್ನು ಆತಂಕದ ಛಾಯೆಗೆ ದೂಡಿದೆ. ಊರಿನಲ್ಲಿ ನೀರವ ಮೌನ ಆವರಿಸಿದೆ.

ಪಕ್ಕದ ಜಮೀನಿನ ಪುಟಾಣಿ ಮನೆತನದವರೊಂದಿಗೆ ಮಧುರಖಂಡಿಯ ಮುದರಡ್ಡಿ ಕುಟುಂಬದವರು ಹೊಂದಿದ್ದ ಆಸ್ತಿಯ ವ್ಯಾಜ್ಯ ಸಹೋದರರಾದ ಹಣಮಂತ ಮುದರಡ್ಡಿ (45), ಬಸವರಾಜ (37), ಈಶ್ವರ (35), ಮಲ್ಲಿಕಾರ್ಜುನ (33) ಅವರ ಕಗ್ಗೊಲೆಗೆ ಕಾರಣವಾಗಿತ್ತು. ನಾಲ್ವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು.

Br. Nelamangala: Paramanna Layout, B H Road, Nelamangala, Bangalore-562 123 Ph: 08023217798 :- 15535500000748,15535500000763,15536100155288,15536100155544,15536100155551,15536100155569,15536100155577,15536100155601,15536100155619,15536100155635,15536400033573,15536400035669,15536400035677,15536400035958,15536400036006,15536400036063,15536400036725,15536400037061,15536400037103,15536400037152,15536400037202,15536400037400,15536400037426,15536400037434,15536400037467,15536400037475,15536400037640,15536400037939,15536400037988,15536400037996,15536400038002,15536400038044,15536400038051,15536400038267,15536400040115,15536400047581,15536400047789,15536400047953,15536400048746,15536400048795,15536400048902,15536400048977,15536400049306,15536400049645,15536400049876,15536400049967,15536400049975,15536400049983,15536400050486,15536400050833,15536400050957,15536400051153,15536400051674,15536400052516,15536400052789,15536400052839,15536400052946,15536400053498,15536400053597,15536400054223,15536400054231,15536400054249,15536400054355,15536400055576. **Br.Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore-560049 :-** 21636200003479,21636200003552,21636200002364,21636200002851,21636200003446, 21636400022709,21636400022691,21636400022642,21636400022881,21636400022899,21636400023129, 21636400015976,21636400023517, 21636400023533, 21636400023715, 21636400023822,21636400024671, 21636400021263, 21636400024945, 21636400024960,21636400024986,21636400025009, 21636400024978, 21636400025157,21636400025116, 21636400025124, 21636400025199, 21636400025355,21636400015026,21636400023137, 21636400015828, 21636400025405.

Bangalore 28-08-2021 Vice President & Zonal Head

'ಮುಖ್ಯಮಂತ್ರಿ, ರಾಜ್ಯ ಅಧ್ಯಕ್ಷರ ಜೊತೆಯಲ್ಲೇ ರಾಜ್ಯ ಪ್ರವಾಸ'

ಶಿಕಾರಿಪುರ: 'ನಾನು ಒಬ್ಬನೇ ರಾಜ್ಯ ಪ್ರವಾಸ ಮಾಡುವುದಿಲ್ಲ. ಮುಖ್ಯಮಂತ್ರಿ, ರಾಜ್ಯ ಘಟಕದ ಅಧ್ಯಕ್ಷ ಹಾಗೂ ಸಚಿವರ ಜತೆ ಪ್ರವಾಸ ಮಾಡಲಿದ್ದು, ಪಕ್ಷ ಸಂಘಟಿಸುತ್ತೇನೆ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಪಟ್ಟಣದಲ್ಲಿ ಭಾನುವಾರ ತಾಲ್ಲೂಕು ಮಟ್ಟದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಗಣೇಶ ಹಬ್ಬದ ನಂತರ ಪ್ರವಾಸ ಆರಂಭಿಸುತ್ತೇನೆ. 140 ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಿಸಲು ಮುಂದಾಗುತ್ತೇನೆ' ಎಂದು ಹೇಳಿದರು.

'ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಯಾರೂ ನನಗೆ ಒತ್ತಡ ಹಾಕಿರಲಿಲ್ಲ. ರಾಜಕೀಯವಾಗಿ ಬೇರೆಯವರಿಗೆ ಅವಕಾಶ ನೀಡಲು ರಾಜೀನಾಮೆ ನೀಡಿದ್ದೆ' ಎಂದು ಅವರು ಹೇಳಿದರು.

ಮೀನು ಹಿಡಿಯಲು ಹೋದ ಇಬ್ಬರು ನೀರುಪಾಲು

ಹಾವೇರಿ: ರಾಣೆಬೆನ್ನೂರು ತಾಲ್ಲೂಕಿನ ಚೌಡಯ್ಯದಾನಪುರ ಗ್ರಾಮದ ಸಮೀಪ ತುಂಗಭದ್ರಾ ನದಿಯಲ್ಲಿ ಭಾನುವಾರ ಮೀನು ಹಿಡಿಯಲು ಹೋಗಿದ್ದ ಇಬ್ಬರು ನೀರುಪಾಲಾಗಿದ್ದಾರೆ.

ಹಾವೇರಿ ತಾಲ್ಲೂಕಿನ ಗುತ್ತಲ ಪಟ್ಟಣದ ಫಕ್ಕೀರೇಶ ಹೊನ್ನಪ್ಪ ಮಣ್ಣೂರ (23) ಮತ್ತು ಯಲ್ಲಪ್ಪ ಫಕ್ಕೀರಪ್ಪ ಕುಂಬಾರ (34) ನೀರುಪಾಲಾದವರು. ಯುವಕರ ಪತ್ತೆಗೆ ಪೊಲೀಸರು ಕಾರ್ಯಾಚರಣೆ ಕೈಗೊಂಡಿದ್ದು, ಇದುವರೆಗೂ ಸುಳಿವು ಸಿಕ್ಕಿಲ್ಲ.

ನದಿಯಲ್ಲಿ ಸ್ವಲ್ಪ ಮೀನುಗಳನ್ನು ಹಿಡಿದು, ದಂಡೆಗೆ ತಂದು ಸುರಿದಿದ್ದಾರೆ. ನಂತರ ಸ್ನಾನಕ್ಕೆಂದು ನದಿಗೆ ಇಳಿದಾಗ ಒಬ್ಬ ಯುವಕ ಕೊಚ್ಚಿಕೊಂಡು ಹೋಗಿದ್ದಾನೆ. ಆತನನ್ನು ರಕ್ಷಿಸಲು ಹೋದ ಮತ್ತೊಬ್ಬ ಯುವಕ ಕೂಡ ನೀರು ಪಾಲಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ರಾಣೆಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

'ವಿದ್ಯಾಭ್ಯಾಸಕ್ಕೆ ಅಗತ್ಯವಿದ್ದ ವಸ್ತು ಖರೀದಿಸಿದೆ'

ನನಗೆ ವಿದ್ಯಾರ್ಥಿ ವೇತನ ನೀಡಿದ್ದಕ್ಕೆ 'ಪ್ರಜಾವಾಣಿ' ಸಂಸ್ಥೆಗೆ ನಮ್ಮ ಕುಟುಂಬದಿಂದ ಧನ್ಯವಾದಗಳು. ಸ್ಕಾಲರ್‌ಶಿಪ್‌ನಿಂದ ವಿದ್ಯಾಭ್ಯಾಸಕ್ಕೆ ಅಗತ್ಯವಿದ್ದ ವಸ್ತುಗಳನ್ನು ಖರೀದಿಸಿದೆ. ಹಣವನ್ನು ಸದ್ವಿನಿಯೋಗ ಮಾಡಿಕೊಂಡೆ.
ಸಿ.ಶ್ರೀವಿದ್ಯಾ, ಗೌರಿಬಿದನೂರು

ಶುಲ್ಕ ಪಾವತಿಗೆ ನೆರವಾಯಿತು

ಸ್ಕಾಲರ್‌ಶಿಪ್ ಹಣದಿಂದ ಕಾಲೇಜಿನ ಪ್ರವೇಶ ಶುಲ್ಕವನ್ನು ಕಟ್ಟಿದೆ. ಆರ್ಥಿಕ ಕಷ್ಟದ ಸಂದರ್ಭದಲ್ಲಿ 'ಪ್ರಜಾವಾಣಿ'ಯು ನನ್ನ ವಿದ್ಯಾಭ್ಯಾಸಕ್ಕೆ ನೆರವಾಗಿದೆ. ಅದರ ಋಣವನ್ನು ಎಂದಿಗೂ ಮರೆಯುವುದಿಲ್ಲ.
ನಂದಾದೇವಿ ಕಣವಿ, ಹುಬ್ಬಳ್ಳಿ

'ಜಾತಿ ಗಣತಿ: ಬಿಜೆಪಿಯಿಂದ ಕುಂಟು ನೆಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಗಣತಿ ವರದಿಯನ್ನು ಒಪ್ಪಿಕೊಳ್ಳಲು ತಯಾರಿಲ್ಲದ ಬಿಜೆಪಿ ನಾಯಕರು, ಅದು ಸೋರಿಕೆಯಾಗಿದೆ, ವೈಜ್ಞಾನಿಕವಾಗಿಲ್ಲ ಎಂಬ ಕುಂಟು ನೆಪ ಹೇಳುತ್ತಿದ್ದಾರೆ. ಸೋರಿಕೆ ಬಗ್ಗೆ ಖಚಿತ ಮಾಹಿತಿ ಸರ್ಕಾರದ ಬಳಿ ಇದ್ದರೆ, ಅದರ ಬಗ್ಗೆ ತನಿಖೆ ನಡೆಸಲಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

'ಜಾತಿ ಗಣತಿ ವರದಿ ಬಗ್ಗೆ 'ಪ್ರಜಾವಾಣಿ'ಯ ಆ. 28ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ನನ್ನ ಲೇಖನಕ್ಕೆ ಬಿಜೆಪಿಯವರು ನೀಡಿರುವ ಪ್ರತಿಕ್ರಿಯೆಗಳು ರಾಜಕೀಯ ಪ್ರೇರಿತ' ಎಂದೂ ಆರೋಪಿಸಿದ್ದಾರೆ.

'ಈ ವರದಿಯನ್ನು ನನ್ನ ಸರ್ಕಾರದ ಅವಧಿಯಲ್ಲೇ ಪೂರ್ಣಗೊಳಿಸಿ ಸ್ವೀಕರಿಸುವುದು ಉದ್ದೇಶವಾಗಿತ್ತು. ಅಂಕಿಅಂಶಗಳು ಸಂಗ್ರಹವಾಗಿದ್ದರೂ, ವಿಶ್ಲೇಷಣೆ ಪೂರ್ಣಗೊಂಡಿರದ ಕಾರಣ ಆಗಿರಲಿಲ್ಲ. ವರದಿಯನ್ನು ಕಾಂಗ್ರೆಸ್ ನಾಯಕರು ವಿರೋಧಿಸಿದ್ದರು ಎನ್ನುವುದು ಕಪೋಲಕಲ್ಪಿತ. ಯಾರು, ಯಾವಾಗ, ವಿರೋಧಿಸಿದ್ದರು ಎನ್ನುವುದನ್ನು ಬಿಜೆಪಿ ನಾಯಕರು ತಿಳಿಸಲಿ' ಎಂದಿದ್ದಾರೆ.

'ವರದಿಯ ವೈಜ್ಞಾನಿಕತೆ ದೃಢೀಕರಿಸಬೇಕಾದವರು ತಜ್ಞರು. ಸೋರಿಕೆಯಾಗಿದೆ ಎನ್ನಲಾದ ಅಂಶಗಳೇ ಜಾತಿ ಗಣತಿಯ ಮೂಲ ವರದಿಯಲ್ಲಿ ಇವೆ ಎಂದು ಬಿಜೆಪಿ ನಾಯಕರು ಹೇಗೆ ಹೇಳಲು ಸಾಧ್ಯ. ಸರ್ಕಾರದ ಬಳಿ ಇರಬೇಕಾದ ಮೂಲ ವರದಿ ಬಿಜೆಪಿಯ ರಾಜ್ಯ ಕಚೇರಿಯಲ್ಲಿದೆಯೇ? ಮುಖ್ಯಮಂತ್ರಿ ಕಚೇರಿಯಿಂದ ಸೋರಿಕೆ ಆಗಿದೆಯೇ' ಎಂದು ಪ್ರಶ್ನಿಸಿದ್ದಾರೆ.

'ವರದಿ ಸೋರಿಕೆಯಾಗಿದ್ದ ಮಾತ್ರಕ್ಕೆ ಅದರ ಪಾವಿತ್ರ್ಯ ಕಳೆದುಹೋಗುವುದಿಲ್ಲ. ಪರಿಶೀಲನೆ ನಡೆಯಬೇಕಾಗಿರುವುದು ಸಮೀಕ್ಷೆಯ ವಿಶ್ವಾಸಾರ್ಹತೆ ಬಗ್ಗೆ. ಅದರ ಬಗ್ಗೆ ಚರ್ಚೆ ನಡೆಯಲಿ' ಎಂದು ಒತ್ತಾಯಿಸಿದ್ದಾರೆ.

ಒಳನೋಟ

ಬೆಂಗಳೂರು: 'ಬಾಲ್ಯಕ್ಕೆ ಮದುವೆ ಸಂಕೋಲೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಆಗಸ್ಟ್ 29) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಬಾಲ್ಯವಿವಾಹಕ್ಕೆ ಕೊನೆ ಯಾವಾಗ ?

'ಪ್ರಕೃತಿ ಮಡಿಲಲ್ಲಿ ಆನಂದವನ್ನು ಸವಿಯಬೇಕಾದ ಹಸುಳೆಯಂತಹ ಮಕ್ಕಳು ವಿವಾಹದ ಬಂಧನದಲ್ಲಿ ಸಿಲುಕುತ್ತಿರುವುದು ವಿಷಾದನೀಯ. ಪೋಷಕರು ಮಕ್ಕಳ ಮನಸ್ಸು ತಿಳಿಯದ ಅರಿತು, ಹೆಜ್ಜೆ ಹಾಕಬೇಕು. ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಬಾಲ್ಯ ವಿವಾಹ ಮಾಡಲು ಮುಂದಾಗುತ್ತಿರುವುದು ವಿಷಾದನೀಯ. ಮಕ್ಕಳ ಬಾಲ್ಯವನ್ನು ಕಿತ್ತುಕೊಳ್ಳುವ ಬದಲಾಗಿ ಸರ್ಕಾರದ ಯೋಜನೆಗಳನ್ನು ಸದುಪಯೋಗ ಪಡಿಸಿಕೊಂಡು, ಮಕ್ಕಳಿಗೆ ಉಜ್ವಲ ಭವಿಷ್ಯ ಒದಗಿಸಬೇಕು.'
ಕೃತಿ ಹಿರೇಮಠ, ಗೋಕಾಕ

ಅರಿವಿನಮಟ್ಟ ವಿಸ್ತರಿಸಲಿ

'ಬಾಲ್ಯ ವಿವಾಹವು ಸಹಸ್ರಾರು ವರ್ಷಗಳಿಂದ ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿದೆ. ಶಿಕ್ಷಣ ಮಟ್ಟ ಮೂಲಕ ಅರಿವು ಹೆಚ್ಚಾದಂತೆ ಬಾಲ್ಯ ವಿವಾಹದ ಶೇಕಡಾವಾರು ಪ್ರಮಾಣದಲ್ಲಿ ಕಡಿಮೆ ಆಗುತ್ತಾ ಬಂದಿದೆ. ಆದರೆ, ಸಂಪೂರ್ಣವಾಗಿ ನಿಂತಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಬಡತನ ಮತ್ತು ಅನಕ್ಷರತೆ. ಶಿಕ್ಷಣ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಲ್ಲಿ ಈ ರೀತಿಯ ಬಾಲ್ಯ ವಿವಾಹ ಹೆಚ್ಚಾಗಿ ಜರುಗುತ್ತಿವೆ. ಬಾಲ್ಯ ವಿವಾಹ ಮಾಡಲು ಮುಂದಾಗುವ ಕುಟುಂಬಗಳಿಗೆ ಆಪ್ತ ಸಮಾಲೋಚನೆ ಮಾಡುವ ಕಾರ್ಯ ನಡೆಯಬೇಕು. ಕೇವಲ ಕಾನೂನುಗಳ ಮೂಲಕ ಬಾಲ್ಯವಿವಾಹ ತಡೆಗಟ್ಟುವುದು ಕಷ್ಟ.'
ಮಲ್ಲಪ್ಪ ಫ. ಕರೇಣ್ಣನವರ, ಹಾವೇರಿ

'ಇಲಾಖೆಗಳ ಕ್ರಮ ಕೈಗೊಳ್ಳಲಿ'

'ಬಾಲ್ಯವಿವಾಹ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವಿರದ ವಯಸ್ಸಿನಲ್ಲಿ ಮಕ್ಕಳಿಗೆ ಪೋಷಕರು ವಿವಾಹ ಮಾಡುತ್ತಿದ್ದಾರೆ. ಹೆಣ್ಣುಮಕ್ಕಳು ಪ್ರೀತಿ ಪ್ರೇಮದ ಬಲೆಗೆ ಬಿದ್ದು, ಕುಟುಂಬ ಗೌರವಕ್ಕೆ ಧಕ್ಕೆ ತರುತ್ತಾರೆ ಎಂಬ ಕಾರಣಕ್ಕೆ ಕುಟುಂಬದ ಸಮಾಜದ ಭಯದಲ್ಲಿ ಕೆಲವರು ಚಿಕ್ಕವಯಸ್ಸಿನಲ್ಲಿಯೇ ವಿವಾಹ ಮಾಡಿಸುತ್ತಾರೆ. ಇದರಿಂದಾಗಿ ಅವರು ಜೀವನದಲ್ಲಿ ಕಷ್ಟ ಎದುರಿಸಬೇಕಾಗುತ್ತದೆ. ಸಂಬಂಧಪಟ್ಟ ಇಲಾಖೆ ಬಾಲ್ಯ ವಿವಾಹಕ್ಕೆ ಕಡಿವಾಣ ಹಾಕಲು ಕಾರ್ಯಪ್ರವೃತ್ತರಾಗಬೇಕು.'
ಬಸವರಾಜ ಭದ್ರಾಪುರ, ಕುಂಸಿ

ಕಡಿವಾಣಕ್ಕೆ ಕ್ರಮಕೈಗೊಳ್ಳಬೇಕು

'ದೇಶದಲ್ಲಿ ಮದುವೆ ಎಂಬುದು ಮಕ್ಕಳ ಆಟದಂತಾಗಿದೆ. ವಿಫಲ ಬಾಲ್ಯವಿವಾಹಗಳು ತಡವಾಗಿ ಬೆಳಕಿಗೆ ಬರುತ್ತಿವೆ. ಇದಕ್ಕೆ ಕಡಿವಾಣ ಹಾಕಲು ವಿವಾಹ ನೋಂದಣಿ ವ್ಯವಸ್ಥೆಯಲ್ಲಿ ಕೆಲ ಮಾರ್ಪಾಡು ಮಾಡಬೇಕು. ಪ್ರತಿ ವಿವಾಹವೂ ಕಡ್ಡಾಯವಾಗಿ ನೋಂದಣಿ ಮಾಡುವ ವ್ಯವಸ್ಥೆ ರೂಪಿಸಬೇಕು. ವಿವಾಹದ ಪತ್ರವನ್ನು ಪೊಲೀಸ್ ಠಾಣೆಗೆ ನೀಡಿ, ಎರಡೂ ಕುಟುಂಬದ ವಿಳಾಸ ದಾಖಲಿಸಬೇಕು. ಮಾಹಿತಿ ಪರಿಶೀಲನೆ ನಡೆಸಿದ ಬಳಿಕ ಕಾನೂನು ಕ್ರಮ ಜರುಗಿಸಬೇಕು. ಪಾಲಕರ ಮನೋಭಾವವೂ ಬದಲಾಗಬೇಕು.'
ಮಹೇಶ ಶಿವಪ್ಪ ಬೆಳವಣಿಕಿ, ಕೊಪ್ಪಳ

ಜಾಗೃತಿಯ ದಿವ್ಯೌಷಧಿ ಅಗತ್ಯ

'ಕೋವಿಡ್ ಕಾಲಘಟ್ಟದಲ್ಲಿ ಪೋಷಕರು ಹೊರಳಾಗ ನಡೆಸಿ, ಮಕ್ಕಳಿಗೆ ವಿವಾಹ ಮಾಡುತ್ತಿರುವುದು ವಿಷಾದನೀಯ. ಬಾಲ್ಯ ವಿವಾಹ ರಕ್ಷಣೆಗೆ 'ಸುರಕ್ಷಿತ' ಪೋರ್ಟಲ್, 1098 ಸಹಾಯವಾಣಿ ಸೇರಿದಂತೆ ಮುಂತಾದ ಕ್ರಮಗಳನ್ನು ಕೈಗೊಂಡರೂ ಬಾಲ್ಯ ವಿವಾಹ ಪ್ರಕರಣಗಳು ನಡೆಯುತ್ತಲೇ ಇವೆ. ಪೋಷಕರ ಹಾಗೂ ಸಮಾಜದ 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ಎಂಬಂತಾಗಿದೆ. ಇಂತಹ ಜ್ವಲಂತ ಪಿಡುಗನ್ನು ನಿರ್ಮೂಲನೆ ಮಾಡಲು ಜಾಗೃತಿ ಎಂಬ ದಿವ್ಯೌಷಧಿಯೇ ಮದ್ದು. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಇನ್ನಾದರೂ ಬಾಲ್ಯ ವಿವಾಹಕ್ಕೆ ಪೋಷಕರು ಕಡಿವಾಣ ಹಾಕಬೇಕು.'
ಟಿ. ಮಾರುತಿ, ಚಿತ್ರದುರ್ಗ

'ಪಾಲಕರಿಗೆ ತಪ್ಪು ತಿಳಿವಳಿಕೆ'



'ಮದುವೆ ಹೆಣ್ಣು ಮಕ್ಕಳಿಗೆ ಭದ್ರತೆ ಒದಗಿಸುತ್ತದೆ ಎಂಬ ತಪ್ಪು ತಿಳಿವಳಿಕೆ ಪಾಲಕರಲ್ಲಿದೆ. ಇದರಿಂದಾಗಿ ಬಾಲ್ಯವಿವಾಹ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಬಡತನ, ನಿರುದ್ಯೋಗ, ಲೈಂಗಿಕ ಕಿರುಕುಳ, ಅತ್ಯಾಚಾರ, ಕೊಲೆ ಪ್ರಕರಣಗಳು ಪೋಷಕರಲ್ಲಿ ಅಭದ್ರತೆ ಹುಟ್ಟಿಸಿವೆ. ಮುಂದಿನ ಜೀವನದ ಭದ್ರತೆ ಕುರಿತು ಜಾಗೃತಿ ಮೂಡಿಸಬೇಕು. ಅದಕ್ಕಾಗಿ ಹೊಸ ಯೋಜನೆ ರೂಪಿಸಬೇಕು.'
ನಿರ್ಮಲಾ ಎಚ್.ಎಲ್., ಬೆಂಗಳೂರು

ಶಿಕ್ಷಣ

ತಪ್ಪುಗಳು ಪ್ರಯತ್ನ ನಡೆಸುತ್ತಿರುವುದರ ಸಾಕ್ಷಿ

ಹಲವು ವಿದ್ಯಾರ್ಥಿಗಳು ವೃತ್ತಿ ಮತ್ತು ಕೋರ್ಸ್ ಆಯ್ಕೆಯಲ್ಲಿ ಎಡವುತ್ತಿದ್ದಾರೆ. ವಿದ್ಯಾರ್ಥಿಗಳು ಖಚಿತವಾದ ವೃತ್ತಿಯ ಆಯ್ಕೆಯ ನಂತರವೇ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು. ಹಾಗಾದರೆ, ವೃತ್ತಿ ಮತ್ತು ಕೋರ್ಸ್ ಆಯ್ಕೆಯ ಪ್ರಕ್ರಿಯೆ ಹೇಗೆ?

ಪಿಯುಸಿ ನಂತರ.. ವೃತ್ತಿ, ಕೋರ್ಸ್ ಆಯ್ಕೆ ಹೇಗಿರಬೇಕು?

ಪ್ರದೀಪ್ ವೆಂಕಟರಾಮ್

ಕಳೆದ ಕೆಲವು ವಾರಗಳಲ್ಲಿ ನಡೆಸಿದ ಸಂವಾದ ಮತ್ತು ಪ್ರಶ್ನೋತ್ತರಗಳನ್ನು ಅವಲೋಕಿಸಿದ ನಂತರ ಅನೇಕ ವಿದ್ಯಾರ್ಥಿಗಳು ಭವಿಷ್ಯದ ವೃತ್ತಿ ಮತ್ತು ಕೋರ್ಸ್ ಆಯ್ಕೆಯಲ್ಲಿ ಎಡವುತ್ತಿರುವುದು ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳ ಕೆಲವು ಪ್ರತಿಕ್ರಿಯೆಯನ್ನು ಗಮನಿಸಿದರೆ ಈ ಸಂದೇಹಗಳು ಖಾತರಿಯಾಗುವಂತಿದೆ.

- ಪಿಯುಸಿ (ಆರ್ಟ್ಸ್) ನಂತರ ಯಾವ ಕೋರ್ಸ್ ಮಾಡಬಹುದು? ಉದ್ಯೋಗಾವಕಾಶಗಳೇನು?
- ನಾನು ಪಿಯುಸಿ (ವಿಜ್ಞಾನ) ಮಾಡಿದ್ದೇನೆ. ಮುಂದೆ ಸಿಎ ಮಾಡಬಹುದೇ?
- ನಾನು ಬಿಕಾಂ ಮಾಡಿದ್ದೇನೆ. ಈಗ ಎಂಎ (ಅರ್ಥಶಾಸ್ತ್ರ) ಮಾಡಬಹುದೇ?

ಈ ಪ್ರಶ್ನೆಗಳು ಉದಾಹರಣೆಗಳಷ್ಟೇ. ಇಂತಹ ಪ್ರಶ್ನೆಗಳು, ಗೊಂದಲಗಳು ಬರಬಾರದೆಂದಲ್ಲ. ವಾಸ್ತವವಾಗಿ, ವೃತ್ತಿ ಮತ್ತು ಕೋರ್ಸ್ ಆಯ್ಕೆಯಲ್ಲಿ ಸರಿಯಾದ ಪ್ರಕ್ರಿಯೆಯನ್ನು ಅನುಸರಿಸಿದರೆ ಇಂತಹ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಪಿಯುಸಿ ನಂತರದ ಕೋರ್ಸ್ ಆಯ್ಕೆಯಲ್ಲಿ ಇನ್ನೊಂದು ಪ್ರಮುಖ ಸಮಸ್ಯೆಯಿದೆ. ಅನೇಕ ವರ್ಷಗಳಿಂದ, ಮೂಲ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರದ ಕೋರ್ಸ್‌ಗಳಿಂದ ದೂರ ಸರಿಯುತ್ತಿರುವ ವಿದ್ಯಾರ್ಥಿಗಳ ಆಕರ್ಷಣೆ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳತ್ತ ಮುಂದುವರಿಯುತ್ತಿದೆ. ಆರೋಗ್ಯ ಮತ್ತು ಸ್ವಾಸ್ಥ್ಯ ವಲಯದಲ್ಲಿರುವ ಸವಾಲು ಮತ್ತು ಅವಕಾಶಗಳನ್ನು ಗಮನಿಸಿದರೆ ಮೆಡಿಕಲ್ ವೃತ್ತಿಯ ಆಕರ್ಷಣೆ ಸೂಕ್ತವೆನಿಸಿದರೂ ಎಂಜಿನಿಯರಿಂಗ್ ಕೋರ್ಸ್ ಮತ್ತು ವೃತ್ತಿಯ ವಾಸ್ತವಾಂಶಗಳೇ ಬೇರೆ. ಬೇಡಿಕೆಗಿಂತಲೂ ಅಧಿಕವಾದ ಪೂರೈಕೆಯಿಂದ ಎಂಜಿನಿಯರಿಂಗ್ ಪದವೀಧರರಲ್ಲಿ ನಿರುದ್ಯೋಗ ಹೆಚ್ಚಾಗಿ ವಿಧಿಯಿಲ್ಲದೆ ಇನ್ನಿತರ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ಜೊತೆಗೆ, ಬಹುತೇಕ ಎಂಜಿನಿಯರಿಂಗ್ ಪದವೀಧರರಲ್ಲಿ ವೃತ್ತಿ ಸಂಬಂಧಿಸಿದ ಕೌಶಲಗಳ ಕೊರತೆಯಿದೆ ಎಂದು ಉದ್ದಿಮೆಗಳ ಅಭಿಪ್ರಾಯವೂ ಇದೆ. ಈ ಕಾರಣಗಳಿಂದ, ಎಂಜಿನಿಯರಿಂಗ್ ಸೀಟುಗಳು ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗದೆ ಕಳೆದ ಐದು ವರ್ಷಗಳಲ್ಲಿ ದೇಶದ ಸುಮಾರು 400 ಎಂಜಿನಿಯರಿಂಗ್ ಕಾಲೇಜುಗಳು ಮುಚ್ಚಿವೆ.

ಪಿಯುಸಿ ನಂತರದ ಶೈಕ್ಷಣಿಕ ಅವಧಿ 5-8 ವರ್ಷಗಳಷ್ಟೇ; ಆದರೆ, ವೃತ್ತಿಯೆಂದರೆ 30-40 ವರ್ಷಗಳ ದೀರ್ಘಾವಧಿ ಪಯಣ. ಆದ್ದರಿಂದ, ವಿದ್ಯಾರ್ಥಿಗಳು ಖಚಿತವಾದ ವೃತ್ತಿಯ ಆಯ್ಕೆಯ ನಂತರವೇ ಕೋರ್ಸ್‌ಅನ್ನು ಆಯ್ಕೆ ಮಾಡಬೇಕು.

ವೃತ್ತಿ ಮತ್ತು ಕೋರ್ಸ್ ಆಯ್ಕೆಯ ಪ್ರಕ್ರಿಯೆ ಹೇಗೆ?

- **ವೃತ್ತಿ ಮತ್ತು ಕೋರ್ಸ್ ಆಯ್ಕೆ:** ನೀವು ಇಷ್ಟ ಪಡುವ ವೃತ್ತಿಗೂ ನಿಮ್ಮಲ್ಲಿರುವ ಪ್ರತಿಭೆಗೂ ಸಾಮ್ಯತೆ ಇರಬೇಕು. ಶಾಲಾ ಕಾಲೇಜುಗಳಲ್ಲಿ ಸೌಲಭ್ಯವಿದ್ದರೆ ಅಥವಾ ಆನ್‌ಲೈನ್‌ನಲ್ಲಿ ಆಪ್ಟಿಟ್ಯೂಡ್ ಟೆಸ್ಟ್ ಮಾಡಿ, ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಅರಿಯಿರಿ. ಇದರ ಆಧಾರದ ಮೇಲೆ ಸೂಕ್ತವಾದ ವೃತ್ತಿ ಮತ್ತು ಅದರಂತೆ ಕೋರ್ಸ್ ಆಯ್ಕೆಯಿರಲಿ. ಪ್ರಮುಖವಾಗಿ, ಶಿಕ್ಷಣ ಮುಗಿಯುವ ವೇಳೆಗೆ (5-8 ವರ್ಷ) ಆ ವೃತ್ತಿಯ ಕ್ಷೇತ್ರಕ್ಕೆ ಬೇಡಿಕೆಯಿರುತ್ತದೆಯೇ ಎಂದು ಖಚಿತಪಡಿಸಿಕೊಳ್ಳಿ. ಶೈಕ್ಷಣಿಕ ಜೀವನದ ನಿರ್ಣಾಯಕ ಹಂತಗಳಲ್ಲಿ ನಿಮಗೆ ಮಾರ್ಗದರ್ಶನ ಬೇಕಾಗುತ್ತದೆ. ಆದ್ದರಿಂದ, ಮಾರ್ಗದರ್ಶಕರನ್ನು ಗುರುತಿಸಿ.
- **ಜೀವನದ ಧ್ಯೇಯಗಳನ್ನು ನಿಶ್ಚಯಿಸಿ:** ನಿಮ್ಮ ವೃತ್ತಿ ಮತು ಖಾಸಗಿ ಜೀವನದ ಧ್ಯೇಯಗಳೇನು? ಶಿಕ್ಷಣದ ನಂತರದ ಬದುಕಿನ ನಿಮ್ಮ ಕನಸುಗಳೇನು? ಬದುಕಿಗೆ ಅತಿ ಮುಖ್ಯವಾದ, ಈ ಪ್ರಶ್ನೆಗಳ ಬಗ್ಗೆ ಚಿಂತಿಸಿ, ಉತ್ತರಗಳನ್ನು ಕಂಡುಕೊಳ್ಳಿ.
- **ಶಿಕ್ಷಣದ ಅವಶ್ಯಕತೆಗಳನ್ನು ತೀರ್ಮಾನಿಸಿ:** ಸ್ನಾತಕೋತ್ತರ ಪದವಿ ಅಥವಾ ಡಾಕ್ಟರೇಟ್ ಮಾಡಬೇಕೆ? ವಿದೇಶದಲ್ಲಿ ಉನ್ನತ ಶಿಕ್ಷಣದ ಅವಶ್ಯಕತೆಯಿದೆಯೇ? ಜೀವನದ ಧ್ಯೇಯಗಳ ಪ್ರಕಾರ ಎಲ್ಲಿಯವರೆಗೆ ಓದಬೇಕು ಮತ್ತು ಹೆಚ್ಚುವರಿ ಭಾಷೆ, ಕೌಶಲಗಳ ಕೋರ್ಸ್ ಅವಶ್ಯಕತೆಗಳ ಬಗ್ಗೆ ನಿರ್ಧರಿಸಿ.
- **ಸ್ಪರ್ಧಾತ್ಮಕ ಪರೀಕ್ಷೆಗಳು:** ನಿಮ್ಮ ಕೋರ್ಸಿಗೆ ತಕ್ಕಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳನ್ನು ಗುರುತಿಸಿ, ಅಗತ್ಯಕ್ಕೆ ಅನುಗುಣವಾಗಿ ತಯಾರಾಗಿ.
- **ಕಾಲೇಜುಗಳ ಆದ್ಯತೆಗಳನ್ನು ಪರಿಗಣಿಸಿ:** ಕಾಲೇಜಿನ ಸಂಪನ್ಮೂಲಗಳು, ಅಧ್ಯಾಪಕ ವರ್ಗ, ಪ್ಲೇಸ್‌ಮೆಂಟ್, ಗ್ರಂಥಾಲಯ, ಶುಲ್ಕಗಳು, ರ‍್ಯಾಂಕಿಂಗ್ ಇತ್ಯಾದಿಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿ. ಈ ರ‍್ಯಾಂಕಿಂಗ್‌ಗಳ ಮಾಹಿತಿ ಅಂತರ್ಜಾಲದಲ್ಲಿ ಸಿಗುತ್ತದೆ. ನಿಮ್ಮ ಆಯ್ಕೆಗಳ ಹಿಂದೆ ಮಾರ್ಗದರ್ಶಕರ ಬೆಂಬಲ ಇರಬೇಕು. ಸ್ವಲ್ಪ ಸಂಶಯವಿದ್ದರೂ, ಖುದ್ದಾಗಿ ಕಾಲೇಜಿಗೆ ಹೋಗಿ ಪರೀಕ್ಷಿಸಿ.

ನಿಮ್ಮ ವೃತ್ತಿಯ ಸಂಪೂರ್ಣ ಯೋಜನೆಯನ್ನು ವಿವರಗಳೊಂದಿಗೆ ಡೈರಿಯಲ್ಲಿ ದಾಖಲಿಸಿ ಆಗಾಗ ಪರಿಶೀಲಿಸುತ್ತಿರಿ.

ಬದುಕಿನ ನಿಮ್ಮ ಕನಸುಗಳು ಮಹತ್ವಾಕಾಂಕ್ಷೆಯಾಗಿ, ಸಾಧಿಸಬಹುದಾದ ಗುರಿಗಳಾಗಲಿ. ಅದನ್ನು ಸಾಧಿಸಲು ನಿಮ್ಮ ಶಕ್ತಿ, ಸಾಮರ್ಥ್ಯದಲ್ಲಿ ಪ್ರಬಲವಾದ ನಂಬಿಕೆ, ಆತ್ಮವಿಶ್ವಾಸವಿರಲಿ. ಇಂತಹ ಪ್ರಬಲವಾದ ಆತ್ಮವಿಶ್ವಾಸವೇ ನಿಮ್ಮ ಕನಸುಗಳನ್ನು ಸಾಕಾರಗೊಳಿಸಲು ಅತ್ಯವಶ್ಯಕವಾದ ಸ್ವಯಂಪ್ರೇರಣೆ.

(ಲೇಖಕರು: ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ಎಐ ನೆರವಿನೊಂದಿಗೆ ಸರಳ ಇಂಗ್ಲಿಷ್ ಕಲಿಕೆಗೆ 'ತಾರಾ'

ಸುಬ್ರಮಣ್ಯ ಎಚ್.ಎಂ.

ಶಿಕ್ಷಣ ಪರಿವರ್ತನೆಯ ಹಾದಿಗೆ ದಿಕ್ಸೂಚಿ. ಸುಂದರ ಹೂವಿನಂತೆ ಬದುಕು ಅರಳಲು ಶಿಕ್ಷಣವೇ ಶಕ್ತಿ ಎಂಬ ಅರಿವು ಬಂದಾಗಿದೆ. ಈಗಾಗಲೇ ಶಿಕ್ಷಣದೊಂದಿಗೆ ತಂತ್ರಜ್ಞಾನವೂ ಸಮ್ಮಿಳಿತಗೊಂಡಿದೆ. ಆದರೆ, ದೇಶದ ಸಣ್ಣ ಮಟ್ಟದ ನಗರ, ಪಟ್ಟಣ ಪ್ರದೇಶ, ಗ್ರಾಮೀಣ ಭಾಗದ ಶಾಲಾ ವಿದ್ಯಾರ್ಥಿಗಳಿಗೆ ಈಗಲೂ ಇಂಗ್ಲಿಷ್ ಬೆದರು ಬೊಂಬೆಯಾಗಿಯೇ ನಿಂತಿದೆ.

ಈ ನಿಟ್ಟಿನಲ್ಲಿ ಇಂಗ್ಲಿಷ್ ಗೊತ್ತಿಲ್ಲದ ಪರಿಸರದಲ್ಲಿ 'ತಾರಾ' ಇಂಗ್ಲಿಷ್ ಕಲಿಸುವ 'ಶಿಕ್ಷಕಿ'ಯಾಗಿ ಈಗಾಗಲೇ ಹಲವು ರಾಜ್ಯಗಳಲ್ಲಿ ನಿರತಳಾಗಿದ್ದಾಳೆ. ಶಾಲಾ ಪಠ್ಯಕ್ಕೆ ಅನುಗುಣವಾಗಿ ಆರಂಭಿಕ ಹಂತದಿಂದಲೇ ಇಂಗ್ಲಿಷ್ ಕಲಿಕೆ ಇದರ ಹೆಗ್ಗಳಿಕೆ. ಪರಸ್ಪರ ಕ್ರಿಯಾತ್ಮಕ ಸಂವಹನದ ಮೂಲಕ ವಿದ್ಯಾರ್ಥಿಗಳು, ಶಿಕ್ಷಕರನ್ನು ಸಕ್ರಿಯಗೊಳಿಸುವುದೇ ಇದರ ವಿಶೇಷ.

ಏನಿದು 'ತಾರಾ'?

ಇಂಗ್ಲಿಷ್ ಕಲಿಕೆಗೆ ಕೃತಕ ಬುದ್ಧಿಮತ್ತೆ (Artificial Intelligence) ತಂತ್ರಜ್ಞಾನ ನೆರವಿನಿಂದ ರೂಪಿಸಿರುವ ಎಲೆಕ್ಟ್ರಾನಿಕ್ ಉಪಕರಣ. ಧ್ವನಿ ಆಧಾರಿತ 'ತಾರಾ' ಇಂಗ್ಲಿಷ್ ಗೊತ್ತಿಲ್ಲದವರ ಅಚ್ಚುಮೆಚ್ಚಿನ ಶಿಕ್ಷಕಿ. ಕಲಿಕೆ, ಪುನರ್ ಮನನ, ಪ್ರಯೋಗ ಮತ್ತು ಪ್ರಯತ್ನದ ತಂತ್ರಜ್ಞಾನ ಆಧಾರಿತ ವ್ಯವಸ್ಥೆ. ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಅಗತ್ಯವಾಗಿರುವ ಸಂದರ್ಭದಲ್ಲಿ 'ತಾರಾ' ಪ್ರಮುಖ ಪಾತ್ರ ವಹಿಸಿದೆ.

ಪ್ರಶ್ನೆ, ಸಂದೇಹಗಳಿಗೆ ಉತ್ತರ ನೀಡುವ ಧ್ವನಿ ಆಧಾರಿತ ತಂತ್ರಜ್ಞಾನ 'ಅಲೆಕ್ಸಾ' ಮಾದರಿಯಲ್ಲಿ 'ಲರ್ನಿಂಗ್ ಮ್ಯಾಟರ್ಸ್' ಕಂಪನಿಯ ಇಡಿ-ಟೆಕ್ ಸಂಘಟನೆಯಡಿ ಧ್ವನಿ ಆಧಾರಿತ 'ತಾರಾ' ತಂತ್ರಜ್ಞಾನವನ್ನು ರೂಪಿಸಿದೆ. ಸರ್ಕಾರಿ ಹಾಗೂ ಕೆಲವು ಖಾಸಗಿ ಶಾಲೆ ವಿದ್ಯಾರ್ಥಿಗಳು ಇದರಿಂದ ಇಂಗ್ಲಿಷ್ ಕಲಿಯಬಹುದಾಗಿದೆ.

'ತಾರಾ' ಮೂಲಕ ವಿದ್ಯಾರ್ಥಿನಿಯೊಬ್ಬಳು ಇಂಗ್ಲಿಷ್ ಕಲಿಯುತ್ತಿರುವುದು

ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುವುದು, ತಪ್ಪಾಗಿ ವ್ಯಾಕರಣ ಪ್ರಯೋಗ ಮಾಡಿದರೆ ತಿದ್ದುವುದು, ಮಾಹಿತಿ ಮತ್ತು ವಿಶ್ಲೇಷಣೆ ಮೂಲಕ ಮಾರ್ಗದರ್ಶನ ನೀಡುತ್ತದೆ. ಶಾಲಾ ಶಿಕ್ಷಕರೂ ಕೂಡ 'ತಾರಾ' ನೆರವಿನಿಂದ ಇಂಗ್ಲಿಷ್ ಕಲಿಯುತ್ತಿದ್ದಾರೆ. ಎಷ್ಟೋ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವ ಶಿಕ್ಷಕರ ಹೊರೆಯನ್ನು 'ತಾರಾ' ಕಡಿಮೆ ಮಾಡಿದೆ. ವಿದ್ಯಾರ್ಥಿಗಳು ಕೂಡ ಈ ತಂತ್ರಜ್ಞಾನ ಉಪಕರಣಕ್ಕೆ ಬಹುಬೇಗನೆ ಹೊಂದಿಕೊಳ್ಳುತ್ತಾರೆ ಎಂದು ಶಿಕ್ಷಕರೇ ಖುಷಿಯಿಂದ ಹೇಳುತ್ತಾರೆ.

'ಅವಕಾಶ ಮತ್ತು ಸೌಲಭ್ಯ ಇರುವ ಜನರಿಗೆ ಇಂಗ್ಲಿಷ್ ಕಲಿಕೆ ದೊಡ್ಡ ಸಮಸ್ಯೆಯೇ ಅಲ್ಲ. ಮನೆ ಹಾಗೂ ಶಾಲೆ ಪರಿಸರ ಮೂಲಕ ಅವರೆಲ್ಲಾ ಇಂಗ್ಲಿಷ್ ಭಾಷೆ ಮೇಲೆ ಪಾರಮ್ಯ ಸಾಧಿಸುತ್ತಾರೆ. ಆದರೆ, ದೇಶದ ಗ್ರಾಮೀಣ ಭಾಗದಲ್ಲಿ ಇಂದಿಗೂ ಇಂಗ್ಲಿಷ್ ದೊಡ್ಡ ಸಮಸ್ಯೆ' ಎಂದು 'ಲರ್ನಿಂಗ್ ಮ್ಯಾಟರ್ಸ್' ಸಂಸ್ಥೆ ಸ್ಥಾಪಕರಲ್ಲಿ ಒಬ್ಬರಾದ ಸರಸ್ವತಿ ರಾಮಮೂರ್ತಿ ಹೇಳುತ್ತಾರೆ.

ಇದನ್ನು ಅರಿತು ಸಂಸ್ಥೆಯು ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ, ಜಾರ್ಖಂಡ್, ಆಂಧ್ರಪ್ರದೇಶ, ತೆಲಂಗಾಣ, ಒಡಿಶಾ ರಾಜ್ಯಗಳ 170 ಶಾಲೆಗಳಲ್ಲಿ 'ತಾರಾ' ಯೋಜನೆ ಅನುಷ್ಠಾನಗೊಳಿಸಲು ತಯಾರಿ ನಡೆಸಿದೆ.

ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಕ್ಕೆ ಚಿಂತನೆ

ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯೊಂದಿಗೆ 'ಲರ್ನಿಂಗ್ ಮ್ಯಾಟರ್ಸ್' ಸಂಸ್ಥೆ ಒಪ್ಪಂದ ಮಾಡಿಕೊಂಡಿದೆ. ಅದರಂತೆ ರಾಯಚೂರು, ಯಾದಗಿರಿ, ದಕ್ಷಿಣ ಕನ್ನಡ, ಬೆಂಗಳೂರು ನಗರ ಜಿಲ್ಲೆ ಸೇರಿದಂತೆ ಹಲವೆಡೆ ಸರ್ಕಾರಿ ಶಾಲೆಗಳಲ್ಲಿ ಯೋಜನೆ ಅನುಷ್ಠಾನಗೊಳಿಸಲು ಚಿಂತನೆ ನಡೆಸಿದೆ. ಕೆಲವು ಕಂಪನಿಗಳ ಸಿಎಸ್‌ಆರ್ ಅನುದಾನದ ಸಹಯೋಗದೊಂದಿಗೆ ಗ್ರಾಮೀಣ ಹಿಂದುಳಿದ ಶಾಲೆಗಳಲ್ಲಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಶಿಕ್ಷಣ ಪ್ರಸರಣವೇ ಮುಖ್ಯ ಉದ್ದೇಶವಾಗಿರುವ ಈ ಕಾರ್ಯಕ್ಕೆ ಸಂಸ್ಥೆಯ ಸ್ಥಾಪಕರಾದ ರಾಮಮೂರ್ತಿ, ಗೌರಿ ಮಹೇಶ್ ಬೆನ್ನೆಲುಬು.

ಕೋವಿಡ್‌ನಿಂದ ಈ ಕಾರ್ಯಕ್ಕೆ ಅಡ್ಡಿಯಾಗಿದೆ. ಪ್ರಸಕ್ತ ಸನ್ನಿವೇಶದಲ್ಲಿ ಕುಗ್ರಾಮದ ಜನರಿಗೂ ಸೌಲಭ್ಯ ತಲುಪಬೇಕಾಗಿದ್ದು, ಅದರಲ್ಲೂ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕಾಗಿದೆ. ಸ್ಥಳೀಯ ಭಾಷೆ, ಸಂಸ್ಕೃತಿ ಕಲಿಕೆಯೊಂದಿಗೆ ವ್ಯಾವಹಾರಿಕ ಜ್ಞಾನಕ್ಕಾಗಿ ಇಂಗ್ಲಿಷ್ ಕಲಿಕೆ ಅಗತ್ಯ. ಇದು ಈ ಸಂಸ್ಥೆಯ ಧ್ಯೇಯ ಕೂಡ.

(**ಸಂಪರ್ಕ:** 9611142775,
ಇ-ಮೇಲ್: saras.r@learningmatters.xyz)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 49

661) ಯಾವ ಜಿಲ್ಲೆಯನ್ನು ಕಾಫಿ ನಾಡು ಎನ್ನುತ್ತಾರೆ?
ಎ) ಚಿಕ್ಕಮಗಳೂರು ಬಿ) ಕೊಡಗು
ಸಿ) ಶಿವಮೊಗ್ಗ ಡಿ) ಚಿಕ್ಕಬಳ್ಳಾಪುರ

662) ಭಾರತದ ನಯಾಗರ ಎಂದು ಯಾವ ಜಲಪಾತವನ್ನು ಕರೆಯುತ್ತಾರೆ?
ಎ) ಉಂಚಳ್ಳಿ ಬಿ) ಗೋಕಾಕ
ಸಿ) ಗೇರುಸೊಪ್ಪ ಡಿ) ಮಾಗೋಡು

663) ಜಂಬಿಟ್ಟಿಗೆ ಮಣ್ಣಿನಲ್ಲಿ ಹೆಚ್ಚಾಗಿ ಯಾವ ಬೆಳೆಗಳನ್ನು ಬೆಳೆಯಲಾಗುತ್ತದೆ?
ಎ) ಕಾಫಿ, ಗೋಡಂಬಿ, ಚಹಾ, ಏಲಕ್ಕಿ
ಬಿ) ಮೆಣಸಿನಕಾಯಿ, ಹತ್ತಿ, ಜೋಳ
ಸಿ) ತಂಬಾಕು, ಕಬ್ಬು, ದ್ರಾಕ್ಷಿ
ಡಿ) ದಾಳಿಂಬೆ, ತೆಂಗು, ನಿಂಬೆ, ಪಪ್ಪಾಯ

664) ಪೆನ್ನಾರ & ಪಾಲಾರ ನದಿಗಳು ಕೆಳಗಿನ ಯಾವ ಜಿಲ್ಲೆಯಲ್ಲಿ ಹರಿಯುತ್ತವೆ?
ಎ) ತುಮಕೂರು ಬಿ) ಮೈಸೂರು
ಸಿ) ಶಿವಮೊಗ್ಗ ಡಿ) ದಾವಣಗೆರೆ

665) ಕೆಳಗಿನ ಯಾವ ಜಿಲ್ಲೆ ಅತೀ ಕಡಿಮೆ ನೀರಾವರಿ ಪ್ರದೇಶ ಹೊಂದಿದೆ?
ಎ) ಮೈಸೂರು ಬಿ) ಚಾಮರಾಜನಗರ
ಸಿ) ಕೊಡಗು ಡಿ) ಗದಗ

666) ಹೊಂದಿಸಿ ಬರೆಯಿರಿ.

ಜಾಗತಿಕ ವಿಶೇಷತೆ ಪಡೆದ ಬೆಳೆ	ಸ್ಥಳ
ಅ) ಚಕ್ಕೋತ	1. ದೇವನಹಳ್ಳಿ
ಆ) ಬದನೆಕಾಯಿ	2. ಈರನಗೆರೆ
ಇ) ಮೆಣಸಿನಕಾಯಿ	3. ಬ್ಯಾಡಗಿ
ಈ) ರಸಬಾಳೆ	4. ನಂಜನಗೂಡು

ಅ ಆ ಇ ಈ
ಎ) 3 4 1 2 ಬಿ) 3 4 2 1
ಸಿ) 1 2 4 3 ಡಿ) 1 2 3 4

667) ಕೆಳಗಿನ ಯಾವ ಜಿಲ್ಲೆಯಲ್ಲಿ ಯಾವುದೇ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿರುವುದಿಲ್ಲ?
ಎ) ಬೆಳಗಾವಿ ಬಿ) ವಿಜಯಪುರ
ಸಿ) ಕೊಡಗು ಡಿ) ಚಾಮರಾಜನಗರ

668) ಕಲಾದಗಿ, ಶಹಬಾದ, ವಾಡಿ, ಅಮ್ಮಸಂದ್ರ ಇವು ಯಾವ ಉತ್ಪಾದನೆಗೆ ಪ್ರಸಿದ್ಧಿ ಹೊಂದಿವೆ?
ಎ) ಸಿಮೆಂಟ್ ಬಿ) ಸೆಣಬು
ಸಿ) ಭತ್ತ ಡಿ) ಗೋಧಿ

669) ಕೆಳಗಿನ ಯಾವ ಲೋಹವನ್ನು 'ಬಡವರ ಬೆಳ್ಳಿ' ಎಂದು ಕರೆಯುತ್ತಾರೆ?
ಎ) ಕಬ್ಬಿಣ ಬಿ) ಅಲ್ಯುಮಿನಿಯಂ
ಸಿ) ತಾಮ್ರ ಡಿ) ಸತು

670) ಕೆಳಗಿನ ಯಾವುದು ಕೃಷ್ಣಾ ನದಿಯ ಉಪನದಿ ಅಲ್ಲ?
ಎ) ತುಂಗಭದ್ರಾ ಬಿ) ಘಟಪ್ರಭಾ
ಸಿ) ಮಲಪ್ರಭಾ ಡಿ) ಅರ್ಕಾವತಿ

671) ಕಾಶ್ಮೀರ-ಕಣಿವೆ ಕೆಳಗಿನ ಯಾವ ಶ್ರೇಣಿಗಳ ಮಧ್ಯೆ ಕಂಡು ಬರುತ್ತದೆ?
ಎ) ಪೀರ್ ಪಂಜಾಲ್ ಮತ್ತು ಜಾಸ್ಕರ್ ಶ್ರೇಣಿ
ಬಿ) ಜಾಸ್ಕರ್ ಶ್ರೇಣಿ ಮತ್ತು ಕಾರಾಕೊರಂ ಶ್ರೇಣಿ
ಸಿ) ಶಿವಾಲಿಕ್ ಶ್ರೇಣಿ ಮತ್ತು ಅರಾವಳಿ ಶ್ರೇಣಿ
ಡಿ) ಹಿಮಾದಿ ಮತ್ತು ಪೂರ್ವಾಂಚಲ ಶ್ರೇಣಿ

672) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
ಅ) ಮೌಂಟ್ ಎವರೆಸ್ಟ್ ಅನ್ನು ನೇಪಾಳದಲ್ಲಿ ಗೌರಿ-ಶಂಕರ ಎಂದು ಕರೆಯುತ್ತಾರೆ.
ಆ) ಮೌಂಟ್ ಎವರೆಸ್ಟ್‌ನ್ನು ಭಾರತದಲ್ಲಿ ಸಾಗರ ಮಾಲಾ ಎಂದು ಕರೆಯುತ್ತಾರೆ.
ಎ) 'ಅ' ಮಾತ್ರ ಸರಿ ಬಿ) 'ಆ' ಮಾತ್ರ ಸರಿ
ಸಿ) ಎರಡೂ ಸರಿ ಡಿ) ಎರಡೂ ತಪ್ಪು

673) ಹೊಂದಿಸಿ ಬರೆಯಿರಿ.

ವನ್ಯಜೀವಿ ಧಾಮ	ರಾಜ್ಯ
ಎ) ಸುಂದರ್ ಬನ್ಸ್	1. ಸಿಕ್ಕಿಂ
ಬಿ) ಮಾನಸ	2. ಮಧ್ಯಪ್ರದೇಶ
ಸಿ) ಕಾಂಚನಜುಂಗಾ	3. ಪಶ್ಚಿಮಬಂಗಾಳ
ಡಿ) ಪನ್ನಾ	4. ಅಸ್ಸಾಂ

ಅ ಆ ಇ ಈ
ಎ) 1 2 3 4 ಬಿ) 1 2 4 3
ಸಿ) 3 4 1 2 ಡಿ) 3 4 2 1

674) ಈ ಕೆಳಗಿನ ಯಾವ ಮಣ್ಣಿನಲ್ಲಿ ಅತಿ ಹೆಚ್ಚು ಪೊಟ್ಯಾಸಿಯಂ ಇರುತ್ತದೆ?
ಎ) ಕಪ್ಪು ಮಣ್ಣು ಬಿ) ಕೆಂಪು ಮಣ್ಣು
ಸಿ) ಜಂಬಿಟ್ಟಿಗೆ ಮಣ್ಣು ಡಿ) ಮೆಕ್ಕಲು ಮಣ್ಣು

675) ಮಂಜ್ರಾ, ಇಂದ್ರಾವತಿ, ಸಬರಿ ಇವು ಯಾವ ನದಿಯ ಉಪನದಿಗಳು?
ಎ) ಗೋದಾವರಿ ಬಿ) ಕೃಷ್ಣಾ
ಸಿ) ಮಹಾನದಿ ಡಿ) ತುಂಗಭದ್ರಾ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 48ರ ಉತ್ತರಗಳು: 646. ಬಿ, 647. ಸಿ, 648. ಸಿ, 649. ಡಿ, 650. ಡಿ, 651. ಡಿ, 652. ಬಿ, 653. ಸಿ, 654. ಡಿ, 655. ಎ, 656. ಎ, 657. ಎ, 658. ಬಿ, 659. ಬಿ, 660. ಎ

ವಿದ್ಯಾರ್ಥಿ ವೇತನ ಕೈಪಿಡಿ

ಲೆಗ್ರಾಂಡ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021-22
ವಿವರ: ದ್ವಿತೀಯ ಪಿಯುಸಿ ಪಾಸಾದ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆ: ಬಿ.ಟೆಕ್/ ಬಿ.ಇ /ಬಿ. ಆರ್ಕಿಟೆಕ್ಚರ್‌ನಲ್ಲಿ ಓದಲು ಇಚ್ಛಿಸುವ ವಿದ್ಯಾರ್ಥಿನಿಯರು ಈ ವೇತನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. 10ನೇ ತರಗತಿ ಮತ್ತು ಪಿಯುಸಿಯಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 5 ಲಕ್ಷಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ಟ್ಯೂಷನ್ ಶುಲ್ಕದ ಶೇ 60ರಷ್ಟು ಅಥವಾ ವರ್ಷಕ್ಕೆ ₹ 60 ಸಾವಿರ (ಯಾವುದು ಕಡಿಮೆ ಇದೆಯೋ ಅದು)
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10 ಸೆಪ್ಟೆಂಬರ್, 2021
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/LFL3

ಝೂವಲಾಜಿಕಲ್ ಸರ್ವೇ ಆಫ್ ಇಂಡಿಯಾ ಎನ್‌ಆರ್‌ಸಿ ಜೂನಿಯರ್ ರೀಸರ್ಚ್ ಫೆಲೋಶಿಪ್ (ಜೆಆರ್‌ಎಫ್) 2021.
ವಿವರ: ಎಂಎಸ್‌ಸಿ ಪದವೀಧರರು ಅರ್ಜಿ ಸಲ್ಲಿಸಬಹುದಾಗಿದೆ.
ಅರ್ಹತೆ: ಸಂದರ್ಶನದ ವೇಳೆಗೆ ಅಭ್ಯರ್ಥಿಗೆ 28 ವರ್ಷ ಆಗಿರಬೇಕು. ಜತೆಗೆ ಎಂಎಸ್‌ಸಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರಬೇಕು. ಲೈಫ್ ಸೈನ್ಸ್/ ಫಾರೆಸ್ಟ್ರಿ/ ಝೂವಾಲಜಿ/ ಆರ್ನಿಥಾಲಜಿಯಲ್ಲಿ ಎಂಎಸ್‌ಸಿ ಪೂರ್ಣಗೊಳಿಸಿರಬೇಕು.
ಆರ್ಥಿಕ ಸಹಾಯ: ತಿಂಗಳಿಗೆ ₹ 31 ಸಾವಿರ
ಕೊನೆಯ ದಿನಾಂಕ: 8 ಸೆಪ್ಟೆಂಬರ್, 2021
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅಥವಾ ಅಂಚೆ ಮೂಲಕ
ಹೆಚ್ಚಿನ ಮಾಹಿತಿಗೆ: www.b4s.in/praja/SNR5

ಕೃಪೆ: buddy4study.com

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಬಂಧ ಬರೆಯುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

- **ಪದವಿ ಮುಗಿಸಿಕೊಂಡು ಪಿಎಸ್‌ಐ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ. ಪ್ರಬಂಧ ಬರೆಯುವುದು ಹೇಗೆ? ಯಾವ ವಿಷಯದ ಮೇಲೆ ಬರೆದರೆ ಪೂರ್ಣ ಅಂಕ ಸಿಗುತ್ತದೆ?**

ಕೃಷ್ಣಮೂರ್ತಿ ಟಿ.ಎಸ್., ಯಾದಗಿರಿ.

- **ನಾನು ಪದವಿಯನ್ನು ಮುಗಿಸಿ ಪಿಎಸ್‌ಐ ಪರೀಕ್ಷೆಗೆ ತಯಾರಾಗುತ್ತಿದ್ದೇನೆ. ಆದರೆ, ಎಷ್ಟು ಓದಿದರೂ ಉತ್ತರಗಳು ನೆನಪಿಗೆ ಬರುವುದಿಲ್ಲ. ಏನು ಮಾಡಬೇಕು?**

ಕನಕರಾಯ, ಕೊಪ್ಪಳ.

ಪರೀಕ್ಷೆಗೆ ಹೇಗೆ ಓದಬೇಕು ಎನ್ನುವುದನ್ನು ಇದೇ ತಿಂಗಳ 23ರ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ. ಪರೀಕ್ಷೆಯಲ್ಲಿ ಸೂಚಿಸಿದ ವಿಷಯದ ಮೇಲೆ ಪ್ರಬಂಧ ಬರೆಯುವುದರ ಬಗ್ಗೆ ಈ ಸಲಹೆಗಳನ್ನು ಗಮನಿಸಿ:

- ಪ್ರಬಂಧ ರಚನೆಯಲ್ಲಿ ಪೀಠಿಕೆ, ವಿಷಯದ ಮಂಡನೆ ಮತ್ತು ಪ್ರತಿಪಾದನೆ ಹಾಗೂ ಮುಕ್ತಾಯದ ಹಂತಗಳನ್ನು ಅನುಸರಿಸಿ.
- ಪ್ರಚಲಿತ ವಿದ್ಯಮಾನಗಳ ಬಗ್ಗೆ ದಿನಪತ್ರಿಕೆ, ಸುದ್ದಿ ವಾಹಿನಿ, ಇತ್ಯಾದಿಗಳಿಂದ ನಿರಂತರವಾಗಿ ಮಾಹಿತಿಯನ್ನು ಸಂಗ್ರಹಿಸಿ.
- ಸ್ವಂತ ಆಲೋಚನೆಗಳಿಂದಲೂ ವಿಮರ್ಶಾತ್ಮಕ ಕೌಶಲದಿಂದಲೂ ವಿಷಯದ ಮಂಡನೆ ಮಾಡಬೇಕು.
- ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಷ್ಠಿತ ಸಂಸ್ಥೆಗಳ ಸಂಶೋಧನೆಗಳ, ಸಮೀಕ್ಷೆಗಳ ಅಂಕಿ ಅಂಶಗಳನ್ನು, ವರದಿಯನ್ನು, ಸಾರಾಂಶವನ್ನು, ಉದಾಹರಣೆಗಳನ್ನು ಉಲ್ಲೇಖಿಸಿದರೆ ಪ್ರಬಂಧದ ಮೌಲ್ಯ ವೃದ್ಧಿಯಾಗುತ್ತದೆ.
- ನಿಷ್ಪಕ್ಷವಾದ ಆಲೋಚನೆಗಳು, ಪರ್ಯಾಯ ಚಿಂತನೆಗಳಿದ್ದು ಪ್ರಬಂಧ ಸವಿಸ್ತಾರವಾಗಿಯೂ, ವಿಶಿಷ್ಟವಾಗಿಯೂ ಮೂಡಿ ಬಂದು ನಿಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವಂತಿರಬೇಕು.
- ಪರೀಕ್ಷೆಗೆ ಮುಂಚೆ ಪ್ರಬಂಧಗಳನ್ನು ಬರೆದು ಸ್ವಯಂ ವಿಮರ್ಶೆಗೆ ಒಳಪಡಿಸಿ. ಇದರಿಂದ ವಿಷಯಗಳ ಸಂಗ್ರಹಣೆ, ಸೂಕ್ತ ಪದಗಳ ಬಳಕೆ ಮತ್ತು ಸಮಯದ ನಿರ್ವಹಣೆಯ ಬಗ್ಗೆ ಅರಿವು ಮೂಡಿ, ಇನ್ನೂ ಉನ್ನತ ಮಟ್ಟದ ಪ್ರಬಂಧಗಳನ್ನು ಬರೆಯಲು ಸಾಧ್ಯವಾಗುತ್ತದೆ.
- ಬರವಣಿಗೆ ಕಾಗುಣಿತ, ವ್ಯಾಕರಣ ದೋಷ ಮುಕ್ತವಾಗಿರಲಿ; ಓದಲು ಸುಲಭವಾಗಿರಲಿ.

- **ನಾನು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಓದುತ್ತಿದ್ದೇನೆ. ಮುಂದೆ ಬಿಸಿಎ ಮತ್ತು ಎಂಸಿಎ ಮಾಡಬೇಕೆಂದುಕೊಂಡಿದ್ದೇನೆ. ಇದರ ವಿವರವನ್ನು ತಿಳಿಸಿ.**

ಹೆಸರು ತಿಳಿಸಿಲ್ಲ, ಚಿಕ್ಕಮಗಳೂರು.

ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಯ ಪಥದಲ್ಲಿರುವ ಕ್ಷೇತ್ರ. ಹಾಗಾಗಿ, ಬಿಟೆಕ್ ಮತ್ತು ಬಿಸಿಎ ಪದವೀಧರರಿಗೆ ಬೇಡಿಕೆ ಇದೆ. ಮೂರು ವರ್ಷದ ಬಿಸಿಎ ಕೋರ್ಸಿನಲ್ಲಿ ವೃತ್ತಿನಿರತ ಇಂಗ್ಲಿಷ್, ಗಣಿತ, ಸಂಖ್ಯಾಶಾಸ್ತ್ರ ಸೇರಿದಂತೆ ಮಾಹಿತಿ ತಂತ್ರಜ್ಞಾನ ಸಂಬಂಧಿತ ವಿಷಯಗಳನ್ನು ಕಲಿಸಲಾಗುತ್ತದೆ. ಬಿಸಿಎ ನಂತರ ಕ್ಯಾಂಪಸ್ ನೇಮಕಾತಿಯ ಮುಖಾಂತರ ವೃತ್ತಿಯನ್ನು ಆರಂಭಿಸಬಹುದು ಅಥವಾ ಎರಡು ವರ್ಷದ ಎಂಸಿಎ ಕೋರ್ಸ್ ಮಾಡಬಹುದು. ಹಾಗಾಗಿ, ಕ್ಯಾಂಪಸ್ ನೇಮಕಾತಿಯಿರುವ ಕಾಲೇಜಿನಲ್ಲಿ ಬಿಸಿಎ ಮಾಡುವುದು ಉತ್ತಮ. ನೀವು ಸೇರಬಯಸುವ ಕಾಲೇಜನ್ನು ಅವಲಂಬಿಸಿ ಪ್ರವೇಶಾತಿ ನೇರವಾಗಿಯೂ ಕೆಲವೊಮ್ಮೆ ಪ್ರವೇಶ ಪರೀಕ್ಷೆಯ ಮುಖಾಂತರವೂ ಆಗುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

|| jai sri gurudev ||
ADICHUNCHANAGIRI UNIVERSITY
(Estd. under Karnataka Act No.18 of 2013)
ADMISSIONS OPEN 2021 - 22

Medical
MBBS | MD | MS | MPH
M.Sc. (Medical)-Biochemistry, Microbiology
98455 67500 aims@acu.edu.in

Pharmacy
B. Pharm. | Pharm. D
M. Pharm. | D. Pharm.
98458 63779 saccp@acu.edu.in

Engineering
B.E
» Medical Electronics
» Civil Engineering » Mechanical Engineering
» Computer Science & Engineering
» Information Science & Engineering
» Electronics & Communication Engineering
» Artificial Intelligence and Machine Learning
M.Tech.
» Data Analytics » Nano Technology
» Structural Engineering
» Computer Science and Engineering
» VLSI Design and Embedded System
» Infrastructure Management
Integrated Masters (BE+MBA, BE+M.Tech.)
Integrated Ph.D. (M.Tech.+Ph.D.)
98801 00556 bgsit@acu.edu.in

Management
MBA | MHA (Master of Hospital Administration)
98801 00556 bgsit@acu.edu.in

Nursing
B.Sc. | P.B.B.Sc | M.Sc. | GNM
99642 44317 acn@acu.edu.in

Allied Health Sciences
B.Sc.
» Medical Laboratory Technology
» Medical Imaging Technology
» Renal Dialysis Technology
» Anaesthesia & Operation Theatre Technology
» Optometry
Diploma in
» Medical Laboratory Technology
» Medical Imaging Technology
» Health Inspector » Ophthalmic Technology
» Dialysis Technology
» Medical Records Technology
» Operation Theater Technology
99642 44317 acn@acu.edu.in

Humanities & Social Sciences
B.Com | B.Ed.
B.Com.-Internship/Apprenticeship Embedded
Integrated Masters (BBA + MBA)
94485 54225 | 99014 11169
bgsfgc@acu.edu.in | bgsce@acu.edu.in

Natural Sciences
B.Sc.
Internship / Apprenticeship Embedded
» Physics » Chemistry » Mathematics
M.Sc. » Physics » Chemistry » Biochemistry
» Nanoscience » Biotechnology
» Microbiology » Molecular Biology
» Integrated Ph.D. (M.Sc. + Ph.D.)
80881 57568 dean.ns@acu.edu.in

Ph.D. Programmes in all Faculties

Accreditations & Recognitions
NABL NABH

B G Nagara - 571448, NH-75, Nagamangala Taluk, Mandya District, Karnataka
+91 98801 00556
info@acu.edu.in www.acu.edu.in
SCAN QR CODE TO VISIT WEBSITE

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯ ಬಗ್ಗೆ ಕಾಳಜಿ ವಹಿಸುವುದು ಜೀವನದಲ್ಲಿನ ಶ್ರೇಷ್ಠ ಮೌಲ್ಯವನ್ನು ಪ್ರತಿನಿಧಿಸುತ್ತದೆ.

-ಜಿಮ್ ರೌನ್

ಹೈಕೋರ್ಟ್‌ಗಳ ಖಾಲಿ ಹುದ್ದೆ ಭರ್ತಿಗೆ ಸಿಗಬೇಕಿದೆ ವೇಗ

ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಮೂರ್ತಿಗಳು ಇರುವ ಕೊಲಿಜಿಯಂ ಮಾಡಿದ್ದ ಶಿಫಾರಸುಗಳಿಗೆ ಕೇಂದ್ರ ಸರ್ಕಾರ ಸಮ್ಮತಿ ನೀಡಿದೆ. ಒಂದೇ ಬಾರಿಗೆ ಒಟ್ಟು ಒಂಬತ್ತು ನ್ಯಾಯಮೂರ್ತಿಗಳ ನೇಮಕಕ್ಕೆ ಒಪ್ಪಿಗೆ ನೀಡಿದೆ. ಸರ್ಕಾರ ಒಪ್ಪಿಗೆ ನೀಡಿದ ನಂತರದಲ್ಲಿ ರಾಷ್ಟ್ರಪತಿಯವರು ಅಷ್ಟೂ ಜನರ ಹೆಸರುಗಳಿಗೆ ಸಮ್ಮತಿ ನೀಡಿದ್ದಾರೆ. ಅವರು ಈಗ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಪ್ರಮಾಣ ವಚನ ಸ್ವೀಕರಿಸಬೇಕಿದೆ. ಇವರಲ್ಲಿ ಮೂವರು ಮಹಿಳಾ ನ್ಯಾಯಮೂರ್ತಿಗಳು ಕೂಡ ಇರುವುದು ವಿಶೇಷ. ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸಿರುವ ಬಿ.ವಿ. ನಾಗರತ್ನ ಅವರು 2027ರಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಕರ್ತವ್ಯ ನಿಭಾಯಿಸುವ ಸಾಧ್ಯತೆ ಇದೆ. ಅದು ಕೈಗೂಡಿದರೆ, ಸಿಜೆಐ ಹುದ್ದೆಗೆ ಏರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಅವರಿಗೆ ಸಲ್ಲಲಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 2027ರಲ್ಲಿ 80 ವರ್ಷ ಆಗಿರುತ್ತದೆ. ಆಗ, ಮಹಿಳೆಯೊಬ್ಬರು ಸಿಜೆಐ ಸ್ಥಾನದಲ್ಲಿ ಇರಲಿದ್ದಾರೆ ಎಂಬುದು ಬಹುತ್ವ ಹಾಗೂ ಪ್ರಾತಿನಿಧ್ಯದಲ್ಲಿ ನಂಬಿಕೆ ಇರುವವರೆಲ್ಲರಿಗೂ ಖುಷಿ ತರುವ ಸಂಗತಿ. ಪ್ರಧಾನಿ, ರಾಷ್ಟ್ರಪತಿ ಹಾಗೂ ಸಿಜೆಐ ಈ ದೇಶದ ಅತ್ಯುನ್ನತ ಹುದ್ದೆಗಳು. ಪ್ರಧಾನಿ ಹಾಗೂ ರಾಷ್ಟ್ರಪತಿ ಹುದ್ದೆಗಳನ್ನು ಮಹಿಳೆಯರು ನಿಭಾಯಿಸಿದ್ದಾರೆ. ಆದರೆ, ಸಿಜೆಐ ಹುದ್ದೆಯನ್ನು ಮಹಿಳೆ ನಿಭಾಯಿಸಿಲ್ಲ ಎಂಬುದು ಗಮನಾರ್ಹ. ನ್ಯಾಯಾಂಗದ ಎಲ್ಲ ಹಂತಗಳಲ್ಲಿ ಮಹಿಳೆಯರು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕು ಎಂಬ ಆಗ್ರಹವನ್ನು ನ್ಯಾಯಾಂಗದ ಹಿರಿಯರು, ಪ್ರಜಾತಾಂತ್ರಿಕ ಪ್ರಕ್ರಿಯೆಗಳಲ್ಲಿ ಎಲ್ಲ ವರ್ಗಗಳ ಭಾಗವಹಿಸುವಿಕೆ ಹೆಚ್ಚಾಗಬೇಕು ಎಂದು ಬಯಸುವವರು ಮತ್ತೆ ಮತ್ತೆ ಮುಂದಿಟ್ಟಿದ್ದಾರೆ ಎಂಬುದು ಇಲ್ಲಿ ಉಲ್ಲೇಖಿಸಬಹುದಾದ ವಿಚಾರ.

ಹೈಕೋರ್ಟ್‌ಗಳಲ್ಲಿ ಹಾಗೂ ಕೆಳ ಹಂತದ ನ್ಯಾಯಾಲಯಗಳಲ್ಲಿ ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರ ಕೊರತೆ ತೀವ್ರವಾಗಿ ಇದೆ. ಅದನ್ನು ನಿವಾರಿಸಲು ತುರ್ತು ಕ್ರಮ ಕೈಗೊಳ್ಳಬೇಕು

2019ರ ಸೆಪ್ಟೆಂಬರ್ ನಂತರ ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ ಆಗಿರಲಿಲ್ಲ. 21 ತಿಂಗಳ ಸುದೀರ್ಘ ಅವಧಿಯ ಬಳಿಕ ಈ ನೇಮಕ ನಡೆದಿದೆ. ಸುಪ್ರೀಂ ಕೋರ್ಟ್‌ನ ಕೊಲಿಜಿಯಂ (ನ್ಯಾಯಮೂರ್ತಿ ನೇಮಕಕ್ಕೆ ಶಿಫಾರಸು ಮಾಡುವ ಸಮಿತಿ) ಸದಸ್ಯರಾದ ಐವರು ಹಿರಿಯ ನ್ಯಾಯಮೂರ್ತಿಗಳಲ್ಲಿ ಸಹಮತ ಸಾಧ್ಯವಾಗದ ಕಾರಣ ನ್ಯಾಯಮೂರ್ತಿಗಳ ನೇಮಕಕ್ಕೆ ಹೆಸರು ಶಿಫಾರಸು ಮಾಡುವುದೇ ಸಾಧ್ಯವಾಗಿರಲಿಲ್ಲ. ತ್ರಿಪುರಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಕಿಲ್ ಖುರೇಷಿ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ನೀಡಬೇಕು ಎಂದು ಕೊಲಿಜಿಯಂ ಸದಸ್ಯರಾಗಿದ್ದ ನ್ಯಾಯಮೂರ್ತಿ ಆರ್.ಎಫ್. ನರಿಮನ್ ಅವರು (ಈಗ ನಿವೃತ್ತರಾಗಿದ್ದಾರೆ) ಒತ್ತಾಯಿಸಿದ್ದರು ಎಂದು ಕೆಲವು ವರದಿಗಳು ಹೇಳಿವೆ. ಸರ್ಕಾರಕ್ಕೆ ಕಳುಹಿಸಲಾದ ಹೆಸರುಗಳ ಪಟ್ಟಿಯಲ್ಲಿ ನ್ಯಾಯಮೂರ್ತಿ ಖುರೇಷಿ ಹೆಸರು ಇದ್ದಿರಲಿಲ್ಲ. ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಖುರೇಷಿ ಅವರು ಕೇಂದ್ರದ ಈಗಿನ ಗೃಹ ಸಚಿವ ಅಮಿತ್ ಶಾ ಅವರನ್ನು 2010ರಲ್ಲಿ ಸಿಬಿಐ ಕಸ್ಟಡಿಗೆ ನೀಡಿದ್ದರು.

ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಕೊರತೆ ತೀವ್ರವಾಗಿ ಇತ್ತು. ಸುಪ್ರೀಂ ಕೋರ್ಟ್‌ಗೆ ಮಂಜೂರಾಗಿರುವ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 34. ಆದರೆ, 24 ನ್ಯಾಯಮೂರ್ತಿಗಳು ಮಾತ್ರ ಈಗ ಕರ್ತವ್ಯ ನಿಭಾಯಿಸುತ್ತಿದ್ದಾರೆ. ಹೊಸದಾಗಿ ನೇಮಕ ಆಗಿರುವ ನ್ಯಾಯಮೂರ್ತಿಗಳು ಅಧಿಕಾರ ಸ್ವೀಕರಿಸಿದ ನಂತರ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಹುದ್ದೆ ಮಾತ್ರ ಖಾಲಿ ಉಳಿಯಲಿದೆ. ಹೊಸ ನೇಮಕಾತಿಯು ಸುಪ್ರೀಂ ಕೋರ್ಟ್ ಮೇಲೆ ಈಗ ಇರುವ ಪ್ರಕರಣಗಳ ಹೊರೆಯನ್ನು ಒಂದಿಷ್ಟು ತಗ್ಗಿಸಬಹುದು ಎಂಬ ನಿರೀಕ್ಷೆ ಇಟ್ಟುಕೊಳ್ಳಬಹುದು. ಹೈಕೋರ್ಟ್‌ಗಳಲ್ಲಿ ಹಾಗೂ ಕೆಳ ಹಂತದ ನ್ಯಾಯಾಲಯಗಳಲ್ಲಿ ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರ ಕೊರತೆಯು ತೀವ್ರವಾಗಿ ಇದೆ. ಒಟ್ಟು 25 ಹೈಕೋರ್ಟ್‌ಗಳಲ್ಲಿ 455 ನ್ಯಾಯಮೂರ್ತಿಗಳ ಹುದ್ದೆಗಳು ಖಾಲಿ ಇವೆ. ಅಂದರೆ ಒಟ್ಟು 1,098 ಹುದ್ದೆಗಳಲ್ಲಿ ಶೇಕಡ 41ರಷ್ಟು ಹುದ್ದೆಗಳು ಖಾಲಿ ಇದ್ದಂತಾಯಿತು. ಕೆಲವು ಹೈಕೋರ್ಟ್‌ಗಳಲ್ಲಿ ಶೇಕಡ 50ಕ್ಕಿಂತ ಹೆಚ್ಚಿನ ಹುದ್ದೆಗಳು ಖಾಲಿ ಇವೆ ಎಂಬ ವರದಿಗಳಿವೆ. ನ್ಯಾಯದಾನ ತ್ವರಿತವಾಗಿ ಆಗಬೇಕು ಎಂದು ಬಯಸುವವರು ಈ ಕೊರತೆಯ ಬಗ್ಗೆಯೂ ಗಮನ ನೀಡಬೇಕು. ಸಿಬ್ಬಂದಿ ಕೊರತೆ ತೀವ್ರವಾಗಿ ಇರುವಾಗ, ಪ್ರಕರಣಗಳ ವಿಲೇವಾರಿ ತ್ವರಿತವಾಗಿ ಆಗಲು ಹೇಗೆ ಸಾಧ್ಯ? ಹುದ್ದೆಗಳು ಖಾಲಿ ಇದ್ದಾಗ, ಕರ್ತವ್ಯ ನಿರ್ವಹಿಸುವ ಇತರರ ಮೇಲೆ ಕೆಲಸದ ಒತ್ತಡ ಸಹಜವಾಗಿಯೇ ಹೆಚ್ಚಾಗುತ್ತದೆ. ನ್ಯಾಯ ನಿರ್ಣಯದಂತಹ ಅತ್ಯಂತ ಮಹತ್ವದ ಕರ್ತವ್ಯವನ್ನು ನಿಭಾಯಿಸಲು ನ್ಯಾಯಮೂರ್ತಿಗಳ ಕೊರತೆ ಆಗದಂತೆ ನೋಡಿಕೊಳ್ಳಬೇಕಿರುವುದು ಸಂಬಂಧಪಟ್ಟ ಎಲ್ಲರ ಜವಾಬ್ದಾರಿ. ಸುಪ್ರೀಂ ಕೋರ್ಟ್‌ಗೆ ಒಂಬತ್ತು ಮಂದಿ ನ್ಯಾಯಮೂರ್ತಿಗಳನ್ನು ಏಕಕಾಲದಲ್ಲಿ ನೇಮಕ ಮಾಡಿರುವುದು ಸಂತಸದ ಸಂಗತಿ. ಇತರ ನ್ಯಾಯಾಲಯಗಳಿಗೂ ನ್ಯಾಯಮೂರ್ತಿಗಳನ್ನು, ನ್ಯಾಯಾಧೀಶರನ್ನು ಆದಷ್ಟು ಬೇಗ ನೇಮಕ ಮಾಡಬೇಕು. ನ್ಯಾಯ ನಿರ್ಣಯ ತ್ವರಿತವಾಗಿ ಆಗದೆ ಇದ್ದರೆ ತೊಂದರೆ ಆಗುವುದು ಸಾರ್ವಜನಿಕರಿಗೆ. ನ್ಯಾಯ ನಿರ್ಣಯದಲ್ಲಿನ ವಿಳಂಬವು ಸಾಮಾಜಿಕ, ಆರ್ಥಿಕ ಪರಿಣಾಮಗಳನ್ನು ಹೊಂದಿರುತ್ತದೆ. ಹೀಗಾಗಿ ನ್ಯಾಯಾಂಗದಲ್ಲಿನ ಖಾಲಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಬೇಕಿರುವುದು ಸಮಾಜದ ತುರ್ತುಗಳಲ್ಲಿ ಒಂದು.

ದಿನದ ಟ್ವೀಟ್

ತಳಮಟ್ಟದ ಶಿಕ್ಷಣಕ್ಕೆ ಆದ್ಯತೆಯಿರಲಿ

ಭಾರತದಲ್ಲಿ ಶಿಕ್ಷಣವು ಅಕ್ಷರ ಕಲಿಕೆಗೆ ಮಾತ್ರ ಸೀಮಿತಗೊಂಡು ಅದನ್ನು ಅನುತ್ಪಾದಕ ಘಟಕವನ್ನಾಗಿ ಪರಿಗಣಿಸಲಾಗಿದೆ. ಅರ್ಥಪೂರ್ಣ ಶಿಕ್ಷಣ ದೊರಕದೇ ಕೊನೆಯ ಮನುಷ್ಯ ಕೊನೆಯವನಾಗಿಯೇ ಉಳಿದಿದ್ದಾನೆ. ಈ ಕೊನೆಯನ್ನು ಎತ್ತದಿದ್ದರೆ ಈ ದೇಶವೇ ಕುಸಿಯುತ್ತದೆ. ಕಾರಣ, ಅವನಿರುವುದೇ ತಳದಲ್ಲಿ. ತಳಮಟ್ಟದ ಶಾಲಾ ಶಿಕ್ಷಣಕ್ಕೆ ಆದ್ಯತೆ ನೀಡದಿರುವುದು ದುರದೃಷ್ಟಕರ.

ನಿಜಲಿಂಗಯ್ಯ ಹಾಲದೇವರಮಠ, ಶಿಕ್ಷಕ

ಕಿಡಿನುಡಿ

ಡಾನ್ಸ್ ಕಲಿಯಲು ಆಸಕ್ತಿ ಇರುವವರು ಹುಬ್ಬಳ್ಳಿ- ಧಾರವಾಡಕ್ಕೆ ಬನ್ನಿ. ಇಲ್ಲಿನ ಗುಂಡಿ ಬಿದ್ದಿರುವ ರಸ್ತೆಗಳಲ್ಲಿ ಓಡಾಡಿದರೆ ತನ್ನಿಂದತಾನೇ ಡಾನ್ಸ್ ಕಲಿಯಬಹುದು. ಎರಡು ದಿನ ಹುಬ್ಬಳ್ಳಿ, ಧಾರವಾಡದಲ್ಲಿ ಓಡಾಡಿದೆ. ದೂಳಿನಿಂದ, ಬಿಳಿಬಟ್ಟೆಯ ಬಣ್ಣವೇ ಬದಲಾಯಿತು. ಬೆಂಗಳೂರಿಗೆ ಹಿಂದಿರುಗುವಾಗ ಬಟ್ಟೆಗಳನ್ನು ಇಲ್ಲಿಯೇ ಬಿಟ್ಟು ಹೋಗುತ್ತೇನೆ. ಮಹಾನಗರಪಾಲಿಕೆಯಲ್ಲಿ 10 ವರ್ಷ ಆಡಳಿತ ನಡೆಸಿರುವ ಬಿಜೆಪಿಯ ವೈಫಲ್ಯದ ದ್ಯೋತಕವಿದು.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 30-8-1996

• **ಸಿಇಟಿ ಸಂದರ್ಶನ ಮುಂದಕ್ಕೆ**

ಬೆಂಗಳೂರು, ಆಗಸ್ಟ್ 29- ವೈದ್ಯಕೀಯ ಮತ್ತು ದಂತವೈದ್ಯ ಕಾಲೇಜುಗಳ ಪ್ರವೇಶಕ್ಕೆ ನಾಳೆಯಿಂದ ಪ್ರಾರಂಭವಾಗಬೇಕಿದ್ದ ಸಿಇಟಿ ಸಂದರ್ಶನವನ್ನು ಹೈಕೋರ್ಟ್ ಇಂದು ಎರಡು ವಾರಗಳ ಅವಧಿಗೆ ಮುಂದಕ್ಕೆ ಹಾಕಿತು.

ಈ ಕಾಲೇಜುಗಳ ಪ್ರವೇಶ ಸಂಖ್ಯೆ ಮತ್ತಿತರ ವಿಷಯಗಳ ಬಗ್ಗೆ ಅಂತಿಮವಾಗಿ ತೀರ್ಮಾನ ಕೈಗೊಳ್ಳಬೇಕಾಗಿರುವುದರಿಂದ, ಮಧ್ಯೆ ಸಂದರ್ಶನ ನಡೆಸಿ ಪ್ರವೇಶಕ್ಕೆ ಅವಕಾಶ ಕೊಡುವುದು ಸಮಂಜಸವಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ಜಿ.ಸಿ.ಭರೂಕ ಅವರು ಸಂದರ್ಶನವನ್ನು ಎರಡು ವಾರ ಮುಂದೂಡಿದರು.

• **ಸುಖ್‌ರಾಂ ಹಗರಣ: ಸದನ ಸಮಿತಿಗೆ ಸಿಪಿಎಂ, ಬಿಜೆಪಿ ಆಗ್ರಹ**

ನವದೆಹಲಿ, ಆಗಸ್ಟ್ 29 (ಪಿಟಿಐ, ಯುಎನ್‌ಐ)- ಮಾಜಿ ಸಂಪರ್ಕ ಸಚಿವ ಹಾಗೂ ಕಾಂಗ್ರೆಸ್ ನಾಯಕ ಸುಖ್‌ರಾಂ ಅವರ ವಿರುದ್ಧ ಇರುವ ಗಂಭೀರ ಭ್ರಷ್ಟಾಚಾರ ಆರೋಪಗಳ ತನಿಖೆಗೆ ಜಂಟಿ ಸದನ ಸಮಿತಿ ರಚಿಸಬೇಕು ಎಂದು ಸಿಪಿಐ-ಎಂ ಹಾಗೂ ಭಾರತೀಯ ಜನತಾ ಪಕ್ಷದ ಸದಸ್ಯರು ಲೋಕಸಭೆಯಲ್ಲಿ ಇಂದು ಆಗ್ರಹಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 30-8-1971

• **ಪಾಕ್ ದುಡುಕುತನಕ್ಕೆ ಭಾರತ- ರಷ್ಯಾ ಒಪ್ಪಂದ ತಡೆ ಎಂದ ಇಂದಿರಾ**

ನವದೆಹಲಿ, ಆಗಸ್ಟ್ 29- ಭಾರತ- ರಷ್ಯಾ ಮೈತ್ರಿ ಒಪ್ಪಂದವು ಪಾಕಿಸ್ತಾನದ ಮಿಲಿಟರಿ ನಾಯಕರು 'ದುಡುಕಿನ ದುಸ್ಸಾಹಸಕ್ಕೆ' ಎರಗುವುದನ್ನು ತಡೆಗಟ್ಟುವುದೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಹೇಳಿದ್ದಾರೆ.

ವಿಶ್ವಶಾಂತಿ ಮಂಡಲಿ ಪ್ರಧಾನ ಕಾರ್ಯದರ್ಶಿ ರೊಮೇಶ್ ಚಂದ್ರಾ ಅವರೊಡನೆ ಸಂದರ್ಶನವೊಂದರಲ್ಲಿ ಗಾಂಧಿಯವರು, 'ಮನೋವಿಕಾರದಿಂದ ನಮ್ಮ ಕಡೆಗೆ ವೈಷಮ್ಯ ತೋರಿಸಿರುವ ರಾಷ್ಟ್ರಗಳು' ಯಾವುದೋ ಸಂದರ್ಭ ಉಪಯೋಗಿಸಿಕೊಂಡು ದುಸ್ಸಾಹಸಕ್ಕೆ ತೊಡಗುವುದನ್ನು ಒಪ್ಪಂದ ತಡೆಯುವುದರಿಂದ ಹಾಗೂ ರಷ್ಯಾವು ನಮ್ಮ ಮಿತ್ರ ರಾಷ್ಟ್ರವೆಂದು ಜನರು ಪರಿಗಣಿಸಿರುವುದರಿಂದ ರಾಷ್ಟ್ರದಲ್ಲಿ ಈ ಒಪ್ಪಂದಕ್ಕೆ ಭಾರಿ ಸ್ವಾಗತ ಲಭಿಸಿದೆಯೆಂದರು.

ಮನುಷ್ಯ ಬದುಕು ಧರ್ಮಾಂಧರ ಸೀಮಿತ ಗ್ರಹಿಕೆಗೆ ನಿಲುಕುವಷ್ಟು ಸರಳವಾದುದಲ್ಲ

ಇನ್ನು ಕೊಂದವರು ಉಳಿವರೇ...?

ವಿಶ್ಲೇಷಣೆ

ಡಾ. ಟಿ.ಎನ್.ವಾಸುದೇವಮೂರ್ತಿ

ಧರ್ಮ, ಸಿದ್ಧಾಂತ, ಸಂಕೇತಗಳ ಹೆಸರಿನಲ್ಲಿ ನಡೆಯುವ ಹಿಂಸೆಗೆ ಮನುಷ್ಯ ನಾಗರಿಕತೆಯಷ್ಟೇ ಪ್ರಾಚೀನ ಇತಿಹಾಸವಿದೆ. ಯಾವುದೇ ಒಂದು ಮತ- ಸಿದ್ಧಾಂತ, ಐಡಿಯಾಲಜಿಯು ದಬ್ಬಾಳಿಕೆಗೆ, ಹಿಂಸಾಚಾರಕ್ಕೆ ಇಳಿದಾಗ ಉಳಿದ ಮತ-ಸಿದ್ಧಾಂತ, ಐಡಿಯಾಲಜಿಗಳೂ ಅದರಿಂದ ಪ್ರೇರಣೆಗೊಂಡು ಅದೇ ಹಾದಿ ಹಿಡಿಯುವುದು ಲೋಕಾರೂಢಿ.

ಸುದ್ದಿ ಮಾಹಿತಿಗಳು ಬಹಳ ತ್ವರಿತವಾಗಿ ಹರಡುವ ಇಂದಿನ ಯುಗದಲ್ಲಂತೂ ಹಿಂಸೆ, ಅಸಹಿಷ್ಣುತೆಯು ಬಹುಸುಲಭವಾಗಿ ವ್ಯಾಪಿಸುತ್ತವೆ. 'ಪ್ರಪಂಚದಲ್ಲಿ ಮತ್ತೊಬ್ಬನನ್ನು ಕೊಂದು ರಕ್ಷಿಸಿಕೊಳ್ಳಬೇಕಾದ ಧರ್ಮ ಇರುತ್ತದೆಯೇ?' ಎಂದು ಸಾಹಿತಿ ಪೂರ್ಣಚಂದ್ರ ತೇಜಸ್ವಿ ಪ್ರಶ್ನಿಸಿದ್ದರು.

ಮೊದಲಿಗೆ 'ನಾವು' ಮತ್ತು 'ಅವರು' ಎಂಬ ಪ್ರತ್ಯೇಕತಾ ಭಾವನೆಯು ಹಿಂಸೆಯ ಬೀಜವಾಗಿದೆ. ಇದು ಮನೆಯವರು, ಕುಟುಂಬದವರು ಕಲಿಸುವ ಮೊದಲ ಪಾಠವಾಗಿದೆ. 'ನಮ್ಮದು ಇಂತಹ ಜಾತಿ, ಧರ್ಮ, ಪಂಗಡ' ಎಂದು ಹೇಳಿಕೊಡುವ ಪ್ರತಿಯೊಬ್ಬ ತಾಯ್ತಂದೆಯೂ 'ನಾವು ಬೇರೆ, ಹೊರಗಿನ ಸಮಾಜದ ಜನ ಬೇರೆ' ಎಂಬ ಪ್ರತ್ಯೇಕತಾ ಭಾವವನ್ನು ಮಗುವಿನೊಳಗೆ ತುಂಬುತ್ತಿರುತ್ತಾರೆ. 'ಈ ಸಮಾಜ ಬೇರೆಯಲ್ಲ, ನಾವು ಹೋದ ಮೇಲೆ ಈ ಸಮಾಜವೇ ನಿನ್ನನ್ನು ಸಾಕುವುದು. ಆದ್ದರಿಂದ ತಾಯ್ತಂದೆಯರ ಬಗ್ಗೆ ಇರುವಷ್ಟೇ ಆದರ ಸಮಾಜದ ಬಗೆಗೂ ಇರಬೇಕು' ಎಂಬ ಶಿಕ್ಷಣವನ್ನು ಮಕ್ಕಳಿಗೆ ಹಿರಿಯರೆನಿಸಿದವರು ನೀಡಬೇಕಾಗುತ್ತದೆ.

ಎರಡನೆಯದಾಗಿ, ನಮ್ಮ ಧರ್ಮ, ಸಿದ್ಧಾಂತಗಳು ಸಾಧ್ಯವಾದಷ್ಟೂ ಅನ್ಯರ ಟೀಕೆ, ವಿಮರ್ಶೆಗೆ ಒಡ್ಡಿಕೊಳ್ಳಲಿ ಎಂಬ ಮನೋಧರ್ಮ ಇಂದಿನ ಅಗತ್ಯವಾಗಿದೆ. ಭಾರತ ಸಾವಿರಾರು ವರ್ಷಗಳ ವಿದೇಶಿ ದಾಳಿ, ಆಕ್ರಮಣಗಳಿಗೆ ತುತ್ತಾದರೂ ಭಾರತೀಯತೆಗೆ ಅದರಿಂದ ಹಾನಿಯಾಗಲಿಲ್ಲ. ಇಲ್ಲಿ ಬಹಳಷ್ಟು ದಬ್ಬಾಳಿಕೆ, ವಿಧ್ವಂಸಕತೆ ನಡೆದಿವೆ, ಇಲ್ಲವೆಂದಲ್ಲ. ಆದರೆ ಅದರಿಂದ ಬೇರೆ ಭೂಭಾಗಗಳ ಸಂಸ್ಕೃತಿ, ಜನಾಂಗಗಳು ಪೂರ್ತಿಯಾಗಿ ನಾಶವಾದ ಹಾಗೆ ನಮ್ಮಲ್ಲಿ ಆಗಲಿಲ್ಲ. ಅದಕ್ಕೆ ಭಾರತೀಯತೆಯಲ್ಲಿರುವ ಬಹುತ್ವ ಮತ್ತು ಅಂತರ್‌ವೈರುಧ್ಯ ಕಾರಣವಾಗಿದೆ.

ಭಾರತೀಯತೆಯಲ್ಲಿ ವೇದಗಳನ್ನು ಒಪ್ಪುವ ಧಾರೆಗಳೂ ಉಂಟು, ಒಪ್ಪದ ಧಾರೆಗಳೂ ಉಂಟು. ದೇವರನ್ನು ಸಗುಣ-ನಿರ್ಗುಣ ಎರಡೂ ರೂಪಗಳಲ್ಲಿ ಪೂಜಿಸುವ ಪಂಥಗಳುಂಟು. ದೇವರನ್ನೇ ನಿರಾಕರಿಸುವ ಶ್ರಮಣ ಪರಂಪರೆಗಳುಂಟು. ಎಲ್ಲವೂ ಪರಸ್ಪರ ಟೀಕಿಸುತ್ತಲೇ, ಒಂದನ್ನೊಂದು ವಿಮರ್ಶಿಸುತ್ತಲೇ ಸಾವಿರಾರು ವರ್ಷಗಳಿಂದ ಸಹಬಾಳ್ವೆ ಮಾಡಿಕೊಂಡು ಬಂದಿವೆ. ಆದರಿಂದು ಆಕ್ರಮಣಕಾರಿ ಬಲಪಂಥೀಯ ವಿಚಾರಗಳ ಪ್ರಚಾರದಿಂದಾಗಿ ಭಾರತೀಯತೆಯ ಈ ಮೂಲ ಗುಣದೊಂದಿಗೆ ನಾವು ಸಂಪರ್ಕ ಕಳೆದುಕೊಳ್ಳುವ ಆತಂಕದ ಸನ್ನಿವೇಶದಲ್ಲಿದ್ದೇವೆ.

ಮೂರನೆಯದಾಗಿ, ಅನ್ಯಕೋಮಿನವರನ್ನು ಅವರು ಮನುಷ್ಯರೇ ಅಲ್ಲ ಎಂಬಂತೆ ಬಿಂಬಿಸುವ ಪ್ರವೃತ್ತಿ ಹಿಂಸೆಗೆ ಮತ್ತೊಂದು ಮೂಲವಾಗಿದೆ. ಇದು, ಮುಖ್ಯವಾಗಿ ಸಾಮಾಜಿಕ ಜಾಲತಾಣಗಳ ಕೆಲವು ಕಿಡಿಗೇಡಿಗಳಿಂದ ಮತ್ತು ಸ್ವಾರ್ಥಿಗಳಾದ ಕೆಲವು ಧಾರ್ಮಿಕ ನಾಯಕರಿಂದ ನಡೆಯುತ್ತದೆ. ಮೊನ್ನೆ ಉತ್ತರಪ್ರದೇಶದಲ್ಲಿ ಒಂದು ಕೋಮಿನ ಜನ ಅನ್ಯಕೋಮಿನ ಬಗ್ಗೆ ಅವಹೇಳನಕಾರಿ ಪೋಸ್ಟರುಗಳನ್ನು ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶನ ಮಾಡಿದಾಗ ತಕ್ಷಣವೇ ಪೊಲೀಸರು ಕ್ರಿಯಾಶೀಲರಾಗಿ ಆ ಪೋಸ್ಟರುಗಳನ್ನು ತೆರವುಗೊಳಿಸಿದರು. ಯಾವುದೇ ಸಮುದಾಯದ ಜನ, ಅಮಾನವೀಯವಾಗಿ ವರ್ತಿಸಿದಾಗ ಅದನ್ನು ನಮ್ಮ ಕಾನೂನು ಕಟ್ಟಲೆಗಳು ಸಮರ್ಥವಾಗಿ ತಹಬಂದಿಗೆ ತರಬಲ್ಲವು. ಅದನ್ನು ನಿಯಂತ್ರಿಸಲು ಮತ್ತೊಂದು ಕೋಮಿನವರು ಅದೇ ರಾಕ್ಷಸತ್ವವನ್ನು ಪ್ರದರ್ಶಿಸಬೇಕಾದ ಅಗತ್ಯವಿಲ್ಲ. ಅಲ್ಲದೆ ಯಾವುದೇ ಒಂದು ಗುಂಪು ಅಥವಾ ಘಟನೆ ಒಂದು ಇಡೀ ಸಮುದಾಯವನ್ನು ಪ್ರತಿನಿಧಿಸಲಾರದು.

ಅಲ್ಲೆಲ್ಲೋ ಕೆಲವು ಧೂರ್ತರು ಬಂದೂಕು ಹಿಡಿದು ಬೆದರಿಸಬಹುದು, ಇಲ್ಲಿಯೂ ಕೆಲವರು ತ್ರಿಶೂಲ ಝಳಪಿಸಬಹುದು. ಹಾಗೆಂದು ಇಂಥ ಹಿಂಸಾಲೋಲುಪರೇ ಯಾವುದೇ ಧರ್ಮ ಅಥವಾ ಸಮಸ್ತ ಸಮುದಾಯದ ಪ್ರತಿನಿಧಿಗಳೆಂದು ಭಾವಿಸಲಾಗದು.

ಮನುಷ್ಯನು ಗುಣ-ದೋಷಗಳೆರಡರ ಸಮುಚ್ಚಯವಾದ ಕಾರಣ, ಪ್ರಾಚೀನ ಧರ್ಮಗ್ರಂಥಗಳು ಪ್ರಾಚೀನ ಮನುಷ್ಯ ಕುಲಕ್ಕೆ ಹಿಡಿದ ಕೈಗನ್ನಡಿಯಾಗಿವೆ. ಆದ್ದರಿಂದಲೇ ಪ್ರಾಚೀನ ಧರ್ಮಗ್ರಂಥಗಳಲ್ಲಿ ಉದಾತ್ತ ವಿಚಾರಗಳೂ ಕಾಣಿಸುತ್ತವೆ, ಹಾಗೆಯೇ ಅಮಾನವೀಯವಾದ ವಿಚಾರಗಳೂ ಸೇರಿಕೊಂಡಿರುತ್ತವೆ. ಉದಾಹರಣೆಗೆ, ಜಗತ್ತಿನ ಎಲ್ಲ ಧರ್ಮಗ್ರಂಥಗಳೂ ಒಂದಲ್ಲ ಒಂದು ರೂಪದಲ್ಲಿ ಯುದ್ಧವನ್ನು, ಹಿಂಸಾಚಾರವನ್ನು ಅನುಮೋದಿಸುತ್ತವೆ, ಹೆಣ್ಣನ್ನು ಮತ್ತು ಜಾತಿ-ಜನಾಂಗ ವ್ಯವಸ್ಥೆಯನ್ನು ಪವಿತ್ರವಾಗಿ ಇರಿಸಿಕೊಳ್ಳಬೇಕು ಎಂದು ಆದೇಶಿಸುತ್ತವೆ. ಜೊತೆಗೆ ಅಹಿಂಸೆ, ಸಮಾನತೆ, ಶಾಂತಿ ಪ್ರೀತಿಗಳನ್ನೂ ಬೋಧಿಸುತ್ತವೆ. ಮನುಷ್ಯ ಮನಸ್ಸಿನ ವೈರುಧ್ಯಗಳು ಧರ್ಮಗ್ರಂಥಗಳಲ್ಲೂ ಅಡಕಗೊಂಡಿರುತ್ತವೆ. ಹಾಗಾಗಿ ಯಾವುದೇ ಧರ್ಮ ಗ್ರಂಥವನ್ನು ಪ್ರಮಾಣ ಗ್ರಂಥದಂತೆ ಪರಿಭಾವಿಸುವ ಬದಲಾಗಿ ಪ್ರಾಚೀನ ಜನಪದರ ಮನೋವೃತ್ತಿಗಳ ಒಂದು ಸಮಗ್ರ ದಾಖಲೆಯಂತೆ ಪರಿಭಾವಿಸುವುದು ಸೂಕ್ತವೆನಿಸುತ್ತದೆ. ಅಷ್ಟಕ್ಕೂ ಮತ್ತೊಬ್ಬನನ್ನು ಹತ್ಯೆ ಮಾಡಬಾರದು ಎಂಬ ಸರಳವಾದ ತಿಳಿವಳಿಕೆಯನ್ನು ಹೊಂದಲು ಧರ್ಮಗ್ರಂಥಗಳನ್ನು ಆಶ್ರಯಿಸಬೇಕೇ?

ಸಮಾಜದ ಎಲ್ಲ ಸಮಸ್ಯೆಗಳಿಗೂ ಧರ್ಮದಲ್ಲಿ ಪರಿಹಾರವಿದೆ ಎಂಬ ಅಪಕಲ್ಪನೆಯೂ ಹಿಂಸೆಗೆ ಮತ್ತೊಂದು ಕಾರಣವಾಗಿದೆ. ದೇಶಭಕ್ತಿ, ಸಾಮಾಜಿಕ ನ್ಯಾಯ, ನೈತಿಕತೆ, ವಿಜ್ಞಾನ ಹೀಗೆ ಎಲ್ಲದಕ್ಕೂ ಧರ್ಮದ ಲೇಪನ ಮಾಡಲಾಗುತ್ತದೆ. ಧರ್ಮದ ಮೇಲೆ ಅಷ್ಟೆಲ್ಲ ಹೊರೆ ಹೊರಿಸುವುದು ತರವಲ್ಲ. ಸಂಸಾರ ಭಾರದಿಂದ ಬಳಲಿರುವ ಮನುಷ್ಯನಿಗೆ ಧರ್ಮ ಹಗುರವಾಗಿ ಬದುಕುವ ಮಾರ್ಗಗಳನ್ನು ತೋರಿಸಬಲ್ಲುದೇ ವಿನಾ ಲೋಕದ ಎಲ್ಲ ಸಮಸ್ಯೆಗಳಿಗೂ ಧರ್ಮದಲ್ಲಿ ಪರಿಹಾರ ಹುಡುಕುವುದು ಜಾಣ್ಮೆಯಲ್ಲ. ಆಗ ಶಾಲೆಗೆ ಹೋಗುವ ಹೆಣ್ಣುಮಕ್ಕಳ ಮೇಲೆ ನಿಷೇಧ ಹೇರುವುದೂ ಧಾರ್ಮಿಕತೆಯಾಗುತ್ತದೆ. ಮತ್ತೊಬ್ಬನನ್ನು ಕೊಂದು ದೇವರ ಪ್ರೀತಿಗಳಿಸಬೇಕೆಂಬ ಹುಚ್ಚುತನವೂ ಧಾರ್ಮಿಕತೆಯಾಗುತ್ತದೆ.

ಧರ್ಮದಲ್ಲಿ ನಿಜವಾಗಿಯೂ ಯೋಗ್ಯವಾದ ಪರಿಹಾರಗಳು ಇದ್ದಿದ್ದರೆ ದೇಶ ವಿಭಜನೆಯ ಸಂದರ್ಭದಲ್ಲಿ ಅಷ್ಟು ಘೋರವಾದ ಕೋಮು ಹಿಂಸಾಚಾರ ನಡೆಯುತ್ತಿರಲಿಲ್ಲ. ಪರಿಹಾರವಿದೆ ಎಂಬ ತಪ್ಪು ಕಲ್ಪನೆಯೇ ಅಂದಿನ ಕೋಮು ಹಿಂಸಾಚಾರದ ಹಾಗೂ ಇಂದಿಗೂ ಮುಂದುವರಿಯುತ್ತಿರುವ ವೈಷಮ್ಯದ ಮೂಲವಾಗಿದೆ.

ಧರ್ಮಾಂಧನೊಬ್ಬನು ತಾನು ದೇವರಿಗಾಗಿ ಹಿಂಸಾಚಾರಕ್ಕೆ ಇಳಿದಿದ್ದೇನೆ ಎಂದು ಹೇಳಿಕೊಳ್ಳಬಹುದು. ಆದರೆ ಒಳಹೊಕ್ಕು ನೋಡಿದಾಗ ಅವನ ಶೈಕ್ಷಣಿಕ ಮಟ್ಟ, ಸಾಮಾಜಿಕ ಹಿನ್ನೆಲೆ, ಆರ್ಥಿಕ ಸ್ಥಿತಿಗತಿ, ಬೌದ್ಧಿಕ ಪೂರ್ವಗ್ರಹಗಳು ಅವನನ್ನು ಅಂತಹ ಹಿಂಸಾಚಾರದಲ್ಲಿ ತೊಡಗಿಸಿವೆ ಎಂಬುದು ತಿಳಿಯದಿರದು. ಮನುಷ್ಯ ಬದುಕು ಧರ್ಮಾಂಧರ ಸೀಮಿತ ಗ್ರಹಿಕೆ, ತೀರ್ಮಾನಗಳಿಗೆ ನಿಲುಕುವಷ್ಟು ಸರಳವಾದುದಲ್ಲ.

ಸಾಮಾಜಿಕ ಮಾಧ್ಯಮಗಳಲ್ಲೇ ವ್ಯವಹರಿಸುವ ಇಂದಿನ ಆಧುನಿಕ ಯುಗದಲ್ಲಿ ಹತ್ಯೆಗೆ ಹರಿತವಾದ ಖಡ್ಗವೇ ಬೇಕಿಲ್ಲ, ವ್ಯಕ್ತಿಯ ಚಾರಿತ್ರ್ಯ ಹನನಕ್ಕೆ ಹರಿತವಾದ ನಾಲಗೆ, ಲೇಖನಿಯೂ ಸಾಕಾಗುತ್ತದೆ. ಇದಕ್ಕೆ ಅಂತರ್ಜಾಲದ ಭಾಷೆಯಲ್ಲಿ 'ಟ್ರೋಲಿಂಗ್' ಎಂಬ ಹೊಸ ಪದವನ್ನೇ ಟಂಕಿಸಲಾಗಿದೆ. ಬಂದೂಕು, ತ್ರಿಶೂಲಗಳನ್ನು ಹಿರಿವ ಕಿರಾತಕರನ್ನು ಬದಲಾಯಿಸಬಹುದು. ಆದರೆ ಟ್ರೋಲಿಂಗ್ ಮಾಡಿ ಹಣಿಯಲೆತ್ನಿಸುವ ಬುದ್ಧಿವಂತರನ್ನು ತಿದ್ದಲಾಗದು. ಮಾತುಕತೆಗಿಂತ ತನ್ನ ನಿಲುವನ್ನು ವಿಜೃಂಭಿಸುವುದೊಂದೇ ಉದ್ದೇಶವಾಗಿ ಬಿಟ್ಟರೆ ಇವರಿಗೂ, ಮೂಲಭೂತವಾದಿಗಳಿಗೂ ಯಾವ ವ್ಯತ್ಯಾಸವಿರುತ್ತದೆ?

ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರನ್ನು ಮೇಯುತ್ತಿದ್ದ ದೃಶ್ಯವನ್ನು ಕಂಡ ಬಸವಣ್ಣ 'ಕೊಂದವರು ಉಳಿಯಬಲ್ಲರೇ, ಕೂಡಲಸಂಗಮದೇವ?' ಎಂದು ಕೇಳುತ್ತಾನೆ. ಮತ್ತೊಬ್ಬನನ್ನು ಇಲ್ಲವಾಗಿಸಿ ಜಯಶಾಲಿಯಾಗುವೆನೆಂದು ಬೀಗುವ ವ್ಯಕ್ತಿಗೆ ತನ್ನ ಹೆಡೆದಲೆಯ ಹಿಂದೆಯೂ ವಿಧಾತನ ಹರಿತವಾದ ಖಡ್ಗ ಸಿದ್ಧವಾಗಿದೆ. ಈ ನಶ್ವರ ಬದುಕಿನಲ್ಲಿ ಯಾವ ಕ್ಷಣದಲ್ಲಾದರೂ ತನ್ನ ತಲೆದಂಡವಾಗಬಹುದು ಎಂಬ ಅರಿವು ಇರಬೇಕಾಗುತ್ತದೆ. ಆಗ ಮಾತ್ರ ಈ ಲೋಕದಲ್ಲಿ ವಿನಯಶೀಲರಾಗಿ ಬಾಳಲು ಸಾಧ್ಯ.

ಲೇಖಕ: ಸಹಾಯಕ ಪ್ರಾಧ್ಯಾಪಕ
ಜ್ಯೋತಿ ನಿವಾಸ್ ಕಾಲೇಜ್, ಬೆಂಗಳೂರು

ಚುರುಮುರಿ

ರಕ್ಷಣೆ ರೂಲ್ಸ್

• ಸುಮಂಗಲಾ

ಬೆಕ್ಕಣ್ಣ ಬಿಟ್ಟೂಬಿಡದೆ ತಾಲಿಬಾನೀಯರ ಸುದ್ದಿಯನ್ನು ಟೀವಿಯಲ್ಲಿ ನೋಡುತ್ತಿತ್ತು. ಯಾವ್ಯಾವುದೋ ಚಾನೆಲ್ ತಿರುಗಿಸಿ ಮುರುಗಿಸಿ ನೋಡುತ್ತಿತ್ತು, ಏನೋ ಟಿಪ್ಪಣಿ ಮಾಡಿಕೊಳ್ಳುತ್ತಿತ್ತು. ಮಧ್ಯೆ ಮಧ್ಯೆ 'ಅಷ್ಟೆಲ್ಲ ಲಿಪ್‌ಸ್ಟಿಕ್ ಹಚ್ಚಿಕೋಬಾರದು, ವಳ್ಳೇದಲ್ಲ', 'ಸಂಜಿಮುಂದ ಹಂಗೆಲ್ಲ ಅಡ್ಡಾಡಬಾರದು' ಎಂದೆಲ್ಲ ಮಾತಿನ ವಗ್ಗರಣೆ ಬೇರೆ ಹಾಕುತ್ತಿತ್ತು. ನಾನು ಇಣುಕಲು ಹೋದರೆ ಟಿಪ್ಪಣಿಯನ್ನು ಮುಚ್ಚಿಟ್ಟು ಕೊಂಡಿತು. 'ಮತ್ತೇನು ಹೊಸ ಕಾರುಬಾರು ಶುರು ಮಾಡಿದ್ಯಲೇ' ಎಂದೆ ಕಕ್ಕಾಬಿಕ್ಕಿಯಾಗಿ.

'ಏನಿಲ್ಲೇಳು... ತಾಲಿಬಾನೀಯರು ಹೆಣ್ಣುಮಕ್ಕಳಿಗೆ ಏನೇನು ಕಟ್ಟುಪಾಡು ವಿಧಿಸ್ಯಾರ, ಅದ್ರಾಗೆ ನಮಗ ಯಾವುವು ಪ್ರಸ್ತುತ ಅನ್ನಿಸ್ತಾವು, ಹಂಥಾವನ್ನೆಲ್ಲ ಪಟ್ಟಿ ಮಾಡಿಕೊಡಂತ ಆರಗ ಅಂಕಲ್ ಹೇಳ್ಯಾರ. ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಾಕೆ ನಾವು ಅಗದಿ ಭಯಂಕರ ಟೊಂಕ ಕಟ್ಟಿ ನಿಂತೀವಿ ಅಂತ ಅಂಕಲ್ ಹೇಳ್ಯಾರ. ಅದಕ್ಕ ಹೆಣ್ಣುಮಕ್ಕಳು ಹೆಂತಾ ಬಟ್ಟಿ ಹಾಕ್ಕೋಬೇಕು, ಎಷ್ಟ್ ಹೊತ್ತಿನ ಮ್ಯಾಗೆ ಬೀದಿವಳಗ ಕಾಲಿಡಬಾರದು, ಯಾರ ಜೋಡಿ ಹೊರಗ ಹೋಗಬಹುದು, ಯಾರ ಜೋಡಿ ಎಷ್ಟ್ ಮಾತನಾಡಬಹುದು ಎಲ್ಲಾದಕ್ಕೂ ಪಕ್ಕಾ ರೂಲ್ಸ್ ಮಾಡತಾರಂತ. ಅದಕ್ಕ ತಾಲಿಬಾನೀಯರ ಕಟ್ಟುಪಾಡುಗಳನ್ನು ನೋಡಿ ಪಟ್ಟಿ ಮಾಡಾಕ ಹತ್ತೀನಿ. ಇದ್ನೆಲ್ಲ ಛಲೋತ್ನಾಗೆ ಮಾಡಿಕೊಟ್ಟರೆ, ಯಾವುದಾರ ನಿಗಮಕ್ಕೋ, ಮಂಡಳಿಗೋ ನನ್ನ ಅಧ್ಯಕ್ಷ ಮಾಡ್ತಾರ' ಬೆಕ್ಕಣ್ಣ ಭಲೇ ಹುಕಿಯಿಂದ ವಿವರಿಸಿತು.

'ಮಂಗ್ಯಾನಂಥವನೇ... ಬರೀ ತಾಲಿಬಾನೀಯರ ರೂಲ್ಸ್ ಪಟ್ಟಿ ಯಾಕಷ್ಟೇ ಮಾಡ್ತೀ, ಮತ್ತ ನಿಮ್ಮ ಮನುಮಾಮಾ ಏನು ಹೇಳ್ಯಾನ ಅದನ್ನು ನೋಡಂಗಿಲ್ಲೇನು. ಮೊದ್ಲು ಗಂಡುಮಕ್ಕಳು ಏನ್ ಮಾಡಬಾರದು, ಹೆಂಗಿರಬಕು ಅಂತ ಪಟ್ಟಿ ಮಾಡಲೇ...' ಎಂದು ಬೈದೆ.

'ಈಗ ಹೊಸಾ ರೂಲ್ಸ್, ನಿಷೇಧಗಳು ಏನು ಅದಾವು ಅವನ್ನು ನೋಡಿ, ಕಲಿಯೂದಷ್ಟೇ ಉಳಿದೈತಿ. ಗಂಡುಮಕ್ಕಳ ಬಗ್ಗೆ ಎದಕ್ಕ ಚಿಂತೆ ಮಾಡೂದು... ಹೆಂಗಿದ್ರೂ, ಏನೇ ಮಾಡಿದ್ರೂ ಅವ್ರು ಗಂಡುಮಕ್ಕಳು!' ಎಂದು ಮತ್ತೊಂದು ವಿತಂಡವಾದ ಹೂಡಿತು!

ಸಂಗತ

ಸರಳ ನಡೆಯ ಸೊಬಗು!

ಜನಪ್ರತಿನಿಧಿಯಾಗಿ ಆಯ್ಕೆಯಾಗುವುದು ಬದುಕಿನಲ್ಲಿ ಬರುವ ದೊಡ್ಡ ಅವಕಾಶ. ಅದನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಮತದಾರರಿಗೆ ಮಾಡುವ ದ್ರೋಹ

• ಮಲ್ಲಿಕಾರ್ಜುನ ಹೆಗ್ಗಳಗಿ

ಜಮಖಂಡಿಯ ಶಾಸಕರಾಗಿದ್ದ ಪಿ.ಎಂ.ಬಾಂಗಿ ಅವರು ಸ್ವಾತಂತ್ರ್ಯಪೂರ್ವದಲ್ಲಿ ಪ್ರಜಾಪರಿಷತ್ತಿಗೆ ಆಯ್ಕೆಯಾಗಿ ಜಮಖಂಡಿ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದರು. ಆಗಿನ್ನೂ ಜಮಖಂಡಿಗೆ ವಿದ್ಯುತ್ ದೀಪ ಬಂದಿರಲಿಲ್ಲ. ಸಂಸ್ಥಾನದ ದೊರೆ ಪಟವರ್ಧನ ಅವರು ಅರಮನೆ ಸಮೀಪ ಡೀಸೆಲ್ ಉಪಯೋಗಿಸಿ ವಿದ್ಯುತ್ ಉತ್ಪಾದಿಸುವ ಯಂತ್ರವನ್ನು ಅಳವಡಿಸಿದರು. ಈ ಕಿರು ವಿದ್ಯುತ್ ಉತ್ಪಾದನೆಯಿಂದ ಅರಮನೆ ಮತ್ತು ಮುಖ್ಯಮಂತ್ರಿಯ ಮನೆಗೆ ವಿದ್ಯುತ್ ಪೂರೈಸುವ ವ್ಯವಸ್ಥೆ ಮಾಡಲಾಯಿತು.

ಈ ವಿಷಯ ತಿಳಿದು ಬಾಂಗಿ ಅವರು ಪಟವರ್ಧನ ದೊರೆಯನ್ನು ಭೇಟಿ ಮಾಡಿ, 'ನನ್ನನ್ನು ಆಯ್ಕೆ ಮಾಡಿದ ಜನರು ಚಿಮಣಿಯ ಬೆಳಕಿನಲ್ಲಿ ಬದುಕುವಾಗ ಅವರ ನಡುವೆ ಝಗಮಗಿಸುವ ವಿದ್ಯುತ್ ಬೆಳಕಿನಲ್ಲಿ ನಾನು ವಾಸಿಸುವುದು ಬಹಳ ಮುಜುಗರ ಉಂಟುಮಾಡುತ್ತದೆ. ನಮ್ಮ ಮನೆಗೆ ವಿದ್ಯುತ್ ಬೇಡ' ಎಂದು ಮನವಿ ಮಾಡಿದ್ದರು. ಜನಪ್ರತಿನಿಧಿಗಳು ಹೊಂದಿರಬೇಕಾದ ಸೂಕ್ಷ್ಮ ಮತ್ತು ಮುಜುಗರದ ಮನಃಸ್ಥಿತಿಗೆ ಈ ಪ್ರಕರಣ ಒಂದು ಮಾದರಿಯಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಪ್ರಯಾಣಿಸುವ ಮಾರ್ಗದಲ್ಲಿ ಸಾರ್ವಜನಿಕರಿಗೆ ತೀವ್ರ ಕಿರಿಕಿರಿ ಉಂಟುಮಾಡುತ್ತಿದ್ದ 'ಝೀರೊ ಟ್ರಾಫಿಕ್' ವ್ಯವಸ್ಥೆ ರದ್ದುಪಡಿಸುವ ಮಹತ್ವದ ತೀರ್ಮಾನ ತೆಗೆದುಕೊಂಡದ್ದು ತಿಳಿದಾಗ ಬಾಂಗಿ ಅವರ ನೆನಪಾಯಿತು.

ಜನಪ್ರತಿನಿಧಿಗಳ ಅತಿಯಾದ ವೈಭವ ಪ್ರದರ್ಶನ, ಲೋಲುಪತೆ ಜನಸಾಮಾನ್ಯರಿಗೆ ಮಾಡುವ ಅಪಮಾನ. ಭೋಗ ಸಂಸ್ಕೃತಿ ವಿನಾಶಕ್ಕೆ ಮೂಲ. ತಮಗೆ ಲಾಭ ತರುವ ಖಾತೆಯೇ ಬೇಕು ಎಂದು ಗದ್ದಲ ಹಾಕುವ ಮಂತ್ರಿಗಳನ್ನು ಕಂಡು ಮರುಕ ಹುಟ್ಟುತ್ತದೆ. ಜನಪ್ರತಿನಿಧಿಯಾಗಿ ಆಯ್ಕೆಯಾಗುವುದು ಬದುಕಿನಲ್ಲಿ ಬರುವ ಒಂದು ದೊಡ್ಡ ಅವಕಾಶ. ಅದನ್ನು ಸ್ವಂತದ ಆಸ್ತಿ ಅಂತಸ್ತು ಹೆಚ್ಚಿಸಿಕೊಳ್ಳುವುದಕ್ಕೆ ಬಳಸುವುದು ಮತದಾರರಿಗೆ ಮಾಡುವ ದ್ರೋಹ.

ಜನಪ್ರತಿನಿಧಿಗಳು ಕೋಟ್ಯಂತರ ಬೆಲೆಬಾಳುವ ಅರಮನೆಯಂತಹ ಮನೆ ಕಟ್ಟಿಸಿಕೊಳ್ಳುವುದು ಆಗಾಗ ಚರ್ಚೆಗೆ ಬರುತ್ತಿರುತ್ತದೆ. ಕುವೆಂಪು ತಮ್ಮ ಒಂದು ಕವನದಲ್ಲಿ 'ಅತಿಭೋಗವದು ರೋಗ, ಕೊಲ್ಲುವುದು ಬೇಗ, ಸಾಮಾನ್ಯ ಜೀವನವು ಪರಮಸುಧೆಯಂತೆ' ಎಂದು ತುಂಬ ಅರ್ಥಪೂರ್ಣವಾಗಿ ಹೇಳಿದ್ದಾರೆ. ಸರಳ ಜೀವನಕ್ಕೆ ಜನಪ್ರತಿನಿಧಿಗಳು ಮಾದರಿಯಾಗಬೇಕು.

70- 80ರ ದಶಕದಲ್ಲಿ ಕೆ.ಪಿ.ನಾಡಗೌಡ ಅವರು ಮುಧೋಳ ಕ್ಷೇತ್ರದ ಶಾಸಕರಾಗಿದ್ದರು. ಅವರು ಕೃಷಿಯ ಬಗ್ಗೆ ಬಹಳ ಆಸಕ್ತಿ ಹೊಂದಿದ್ದರು. ತಮ್ಮ 50 ಎಕರೆ ಭೂಮಿಯಲ್ಲಿ ಕಬ್ಬು ಬೆಳೆಯುತ್ತಿದ್ದರು. ಸಕ್ಕರೆ ಕಾರ್ಖಾನೆಯೊಂದರ ಅಧಿಕಾರಿಗಳು ಅವರನ್ನು ಭೇಟಿ ಮಾಡಿ 'ನಿಮ್ಮ ಜಮೀನಿನಲ್ಲಿ ರೈತರಿಗೆ ಮಾರ್ಗದರ್ಶನ ಮಾಡುವುದಕ್ಕೆ ಸುಧಾರಿಸಿದ ಪದ್ಧತಿಯಲ್ಲಿ ಕಬ್ಬಿನ ಬೇಸಾಯ ಮಾಡುತ್ತೇವೆ. ನಾವೇ ಉಚಿತವಾಗಿ ಕಬ್ಬಿನ ಬೀಜ, ಗೊಬ್ಬರ, ಆಳುಗಳನ್ನು ಕೊಟ್ಟು ಕಬ್ಬು ಬೆಳೆಯುತ್ತೇವೆ. ಬೆಳೆದ ಕಬ್ಬನ್ನು ನಿಮ್ಮ ಹೆಸರಿನಲ್ಲಿ ಖರೀದಿಸಿ ಪೂರ್ಣ ಹಣ ನಿಮಗೆ ಪಾವತಿಸುತ್ತೇವೆ' ಎಂದು ಹೇಳಿದರು.

ನಾಡಗೌಡರು ನಕ್ಕು, 'ನೀವು ಸಕ್ಕರೆ ಕಾರ್ಖಾನೆಯವರು ಕಬ್ಬಿಗೆ ಸರಿಯಾದ ಬೆಲೆ ಕೊಡುವುದಿಲ್ಲ. ಬಾಕಿ ಹಣ ಕೊಡದೆ ರೈತರಿಗೆ ತೊಂದರೆ ಕೊಡುತ್ತೀರಿ. ಶಾಸಕನಾಗಿ ನಾನು ಅವರ ಪರವಾಗಿ ಧ್ವನಿ ಎತ್ತಬೇಕಾಗುತ್ತದೆ. ನೀವು ನಮ್ಮ ಭೂಮಿಯಲ್ಲಿ ಪುಕ್ಕಟೆ ಕಬ್ಬು ಬೆಳೆದುಕೊಟ್ಟರೆ ನಿಮ್ಮ ಹಂಗಿನಲ್ಲಿ ಸಿಲುಕಿ ಧ್ವನಿ ಕಳೆದುಕೊಳ್ಳಬೇಕಾಗುತ್ತದೆ. ಇಂತಹ ತಂತ್ರಗಳಲ್ಲಿ ನನ್ನನ್ನು ಸಿಲುಕಿಸಬೇಡಿ' ಎಂದು ಹೇಳಿ ಅವರನ್ನು ಹೊರ ಹಾಕಿದರು.

ಅನೇಕ ಜನಪ್ರತಿನಿಧಿಗಳು ಇಂದು ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಶಕ್ತಿಮೀರಿ ಶ್ರಮಿಸುತ್ತಿದ್ದಾರೆ. ಅವರಿಗೆ ಕಡಿಮೆ ಬೆಲೆಗೆ ಸರ್ಕಾರಿ ಭೂಮಿ ಕೊಡಿಸುವುದು, ಅವರ ಹಿತಾಸಕ್ತಿ ಕಾಪಾಡುವ ರೀತಿಯಲ್ಲಿ ಸರ್ಕಾರಿ ಆಜ್ಞೆ ಹೊರಡಿಸುವ ಕೆಲಸ ಮಾಡುತ್ತಿದ್ದಾರೆ. ಜನಹಿತಕ್ಕೆ ದ್ರೋಹವಾಗುತ್ತಿದ್ದರೂ ಅವರ ಪರವಾಗಿ ಧ್ವನಿ ಎತ್ತುವುದಿಲ್ಲ. ಪ್ರಜಾಪ್ರಭುತ್ವದ ತತ್ವಗಳನ್ನೇ ಅವರು ಬುಡಮೇಲು ಮಾಡುತ್ತಾರೆ.



ರಾಜಧರ್ಮವಾದರೂ ಸನ್ಯಾಸಿ ಧರ್ಮದಷ್ಟೇ ಶ್ರೇಷ್ಠವಾದುದು. ವೈಭವ ಹೆಚ್ಚಾದ ಹಾಗೆ ಆತ್ಮದ ಅಧಃಪತನವೂ ದೊಡ್ಡದಾಗುತ್ತದೆ. ಉಪಭೋಗಕ್ಕಿಂತಲೂ ಹೆಚ್ಚಿನದಾದ ಆನಂದ ತ್ಯಾಗದ್ದು ಎಂದು ಪಂಪ ಮಹಾಕವಿ ಜನಪ್ರತಿನಿಧಿಗಳನ್ನು ಕುರಿತು ಹೇಳಿದ ಮಾತು ತುಂಬ ಮಾರ್ಮಿಕವಾಗಿದೆ.

ಇಟಲಿಯ ಸರ್ವಾಧಿಕಾರಿ ಮುಸೋಲಿನಿ, ರೋಮ್‌ನಲ್ಲಿ ಗಾಂಧೀಜಿ ಇದ್ದಾಗ ಭೋಜನ ಕೂಟಕ್ಕೆ ಬರಲು ಎರಡು ಬಾರಿ ಆಮಂತ್ರಿಸಿದ. ಗಾಂಧೀಜಿ ನಿರಾಕರಿಸಿದರು. ಆಗ ಮುಸೋಲಿನಿ ತನ್ನ ಪತ್ನಿಯ ಮುಖಾಂತರ ಅವರಿಗೆ ಊಟದ ಡಬ್ಬಿ ಕಳಿಸಿದ. ನಡೆದುಕೊಂಡೇ ಬಂದ ಆ ಮಹಿಳೆಯನ್ನು ಗೌರವಿಸಿ ಗಾಂಧೀಜಿ ಊಟದ ಡಬ್ಬಿ ಸ್ವೀಕರಿಸಿದರು. ಅಹಂಕಾರವನ್ನು ದೂರವಿಟ್ಟು ಸರಳವಾಗಿ ಬಂದ ಆ ಮಹಿಳೆಯ ನಡೆ ಗಾಂಧೀಜಿಯ ಮನ ಗೆದ್ದಿತು.

ಯಾವುದೇ ಸಂದರ್ಭದಲ್ಲಿ ಆಸೆ ಹುಟ್ಟಿಸುವ ಆಫರ್‌ಗಳು ಬಂದಾಗ ಜನಪ್ರತಿನಿಧಿಗಳು ನಿರಾಕರಿಸುವ ಮನಃಸ್ಥಿತಿ ಬೆಳೆಸಿಕೊಳ್ಳಬೇಕು. ಇದರಿಂದ ಅವರಲ್ಲಿ ಆತ್ಮವಿಶ್ವಾಸ ಮತ್ತು ಧೈರ್ಯ ಹೆಚ್ಚುತ್ತದೆ.

ವಾಚಕರ ವಾಣಿ

ಶಾಲಾರಂಭಕ್ಕೆ ಆತುರ ಸಲ್ಲದು

ಕೊರೊನಾ ಸೋಂಕಿನ ಕರಿನೆರಳಿನಿಂದ ಜನ ಇನ್ನೂ ಹೊರಬಾರದ ಕಠಿಣ ಸನ್ನಿವೇಶದಲ್ಲಿ ಸರ್ಕಾರ ಒಂದನೇ ತರಗತಿಯಿಂದ ಶಾಲಾರಂಭಕ್ಕೆ ಚಿಂತನೆ ನಡೆಸುತ್ತಿರುವುದು ಪೋಷಕರಲ್ಲಿ ಆತಂಕವನ್ನು ಉಂಟುಮಾಡಿದೆ. ನೆರೆರಾಜ್ಯ ಕೇರಳದಲ್ಲಿ ಈ ಸೋಂಕಿನ ಪ್ರಕರಣಗಳು ಇನ್ನೂ ಹೆಚ್ಚಿಗೆ ವರದಿಯಾಗುತ್ತಿವೆ. ಮಕ್ಕಳು ಅಂತರ ಕಾಯ್ದುಕೊಳ್ಳುವಂತೆ, ಮಾಸ್ಕ್ ಧರಿಸುವಂತೆ, ಆಗಾಗ ಕೈ ತೊಳೆಯುವಂತೆ ಮಾಡುವುದು ಕಷ್ಟಸಾಧ್ಯದ ಮಾತು. ಸಂಭಾವ್ಯ ಮೂರನೇ ಅಲೆಯನ್ನು ಎದುರಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸರ್ಕಾರ ಹೇಳಿದರೂ, ಎರಡನೇ ಅಲೆ ಸಂದರ್ಭದಲ್ಲಿ ಆಗಿರುವ ಕಹಿ ಅನುಭವದ ಹಿನ್ನೆಲೆಯಲ್ಲಿ ಪೋಷಕರಲ್ಲಿ ಅಳುಕು ಇದ್ದೇ ಇದೆ.

ಈಗಷ್ಟೇ ಪ್ರೌಢ ಮತ್ತು ಕಾಲೇಜು ಶಿಕ್ಷಣ ಪ್ರಾರಂಭವಾಗಿದ್ದು, ಮುಂದಿನ ಸ್ಥಿತಿಯನ್ನು ಕಾದು ನೋಡಬೇಕಾಗಿದೆ. ಪ್ರಾಥಮಿಕ ಹಂತದ ಶಾಲೆ ತೆರೆಯುವುದನ್ನು ಇನ್ನಷ್ಟು ದಿನ ಮುಂದೂಡುವುದು ಎಲ್ಲರ ಹಿತದೃಷ್ಟಿಯಿಂದ ಒಳ್ಳೆಯದು.

ಗಣೇಶ ಆರ್., ಹಾಸನ

ಭಿಕ್ಷಾಟನೆ ಕರ ಸಂಗ್ರಹ ನಿಲ್ಲಲಿ

ರಾಜ್ಯ ಸರ್ಕಾರ ಒಂದೆಡೆ, 'ಭಿಕ್ಷಾಟನೆಯನ್ನು ಪ್ರೋತ್ಸಾಹಿಸಬೇಡಿ, ಭಿಕ್ಷಾಟನೆ ಒಂದು ಪಿಡುಗು, ಅದನ್ನು ತೊಲಗಿಸಿ' ಎಂದು ರೇಡಿಯೊ ಮೂಲಕ ಪ್ರಚಾರ ಮಾಡುತ್ತದೆ. ಇನ್ನೊಂದೆಡೆ, ನಗರಸಭೆ ಮೂಲಕ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಸಿಕೊಳ್ಳುವಾಗ ಭಿಕ್ಷಾಟನೆ ಕರವನ್ನು ಸಂಗ್ರಹಿಸುತ್ತದೆ. ಇದು ಸರ್ಕಾರದ ದ್ವಂದ್ವ ನೀತಿಯಾಗಿದೆ.

ಸಂಗ್ರಹಿಸಿದ ಭಿಕ್ಷಾಟನೆ ಕರದಿಂದ ಭಿಕ್ಷುಕರಿಗೆ ಪುನರ್ವಸತಿ ಕಲ್ಪಿಸಿದ ಉದಾಹರಣೆಗಳಂತೂ ಕಂಡು ಬಂದಿಲ್ಲ. ಆದಾಗ್ಯೂ ಭಿಕ್ಷಾಟನೆ ಕರವನ್ನು ಸಂಗ್ರಹಿಸಲಾಗುತ್ತದೆ. ಭಿಕ್ಷಾಟನೆ ಕರ ಸಂಗ್ರಹ ನಿಲ್ಲಲಿ.

ಡಾ. ಟಿ.ಪಿ.ಗಿರಡ್ಡಿ, ಜಮಖಂಡಿ

ಸಾಂಸ್ಕೃತಿಕ ರಂಗಕ್ಕೆ ಬೇಕು ಅವಕಾಶ

ಕೋವಿಡ್- 19 ಎರಡನೇ ಅಲೆ ನಿಯಂತ್ರಣಕ್ಕೆ ಬಂದು ಜನಜೀವನ ಸಹಜಸ್ಥಿತಿಗೆ ಮರಳಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಶಾಲಾ ಕಾಲೇಜುಗಳು ಭಾಗಶಃ ಆರಂಭವಾಗಿವೆ. ಸಾರ್ವಜನಿಕ ಸಾರಿಗೆ, ಮೆಟ್ರೊ, ಮಾರುಕಟ್ಟೆ, ಮಾಲ್, ಸಿನಿಮಾ ಹಾಲ್‌ಗಳನ್ನು ಷರತ್ತುಬದ್ಧವಾಗಿ ತೆರೆಯಲು ಅನುಮತಿ ದೊರಕಿದೆ. ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಆಡಳಿತಗಳು ತಮ್ಮ ಸ್ವಾಮ್ಯದ ರಂಗಮಂದಿರಗಳನ್ನು ಕಲಾತಂಡಗಳಿಗೆ ಇನ್ನೂ ಕೊಡುತ್ತಿಲ್ಲ. ಈ ಬಗ್ಗೆ ಕೇಳಿದರೆ, ಸರ್ಕಾರದ ಆದೇಶಕ್ಕಾಗಿ ಕಾಯುತ್ತಿದ್ದೇವೆ ಎನ್ನುತ್ತಾರೆ. ಆದರೆ ನಾಲ್ಕು ರಂಗಾಯಣಗಳು ಚಟುವಟಿಕೆ ಆರಂಭಿಸಿ, ನಾಟಕೋತ್ಸವ, ವಿಚಾರಸಂಕಿರಣ ಮುಂತಾದ ಕಾರ್ಯಕ್ರಮ ಮಾಡುತ್ತಿವೆ.

ರಂಗಶಂಕರ, ಡಾ. ಅಶ್ವಥ್ ಕಲಾಸೌಧ, ನಟನ ಮೈಸೂರು ಮುಂತಾದ ಖಾಸಗಿ ಸಂಸ್ಥೆಗಳ ರಂಗಮಂದಿರಗಳು ಕೋವಿಡ್ ನಿಯಮಗಳನ್ನು ಅನುಸರಿಸಿ ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಿವೆ. ಸಂಸ್ಕೃತಿ ಇಲಾಖೆ ನೀಡುವ ವಿವಿಧ ಪ್ರಶಸ್ತಿಗಳನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿಯನ್ನು ರವೀಂದ್ರ ಕಲಾಕ್ಷೇತ್ರದಲ್ಲೇ ನೀಡಲಾಗಿದೆ. ಆದರೆ ರಂಗತಂಡಗಳಿಗೆ, ಸಂಗೀತ, ನೃತ್ಯ ಕಾರ್ಯಕ್ರಮಗಳಿಗೆ ನೀಡದಿರುವುದು ಕಲಾವಿದರಲ್ಲಿ ಕಸಿವಿಸಿ ಉಂಟುಮಾಡಿದೆ. ಕಲಾಕ್ಷೇತ್ರ, ನಯನ, ಕಲಾಗ್ರಾಮ ಸೇರಿದಂತೆ ಮೈಸೂರಿನ ಕಲಾಮಂದಿರ, ಕಿರು ರಂಗಮಂದಿರ ಹಾಗೂ ಜಿಲ್ಲಾ ರಂಗಮಂದಿರಗಳನ್ನು ಕಲಾವಿದರಿಗೆ ಶೀಘ್ರವಾಗಿ ದೊರಕಿಸಿಕೊಡಬೇಕು. ಇದರಿಂದ ಕೊರೊನಾ ಸಂಕಷ್ಟದಿಂದ ಹತಾಶರಾಗಿರುವ ಕಲಾವಿದರ ಮನಸ್ಸಿಗೆ ಒಂದಷ್ಟು ಸಾಂತ್ವನ, ಚೈತನ್ಯ ಸಿಗಲು ಸಾಧ್ಯ.

ಶಶಿಧರ ಭಾರಿಘಾಟ್, ಬೆಂಗಳೂರು

ಸ್ವಯಂ ಉದ್ಯೋಗದತ್ತ ಇರಲಿ ಯುವಜನರ ಚಿತ್ತ

ಮೊನ್ನೆ ನೋಟ್ ಪುಸ್ತಕ ಖರೀದಿಸಲೆಂದು ಅಂಗಡಿಗೆ ಹೋಗಿದ್ದೆ. ಅದೊಂದು ಫ್ಯಾನ್ಸಿ ಸ್ಟೋರ್ ಸಹ ಆಗಿತ್ತು. ಅಂಗಡಿಯಾತ ಗ್ರಾಹಕರೊಬ್ಬರಿಗೆ ಒಂದು ವಸ್ತುವನ್ನು ತೋರಿಸುತ್ತಾ, ಫೋನಿನಲ್ಲಿ ಮಾತನಾಡುತ್ತಿದ್ದ. ನಂತರ ತನ್ನ ಸಹಾಯಕನನ್ನು ಬೇರೊಂದು ಅಂಗಡಿಗೆ ಕಳುಹಿಸಿ, ಐದು ರೂಪಾಯಿಯ ಬಣ್ಣದ ಪೇಪರ್ ತರಿಸಿ, ಆ ಗ್ರಾಹಕರಿಗೆ ಕೊಟ್ಟ. ತನ್ನ ಗ್ರಾಹಕರಿಗೆ ಸೇವೆ ಒದಗಿಸಲು ಆತ ಕೇವಲ ಐದು ರೂಪಾಯಿಯ ವಸ್ತುವಿಗೆ ಅಷ್ಟೊಂದು ಕಾಳಜಿ ವಹಿಸಿದ್ದು ನೋಡಿ ನನಗೆ ಅಚ್ಚರಿಯಾದರೂ, ಇದು ಸರಿ ಎಂದೆನಿಸಿತು.

ಹೌದು, ಈ ರೀತಿ ವ್ಯಾಪಾರದಲ್ಲಿ ಚಾಕಚಕ್ಯತೆ ಮತ್ತು ಸೇವಾ ಮನೋಭಾವ ಇದ್ದರೆ ಮಾತ್ರ ದುಡಿಮೆಯಲ್ಲಿ ಪ್ರಗತಿ ಸಾಧ್ಯ. ಆತ ದೂರದ ರಾಜಸ್ಥಾನದಿಂದ ಬಂದು, ಮಲೆನಾಡಿನಲ್ಲಿ ಯಶಸ್ಸು ಕಂಡಿದ್ದ. ನಮ್ಮ ಕರ್ನಾಟಕದ ಯಾವುದೇ ಪಟ್ಟಣ, ನಗರಗಳಲ್ಲಿ ಪರಭಾಷಿಕರ ಅನೇಕ ಅಂಗಡಿಗಳು ಕಾಣಸಿಗುತ್ತವೆ. ಅವರು ನಮ್ಮ ರಾಜ್ಯದಲ್ಲಿ ನಮ್ಮ ಭಾಷೆಯನ್ನು ಕಲಿತು, ಗ್ರಾಹಕರಿಗೆ ಉತ್ತಮ ಸೇವೆ ನೀಡಿ, ಯಶಸ್ವಿಯಾಗುತ್ತಿದ್ದಾರೆ. ಇಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ. ಅಲ್ಲದೆ ಸಂಬಳದ ನಿರೀಕ್ಷೆ ಕಡಿಮೆ ಇರುತ್ತದೆ ಎಂಬ ಕಾರಣಕ್ಕೆ ತಮ್ಮ ಅಂಗಡಿಗಳಿಗೆ ಸಹಾಯಕರನ್ನಾಗಿ ಬಹುತೇಕ ತಮ್ಮದೇ ಊರಿನವರನ್ನು ಕರೆತರುತ್ತಾರೆ.

ನಮ್ಮೂರಿನ ಯುವಕರು, 'ವ್ಯಾಪಾರ ವ್ಯವಹಾರ ಮಾಡಿ ಕೈ ಸುಟ್ಟುಕೊಳ್ಳುವುದು ಏಕೆ?' ಎಂದು ನಗರಗಳತ್ತ ವಲಸೆ ಹೋಗುತ್ತಿರುವಾಗ, ಹೊರ ರಾಜ್ಯದವರು ನಮ್ಮ ನಡುವೆಯೇ ಹೇಗೆ ವ್ಯಾಪಾರದಲ್ಲಿ ಪ್ರಾವೀಣ್ಯ ಮೆರೆಯುತ್ತಿದ್ದಾರೆ? ನಮ್ಮೂರಿನ ಜನರಿಗೆ ನಮ್ಮೂರಿನ ಗ್ರಾಹಕರನ್ನೇ ಸೆಳೆಯುವ ಶಕ್ತಿ ಇಲ್ಲವೇ?! ಅಥವಾ ತನ್ನೂರಿನಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡುವ ಬಗ್ಗೆ ಅಸಡ್ಡೆಯೇ? ನಮ್ಮ ಯುವಕರು ಮಹಾನಗರಗಳತ್ತ ಉದ್ಯೋಗ ಹುಡುಕಿಕೊಂಡು ಹೋಗಿ, ಅಲ್ಲಿನ ಸ್ಪರ್ಧಾತ್ಮಕತೆಯಲ್ಲಿ ಕಡಿಮೆ ಸಂಬಳಕ್ಕೆ ಜೀವನವನ್ನು ಹೊಂದಾಣಿಕೆ ಮಾಡಿಕೊಳ್ಳುವ ಬದಲು, ತಮ್ಮದೇ ಊರಿನಲ್ಲಿ ಪ್ರಸ್ತುತ ಸಮಾಜಕ್ಕೆ, ಕಾಲಮಾನಕ್ಕೆ ತಕ್ಕಂತಹ ವ್ಯಾಪಾರ ವ್ಯವಹಾರಗಳನ್ನು ನಡೆಸುವಂತೆ ಸಜ್ಜಾಗಬೇಕಿದೆ. ಯಾವ ಉದ್ಯೋಗವೂ ಕೀಳಲ್ಲ. ಆತ್ಮವಿಶ್ವಾಸ, ಪರಿಶ್ರಮ, ಸೌಜನ್ಯಯುತ ವೃತ್ತಿಧರ್ಮದಿಂದ ಯಶಸ್ಸು ನಮ್ಮದಾಗುತ್ತದೆ ಎಂಬುದನ್ನು ಯುವಜನರಿಗೆ ಮನದಟ್ಟು ಮಾಡಬೇಕಿದೆ.

ಭಾರತಿ ಎ., ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉಗ್ರರ ನಿಲುಕಿನಲ್ಲಿ ಅಫ್ಗನ್ ಶಸ್ತ್ರಕೋಠಿ

ತಾಲಿಬಾನಿಗಳು ಎಂದರೆ ಸಲ್ವಾರ್-ಕಮೀಜ್ ಧರಿಸಿ, ರಷ್ಯಾದ ಎಕೆ-47 ಮತ್ತು ಎಕೆ-56 ರೈಫಲ್ ಹೊತ್ತ ಉಗ್ರರು ಎಂಬ ಭಾವನೆ ಇತ್ತು. ಆದರೆ ಆಗಸ್ಟ್ 14ರ ನಂತರ ತಾಲಿಬಾನಿಗಳು ತಮ್ಮ ಟ್ವಿಟರ್, ಫೇಸ್‌ಬುಕ್ ಖಾತೆಗಳಲ್ಲಿ ಹಾಕುತ್ತಿರುವ ಚಿತ್ರಗಳು ಬೇರೆಯದ್ದೇ ಚಿತ್ರಣ ನೀಡುತ್ತವೆ. ಈ ರೀತಿ ಪ್ರಕಟಿಸಿದ ಮೊದಲ ಚಿತ್ರದಲ್ಲಿ ರಷ್ಯಾ ನಿರ್ಮಿತ ಎಂಐ-24ವಿ ಕದನ ಹೆಲಿಕಾಪ್ಟರ್ ಜತೆ ತಾಲಿಬಾನ್ ಉಗ್ರರು ನಿಂತಿದ್ದರು. ಅದು ಅಫ್ಗಾನಿಸ್ತಾನ ಸೇನೆಗೆ 2019ರಲ್ಲಿ ಭಾರತವು ಉಡುಗೊರೆಯಾಗಿ ನೀಡಿದ್ದ ಹೆಲಿಕಾಪ್ಟರ್ ಆಗಿತ್ತು. ಭಾರತವು ಹೀಗೆ ಅಫ್ಗನ್ ಸೇನೆಗೆ ನೀಡಿದ್ದ 5 ಹೆಲಿಕಾಪ್ಟರ್‌ಗಳು ಈಗ ತಾಲಿಬಾನ್ ವಶವಾಗಿವೆ.

ನಂತರದ ವಾರದಲ್ಲಿ ಇಂತಹ ಹಲವು ಚಿತ್ರಗಳು ವೈರಲ್ ಆದವು. ಅಫ್ಗನ್ ಸೇನೆಗೆ 20 ವರ್ಷಗಳಲ್ಲಿ ಅಮೆರಿಕವು ಉಡುಗೊರೆಯಾಗಿ ನೀಡಿದ್ದ ಕದನ ಹೆಲಿಕಾಪ್ಟರ್‌ಗಳು, ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಸೇನಾ ಸಲಕರಣೆಗಳು, ವಿಶೇಷ ಸೇನಾ ವಾಹನಗಳಾದ ಹಮ್ವೀಗಳ ಜತೆಗೆ ತಾಲಿಬಾನಿಗಳು ಚಿತ್ರ ತೆಗೆಸಿಕೊಂಡು ಸಂಭ್ರಮಿಸಿದ್ದರು. ಅಮೆರಿಕ ಸೈನಿಕರ ಸೇನಾ ಉಡುಪುಗಳನ್ನೂ ಧರಿಸಿ ಚಿತ್ರ ತೆಗೆಸಿಕೊಂಡಿದ್ದರು. ಆ ಚಿತ್ರ ಸಹ ವೈರಲ್ ಆಗಿತ್ತು.

20 ವರ್ಷಗಳಲ್ಲಿ ಅಮೆರಿಕವು ಅಫ್ಗನ್ ಸೈನಕ್ಕೆ ನೀಡಿದ್ದ ಶಸ್ತ್ರಾಸ್ತ್ರಗಳು, ವಾಹನಗಳು, ಹೆಲಿಕಾಪ್ಟರ್‌ಗಳು ಈಗ ತಾಲಿಬಾನಿಗಳ ವಶವಾಗಿವೆ. ಅಪಾರ ಪ್ರಮಾಣದ ಅತ್ಯಾಧುನಿಕ ಬಂದೂಕುಗಳು, ರಾಕೆಟ್ ಮತ್ತು ಗ್ರನೇಡ್ ಲಾಂಚರ್‌ಗಳು, ನೈಟ್‌ವಿಷನ್ ಬೈನಾಕ್ಯುಲರ್‌ಗಳು ಈಗ ತಾಲಿಬಾನಿಗಳ ಕೈಸೇರಿವೆ.

ಅಫ್ಗನ್ ಸೈನಿಕರಿಗೆ ಅಮೆರಿಕ ಸೇನಿಯು ನೀಡಿದ್ದ ಸಮವಸ್ತ್ರವನ್ನು ಧರಿಸಿರುವ ತಾಲಿಬಾನ್ ಸೈನಿಕರು

ಅಪಾಯಗಳು

- ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ತಾಲಿಬಾನಿಗಳು ತಮ್ಮ ವೈರಿಗಳು ಮತ್ತು ತಮ್ಮ ವಿರುದ್ಧ ಹೋರಾಡಲು ಅಮೆರಿಕಕ್ಕೆ ನೆರವು ನೀಡಿದ್ದವರನ್ನು ಕೊಲ್ಲಲು ಬಳಸಬಹುದು
- ಐಎಸ್-ಖೊರಾಸನ್ ಉಗ್ರರು ಈ ಶಸ್ತ್ರಾಸ್ತ್ರಗಳನ್ನು ಪಡೆಯಲು ತಾಲಿಬಾನಿಗಳ ವಿರುದ್ಧ ಸೆಣಸಬಹುದು. ಈ ಶಸ್ತ್ರಾಸ್ತ್ರಗಳು ಐಎಸ್ ಉಗ್ರರ ಕೈವಶವಾದರೆ, ಅವರು ಅದನ್ನು ಭಾರತದ ವಿರುದ್ಧವೂ ಬಳಸಬಹುದು
- ತಾಲಿಬಾನಿಗಳು ಈ ಶಸ್ತ್ರಾಸ್ತ್ರಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಬಹುದು.

ಶಸ್ತ್ರಾಸ್ತ್ರ ಭಂಡಾರ

3.58 ಲಕ್ಷ ವಿವಿಧ ರೈಫಲ್‌ಗಳು

25,357 ಗ್ರೆನೇಡ್ ಲಾಂಚರ್‌ಗಳು

64,000 ಸ್ವಯಂಚಾಲಿತ ಬಂದೂಕುಗಳು

22,174 ಹಮ್ವೀ ಸೇನಾ ವಾಹನಗಳು

167 ಹೆಲಿಕಾಪ್ಟರ್ ಮತ್ತು ಡ್ರೋನ್‌ಗಳು

- ಇವುಗಳಲ್ಲಿ ತಾಲಿಬಾನಿಗಳ ವಶವಾಗಿರುವ ಸಲಕರಣೆಗಳ ನಿಖರ ಸಂಖ್ಯೆಯ ಮಾಹಿತಿ ಲಭ್ಯವಿಲ್ಲ. ಅಮೆರಿಕ ಮತ್ತು ಅಫ್ಗನ್ ಸೇನೆ ಸಹ ಈ ಮಾಹಿತಿಯನ್ನು ಬಹಿರಂಗಪಡಿಸಿಲ್ಲ

ಪಾಕ್ ಉಗ್ರರಿಗೆ ತಾಲಿಬಾನ್ ಬಲ

ಅಫ್ಗಾನಿಸ್ತಾನವನ್ನು ತಾಲಿಬಾನ್ ಕೈವಶ ಮಾಡಿಕೊಂಡಿರುವ ವಿದ್ಯಮಾನವು ಜಗತ್ತಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ದಟ್ಟವಾಗಿದೆ. ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಪ್ರಾಬಲ್ಯವು ಭಾರತಕ್ಕೆ ಹಲವು ರೀತಿಯಲ್ಲಿ ಸಮಸ್ಯೆ ಒಡ್ಡಬಹುದು ಎಂದು ಭದ್ರತಾ ಪರಿಣತರು ವಿಶ್ಲೇಷಿಸಿದ್ದಾರೆ.

ತಾಲಿಬಾನ್, ಜಾಗತಿಕ ರೀತಿ ರಿವಾಜುಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುವ ಸಂಘಟನೆಯೇನೂ ಅಲ್ಲ. ಅದು ಶಿಸ್ತುಬದ್ಧವಾದ ಸೇನೆಯೂ ಅಲ್ಲ. ತಾಲಿಬಾನ್‌ನಲ್ಲಿ ಇರುವವರೆಲ್ಲರೂ ಷರೀಯತ್ ನಿಯಮ ಪ್ರಕಾರ ನಡೆದುಕೊಳ್ಳುವ ಪಣ ತೊಟ್ಟವರು. ತಮ್ಮ ಗುರಿ ಸಾಧನೆಗಾಗಿ ಅವರು ಯಾವುದೇ ಮಾರ್ಗವನ್ನಾದರೂ ಅನುಸರಿಸಬಹುದು. ವಿಸ್ತರಣೆಯ ಗುರಿಯನ್ನೂ ಅವರು ಹೊಂದಿರುವುದು ಭಾರತದಂತಹ ದೇಶಕ್ಕೆ ಮಾರಕವಾಗಿ ಪರಿಣಮಿಸಬಹುದು.

ಉಗ್ರಗಾಮಿ ಸಂಘಟನೆಗಳು ಎಂದು ಜಾಗತಿಕವಾಗಿ ಘೋಷಿತವಾಗಿರುವ ತೆಹ್ರಿಕ್ ಎ ತಾಲಿಬಾನ್, ಜೈಷ್ ಎ ಮೊಹಮ್ಮದ್‌ನ ಮೂಲ ಪಾಕಿಸ್ತಾನ. ಈ ಎರಡೂ ಸಂಘಟನೆಗಳು ಭಾರತ ವಿರೋಧಿ ಕಾರ್ಯಸೂಚಿಯನ್ನು ಹೊಂದಿವೆ. ಈ ಸಂಘಟನೆಗಳ ಜತೆಗೆ ತಾಲಿಬಾನ್‌ಗೆ ನಂಟು ಇದೆ. ಜೈಷ್ ಎ ಮೊಹಮ್ಮದ್ ಮತ್ತು ಲಷ್ಕರ್ ಎ ತಯಬಾ ಸಂಘಟನೆಯ ಉಗ್ರರು ತಾಲಿಬಾನ್‌ನ ವಿಜಯೋತ್ಸವವನ್ನು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಆಚರಿಸಿದ್ದಾರೆ.

ಅಫ್ಗಾನಿಸ್ತಾನಕ್ಕೆ ಸಂಬಂಧಿಸಿದಂತೆ ತಟಸ್ಥ ನಿಲುವು ತಳೆಯುವುದಾಗಿ ಪಾಕಿಸ್ತಾನ ಹೇಳಿತ್ತು. ಆದರೆ, 'ಅಫ್ಗಾನಿಸ್ತಾನವು ಸಂಕೋಲೆಗಳಿಂದ ಕಳಚಿಕೊಂಡಿತು' ಎಂದು ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದರು. ತಾಲಿಬಾನ್‌ಗೆ ಮಾನ್ಯತೆ ದೊರಕಿಸಿಕೊಡುವ ವಿಚಾರದಲ್ಲಿಯೂ ಆ ದೇಶವು ಮುಂಚೂಣಿಯಲ್ಲಿದೆ. ತಾಲಿಬಾನ್ ನಾಯಕ ಮುಲ್ಲಾ ಬರದರ್ ಮತ್ತು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನ ಮುಖ್ಯಸ್ಥ ಫೈಝ್ ಹಮೀದ್ ಅವರು ಜತೆಯಾಗಿ ನಮಾಜ್ ಮಾಡುತ್ತಿದ್ದ ಫೋಟೊ ಇತ್ತೀಚೆಗೆ ಪ್ರಕಟವಾಗಿದೆ. ಅಫ್ಗಾನಿಸ್ತಾನವನ್ನು ಪಾಕಿಸ್ತಾನ ಸರ್ಕಾರ ಮತ್ತು ಅಲ್ಲಿನ ಉಗ್ರಗಾಮಿ ಸಂಘಟನೆಗಳು ಭಾರತದ ವಿರುದ್ಧ ಬಳಸಿಕೊಳ್ಳಬಹುದು ಎಂಬುದಕ್ಕೆ ಇವೆಲ್ಲ ಪುಷ್ಟಿ ನೀಡುತ್ತವೆ.

ಉಗ್ರಗಾಮಿ ಸಂಘಟನೆಗಳ ಜತೆಗೆ ತಾಲಿಬಾನ್ ಹೊಂದಿರುವ ಗಾಢ ಸಂಬಂಧವು ಉಗ್ರರಿಗೆ ಶಸ್ತ್ರಾಸ್ತ್ರ ಪೂರೈಕೆಯಾಗಿ ಪರಿವರ್ತನೆ ಆಗಬಹುದು. ಈವರೆಗೆ ಸಾಂಪ್ರದಾಯಿಕ ಅಸ್ತ್ರಗಳನ್ನಷ್ಟೇ ಹೊಂದಿದ್ದ ಉಗ್ರರ ಕೈಯಲ್ಲಿ ಅತ್ಯಾಧುನಿಕ ಆಯುಧಗಳು ಕಾಣಿಸಿಕೊಳ್ಳಬಹುದು ಎಂದು ಪರಿಣತರು ಅಂದಾಜಿಸಿದ್ದಾರೆ. ಎಕೆ-47 ಬಂದೂಕು ಬದಲು ಎಂ-4 ಮತ್ತು ಎಂ-16 ಬಂದೂಕುಗಳು ಉಗ್ರರಿಗೆ ಸಿಗಬಹುದು.

ಭಾರತದ ಸೇನಾ ಪಡೆಗಳ ಮುಖ್ಯಸ್ಥ ಜ. ಬಿಪಿನ್ ರಾವತ್ ಅವರ ನೇತೃತ್ವದಲ್ಲಿ ಭಾರತದ ರಕ್ಷಣಾ ಪಡೆಗಳ ಮುಖ್ಯಸ್ಥರು ಈ ವಾರ ಸಭೆ ಸೇರಿ ಅಫ್ಗಾನಿಸ್ತಾನ ಬೆಳವಣಿಗೆಗಳ ಬಗ್ಗೆ ಚರ್ಚಿಸಲಿದ್ದಾರೆ. ಭಯೋತ್ಪಾದಕ ಗುಂಪುಗಳು ಪರಿಸ್ಥಿತಿಯನ್ನು ತಮ್ಮ ಲಾಭಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂಬುದು ಗಂಭೀರವಾಗಿ ಚರ್ಚೆಗೆ ಒಳಗಾಗುವ ಸಾಧ್ಯತೆ ಇದೆ.

ತಾಲಿಬಾನ್ ಉಗ್ರರು ಬಿಡುಗಡೆ ಮಾಡಿರುವ ಚಿತ್ರ. ಎಂಐ24ವಿ ಹೆಲಿಕಾಪ್ಟರ್‌ನ ರೋಟರ್‌ಗಳನ್ನು ಬಿಚ್ಚಿಟ್ಟಿರುವುದು ಈ ಚಿತ್ರದಲ್ಲಿ ಕಾಣುತ್ತದೆ. ಜೋಸೆಫ್ ಡೆಂಪ್ಸಿ ಈ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ

'ಹೆಲಿಕಾಪ್ಟರ್‌ಗಳಿಂದ ತಕ್ಷಣಕ್ಕೆ ಅಪಾಯವಿಲ್ಲ'

ಅಮೆರಿಕ ಮತ್ತು ಭಾರತದ ಕದನ ಹೆಲಿಕಾಪ್ಟರ್‌ಗಳು ತಾಲಿಬಾನಿಗಳ ಕೈವಶವಾಗಿದ್ದರೂ, ಅವರು ಅವನ್ನು ತಕ್ಷಣಕ್ಕೆ ಬಳಸಲು ಸಾಧ್ಯವಿಲ್ಲ ಎಂದು ತಜ್ಞರು ಹೇಳಿದ್ದಾರೆ. ಹೆಲಿಕಾಪ್ಟರ್‌ಗಳ ಹಾರಾಟ ನಡೆಸುವಷ್ಟು ನೈಪುಣ್ಯ ತಾಲಿಬಾನಿಗಳಲ್ಲಿ ಇಲ್ಲ. ಹೀಗಾಗಿ ಅವರು ಅವನ್ನು ತಕ್ಷಣವೇ ಬಳಸುವುದಿಲ್ಲ. ಅವುಗಳ ಜತೆ ಚಿತ್ರ ತೆಗೆಸಿಕೊಂಡು ಸಂಭ್ರಮಿಸಬಹುದು ಅಷ್ಟೆ ಎಂದು ಕೆಲವು ತಜ್ಞರು ಹೇಳಿದ್ದಾರೆ.

ಆದರೆ, ಈ ಹೆಲಿಕಾಪ್ಟರ್‌ಗಳನ್ನು ಬಳಸಲು ಅಮೆರಿಕವು ಅಫ್ಗನ್ ಸೈನಿಕರಿಗೆ ತರಬೇತಿ ನೀಡಿದೆ. ಅವರಲ್ಲಿ ಹಲವರು ಈಗ ನಿವೃತ್ತರಾಗಿದ್ದಾರೆ. ಹಲವರು ಈಗ ತಾಲಿಬಾನಿಗಳಿಗೆ ಶರಣಾಗಿದ್ದಾರೆ. ಹೆಲಿಕಾಪ್ಟರ್‌ಗಳನ್ನು ಹಾರಾಟ ನಡೆಸುವಂತೆ ತಾಲಿಬಾನಿಗಳು, ಅಫ್ಗನ್ ಸೈನಿಕರಿಗೆ ಒತ್ತಡ ಅಥವಾ ಬೆದರಿಕೆ ಒಡ್ಡುವ ಅಪಾಯವಿದೆ ಎಂದು ಕೆಲವು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಉಗ್ರರ ನಿಕಟ ಒಡನಾಟ

ಅಫ್ಗಾನಿಸ್ತಾನದಲ್ಲಿ ಅಮೆರಿಕ ಇಷ್ಟು ವರ್ಷ ದಾಸ್ತಾನು ಮಾಡಿದ್ದ ಅತ್ಯಾಧುನಿಕ ಶಸ್ತ್ರಾಗಾರ ತಾಲಿಬಾನ್ ಕೈಗೆ ಸಿಕ್ಕಿದೆ. ತಾಲಿಬಾನ್‌ನ ಭಾಗವೇ ಆಗಿರುವ ಹಖ್ಖಾನಿ ಉಗ್ರ ಸಂಘಟನೆ, ಅಲ್ ಕೈದಾ ಹಾಗೂ ಸ್ಥಳೀಯ ಭಯೋತ್ಪಾದಕ ಸಂಘಟನೆಗಳು ಮತ್ತು ವಿರೋಧಿ ಪಾಳಯವಾದ ಖೊರಾಸನ್ ಸಂಘಟನೆಯ ನಡುವೆ ಶಸ್ತ್ರಾಸ್ತ್ರಕ್ಕೆ ಪೈಪೋಟಿ ಏರ್ಪಟ್ಟರೆ ಪರಿಸ್ಥಿತಿ ಗಂಭೀರವಾಗಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ತಾಲಿಬಾನ್ ಮತ್ತು ಹಖ್ಖಾನಿ ಸಂಬಂಧ: ಹಖ್ಖಾನಿ ಗುಂಪನ್ನು ಅತ್ಯಂತ ಮಾರಕ ಮತ್ತು ಅತ್ಯಾಧುನಿಕ ಭಯೋತ್ಪಾದಕ ಗುಂಪು ಎಂದು ಅಮೆರಿಕ ಪರಿಗಣಿಸಿದೆ. ಅಮೆರಿಕ ಸೇನೆ ಮೇಲೆ ಎಸಗಿದ ದಾಳಿ, ಅಫ್ಗನ್ ದಂಗೆ, ಅಲ್ ಕೈದಾ ಜತೆಗಿನ ಒಡನಾಟದಿಂದ ಈ ಗುಂಪನ್ನು ಉಗ್ರ ಸಂಘಟನೆ ಎಂದು ಪರಿಗಣಿಸಲಾಗಿದೆ.

ಹಖ್ಖಾನಿ ಸಂಘಟನೆಯನ್ನು ಭಯೋತ್ಪಾದಕ ಸಂಘಟನೆ ಎಂಬುದಾಗಿ ಅಮೆರಿಕ 2012ರಲ್ಲೇ ಘೋಷಿಸಿತ್ತು. ಗುಂಪಿನ ನಾಯಕ ಖಲೀಲ್ ಹಖ್ಖಾನಿ ತಲೆಗೆ 10 ವರ್ಷಗಳ ಹಿಂದೆಯೇ 50 ಲಕ್ಷ ಡಾಲರ್ (ಸುಮಾರು ₹32.5 ಕೋಟಿ) ಬಹುಮಾನವನ್ನೂ ಘೋಷಿಸಿತ್ತು. ಈತ ಪಾಕಿಸ್ತಾನದ ಸೇನಾ ಕೇಂದ್ರ ಕಚೇರಿ ಇರುವ ರಾವಲ್ಪಿಂಡಿಗೆ ನಿತ್ಯ ಹೋಗಿ ಬರುವ ಉಗ್ರ. ಈಗ ಅವನು ಅಫ್ಗಾನಿಸ್ತಾನದ ಹೊಸ ಸರ್ಕಾರದ ಭಾಗವೇ ಆಗಿದ್ದಾನೆ ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

ಅಲ್ ಕೈದಾಕ್ಕೆ ತಾಲಿಬಾನ್‌ನ ರಾಯಭಾರಿ ಎಂದು ಕರೆಯಲಾಗುವ ಖಲೀಲ್, ಕಳೆದ ವಾರ ಕಾಬೂಲ್‌ನಲ್ಲಿ ಹೊಸ ಭದ್ರತಾ ಮುಖ್ಯಸ್ಥನಾಗಿ ಕಾಣಿಸಿಕೊಂಡಿದ್ದಾನೆ. ಹಖ್ಖಾನಿ ಸಂಘಟನೆಯ ಸದಸ್ಯರು ತಾಲಿಬಾನ್ ಒಳಗೆ ಪ್ರಮುಖ ಸ್ಥಾನ ಹೊಂದಿದ್ದಾರೆ. ಮಿಗಿಲಾಗಿ, ಅಫ್ಗಾನಿಸ್ತಾನದಲ್ಲಿ ತಾಲಿಬಾನ್, ಹಖ್ಖಾನಿ ಜಾಲ ಮತ್ತು ಅಲ್ ಖೈದಾ ಆಳವಾಗಿ ಬೆಸೆದುಕೊಂಡಿವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ತಾಲಿಬಾನ್, ತನ್ನ ಕಮಾಂಡ್ ಸಂರಚನೆಯಲ್ಲಿ ಹಖ್ಖಾನಿ ನಾಯಕರು ಮತ್ತು ಅಲ್ ಕೈದಾ ಸದಸ್ಯರನ್ನೂ ಸೇರಿಸಿಕೊಂಡಿದೆ.

ಐಎಸ್-ತಾಲಿಬಾನ್ ಸಂಘರ್ಷ: ಕಾಬೂಲ್ ವಿಮಾನ ನಿಲ್ದಾಣದಲ್ಲಿ ಇತ್ತೀಚೆಗೆ ನಡೆದ ಸ್ಫೋಟದ ಹೊಣೆ ಹೊತ್ತುಕೊಂಡಿರುವ ಐಎಸ್‌ನ ಅಫ್ಗನ್ ಘಟಕ ಖೊರಾಸನ್ ಅಥವಾ ಐಎಸ್-ಕೆ ಸಂಘಟನೆಯು ತಾಲಿಬಾನ್‌ನ ವಿರೋಧಿ. ಇದು ಅಲ್ ಕೈದಾ ಜೊತೆಗೂ ದೀರ್ಘಕಾಲದಿಂದ ಸಂಘರ್ಷ ನಡೆಸುತ್ತಿದೆ. ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತವು ಕಾನೂನುಬಾಹಿರ ಎಂದು ಖೊರಾಸನ್ ಪ್ರತಿಪಾದಿಸುತ್ತದೆ.

ತಾಲಿಬಾನ್ ಹಾಗೂ ಖೊರಾಸನ್ – ಎರಡೂ ಸುನ್ನಿ ಪಂಗಡಕ್ಕೆ ಸೇರಿದ ಉಗ್ರಗಾಮಿ ಸಂಘಟನೆಗಳು. ಆದರೆ ಇವುಗಳ ನಡುವೆ ಗಂಭೀರವಾದ ಭಿನ್ನಾಭಿಪ್ರಾಯಗಳಿವೆ. ನಿಜವಾದ ಜಿಹಾದ್‌ನ ಧ್ವಜಧಾರಿಗಳು ತಾವು ಎಂದು ಎರಡೂ ಕಡೆಯವರು ಹೇಳಿಕೊಳ್ಳುತ್ತಾರೆ. ಎರಡೂ ಸಂಘಟನೆಗಳ ನಡುವೆ ಭಾರಿ ಸಂಘರ್ಷ ಇದೆ.

ಅಮೆರಿಕ ಮತ್ತು ತಾಲಿಬಾನ್ ನಡುವೆ ಏರ್ಪಟ್ಟ ಒಪ್ಪಂದವನ್ನು ಖೊರಾಸನ್ ಕಟುವಾಗಿ ಟೀಕಿಸಿತ್ತು. ಅಫ್ಗಾನಿಸ್ತಾನವನ್ನು ವಶಪಡಿಸಿಕೊಂಡ ತಾಲಿಬಾನ್‌ಗೆ ವಿಶ್ವದಾದ್ಯಂತ ಇರುವ ಉಗ್ರ ಸಂಘಟನೆಗಳು ಶುಭ ಕೋರಿದ್ದರೂ, ಖೊರಾಸನ್ ಹಾಗೆ ಮಾಡಲಿಲ್ಲ. ಆತ್ಮಾಹುತಿ ದಾಳಿ ಮೂಲಕ ತಾಲಿಬಾನ್‌ಗೆ ಖೊರಾಸನ್ ತನ್ನ ಸಾಮರ್ಥ್ಯ ತೋರಿಸಿತು. ಸುಧಾರಣಾವಾದಿ ಸರ್ಕಾರ ರಚಿಸುವ ಭರವಸೆ ನೀಡಿರುವ ತಾಲಿಬಾನ್‌ಗೆ ಖೊರಾಸನ್ ಮಗ್ಗುಲ ಮುಳ್ಳಾಗಿದ್ದು, ಬಹುದೊಡ್ಡ ಭಯೋತ್ಪಾದಕ ದಾಳಿ ನಡೆಸುವ ಸಾಧ್ಯತೆ ಇದೆ ಎಂದು ಗುಪ್ತಚರ ಮೂಲಗಳು ಎಚ್ಚರಿಸಿವೆ.

ಕಾಂಗ್ರೆಸ್ ಭಿನ್ನಮತ ಕೇರಳದಲ್ಲೂ ಭುಗಿಲು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ನೇಮಕಾತಿ ಬಳಿಕ ಕೇರಳ ಕಾಂಗ್ರೆಸ್‌ನಲ್ಲಿ ಅಸಮಾಧಾನ ಭುಗಿಲೆದ್ದಿದೆ. ಪಕ್ಷದ ಮುಖಂಡರಾದ ಉಮ್ಮನ್ ಚಾಂಡಿ ಮತ್ತು ರಮೇಶ್ ಚೆನ್ನಿತ್ತಲ ಬಹಿರಂಗವಾಗಿಯೇ ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ. ಪಕ್ಷದ ನಾಯಕರ ಜೊತೆ ಸರಿಯಾದ ಚರ್ಚೆ ನಡೆಸದೇ ನೇಮಕಾತಿ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅವರಿಬ್ಬರು ಆರೋಪಿಸಿದ್ದಾರೆ.

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ. ಸುಧಾಕರನ್ ಮತ್ತು ವಿಪಕ್ಷ ನಾಯಕ ವಿ.ಡಿ. ಸತೀಶನ್ ಈ ಆರೋಪಗಳನ್ನು ತಳ್ಳಿ ಹಾಕಿದ್ದಾರೆ. ಜೊತೆಗೆ, ಕಳೆದ ಹಲವು ವರ್ಷಗಳಂತೆ ಈ ಬಾರಿ ಬಣ ನಿಷ್ಠೆ ಆಧರಿಸಿ ಆಯ್ಕೆ ಮಾಡಿಲ್ಲ ಎಂದು ಹೇಳಿದ್ದಾರೆ.

14 ಜಿಲ್ಲೆಗಳ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನು ರಾಷ್ಟ್ರ ಮಟ್ಟದ ನಾಯಕತ್ವ ಶನಿವಾರ ಘೋಷಣೆ ಮಾಡಿತ್ತು.

ಈ ಕುರಿತು ಎದ್ದಿರುವ ಪ್ರಶ್ನೆಗಳಿಗೆ ಸುಧಾಕರನ್ ಮತ್ತು ಸತೀಶನ್ ಸುದ್ದಿಗೋಷ್ಠಿಯಲ್ಲಿ ಉತ್ತರಿಸಿದ್ದಾರೆ. 'ಅಗತ್ಯವಿರುವಷ್ಟು ಮಾತುಕತೆ ನಡೆದಿವೆ. ಚಾಂಡಿ ಅವರು ನೀಡಿದ್ದ ಪಟ್ಟಿಯನ್ನೂ ಗಣನೆಗೆ ತೆಗೆದುಕೊಳ್ಳಲಾಗಿದೆ' ಎಂದು ಸುಧಾಕರನ್ ಹೇಳಿದರು. ಎರಡು ಬಣಗಳ ಮಧ್ಯೆಯೇ ಅಧ್ಯಕ್ಷ ಸ್ಥಾನಗಳು ಹಂಚಿಕೆ ಆಗಬೇಕು ಎಂದಿದ್ದರೆ ಕೆಪಿಸಿಸಿ ಅಧ್ಯಕ್ಷ ಮತ್ತು ವಿಪಕ್ಷ ನಾಯಕರ ಅಗತ್ಯವೇನಿರುತ್ತದೆ ಎಂದು ಸತೀಶನ್ ಪ್ರಶ್ನಿಸಿದ್ದಾರೆ.

ಜಿಲ್ಲಾ ಅಧ್ಯಕ್ಷರ ಸ್ಥಾನಕ್ಕೆ ಮಹಿಳೆಯರನ್ನು ಪರಿಗಣಿಸಿಲ್ಲ ಎಂದು ಮಹಿಳಾ ನಾಯಕರೂ ಅತೃಪ್ತಿ ಹೊಂದಿದ್ದಾರೆ.

ಹಲವಾರು ವರ್ಷಗಳಿಂದ ಪಕ್ಷದ ಪದಾಧಿಕಾರಿಗಳು ಮತ್ತು ಅಭ್ಯರ್ಥಿಗಳನ್ನು ಬಣಗಳ ನಿಷ್ಠೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತಿದೆ. ಇದು ಪಕ್ಷವನ್ನು ಬಲಹೀನಗೊಳಿಸುತ್ತಿದೆ. ಕಳೆದ ಚುನಾವಣೆಯಲ್ಲಿ ಪಕ್ಷ ಕಳಪೆ ಪ್ರದರ್ಶನ ನೀಡಲೂ ಇದೇ ಕಾರಣ ಎಂದು ಎನ್ನಲಾಗಿದೆ. ಹಾಗಾಗಿ ಪಕ್ಷದಲ್ಲಿ ಸಾಕಷ್ಟು ಬದಲಾಣೆಗಳನ್ನು ಮಾಡಲಾಗುತ್ತಿದೆ ಎನ್ನಲಾಗಿದೆ.

ಬಣ ರಾಜಕಾರಣ ಕೊನೆಗೊಳಿಸಬೇಕು ಎಂಬ ಕಾರಣಕ್ಕಾಗಿಯೇ ಸುಧಾಕರನ್ ಮತ್ತು ಸತೀಶನ್ ಅವರನ್ನು ಕ್ರಮವಾಗಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ವಿಪಕ್ಷ ನಾಯಕ ಸ್ಥಾನಗಳಿಗೆ ನೇಮಕ ಮಾಡಲಾಗಿದೆ. ರಾಜ್ಯದಲ್ಲಿ ಬಣ ರಾಜಕಾರಣವನ್ನು ಕೊನೆಗೊಳಿಸುವ ಹೊಣೆಯನ್ನು ಅವರಿಗೆ ವಹಿಸಲಾಗಿದೆ ಎನ್ನಲಾಗಿದೆ.

'ಸಾಮ್ನಾ' 'ಪ್ರಹಾರ'ಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸೇನಾ ವಾಗ್ದಾಳಿಗೆ ಸಚಿವ ನಾರಾಯಣ ರಾಣೆ ತಿರುಗೇಟು
- ಸಾಮ್ನಾ ಲೇಖನಗಳಿಗೆ ಪ್ರತಿಕ್ರಿಯೆಯಾಗಿ ಪ್ರಹಾರ್‌ನಲ್ಲಿ ಲೇಖನದ ಬೆದರಿಕೆ
- ರಾಣೆ ಕುಟುಂಬದ ಒಡೆತನದ ಪತ್ರಿಕೆ ಪ್ರಹಾರ್

ಮುಂಬೈ: 'ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಕೆನ್ನೆಗೆ ಬಾರಿಸುತ್ತಿದ್ದೆ' ಎಂದಿದ್ದ ಕೇಂದ್ರ ಸಚಿವ ನಾರಾಯಣ ರಾಣೆ ವಿರುದ್ಧ ಶಿವಸೇನಾವು ತನ್ನ ಮುಖವಾಣಿ 'ಸಾಮ್ನಾ'ದಲ್ಲಿ ವಾಗ್ದಾಳಿ ಮುಂದುವರಿಸಿದೆ. ಸಾಮ್ನಾ ವಾಗ್ದಾಳಿಯ ವಿರುದ್ಧ ತಮ್ಮ ಕುಟುಂಬದ ಒಡೆತನದ ಪತ್ರಿಕೆ 'ಪ್ರಹಾರ್'ನಲ್ಲಿ ತಿರುಗೇಟು ನೀಡುವುದಾಗಿ ರಾಣೆ ಅವರು ಎಚ್ಚರಿಕೆ ನೀಡಿದ್ದಾರೆ.

ಸಾಮ್ನಾದ ಸಾಪ್ತಾಹಿಕ ಅಂಕಣ 'ರೋಖ್‌ಠೋಕ್'ನಲ್ಲಿ ಕಾರ್ಯನಿರ್ವಾಹಕ ಸಂಪಾದಕ ಸಂಜಯ್ ರಾವುತ್ ಅವರು, ರಾಣೆ ಅವರ ಇಬ್ಬರು ಮಕ್ಕಳಾದ ನಿಲೇಶ್ ರಾಣೆ ಮತ್ತು ನಿತೇಶ್ ರಾಣೆ ವಿರುದ್ಧ ವಾಗ್ದಾಳಿ ನಡೆಸಿದ್ದರು. ಠಾಕ್ರೆ ವಿರುದ್ಧದ ವಾಗ್ದಾಳಿಯನ್ನು ಖಂಡಿಸಿದ್ದರು. ಬಿಜೆಪಿಯು ರಾಣೆಯನ್ನು ರಕ್ಷಿಸುತ್ತಿರುವುದು ಏಕೆ ಎಂದು ಪ್ರಶ್ನಿಸಿದ್ದರು.

'ಮಹಾರಾಷ್ಟ್ರ ಬಿಜೆಪಿ ನಾಯಕರಾದ ದೇವೇಂದ್ರ ಫಡಣವೀಸ್ ಮತ್ತು ಚಂದ್ರಕಾಂತ್ ಪಾಟೀಲ್ ಹಾಗೂ ಜೆ.ಪಿ. ನಡ್ಡಾರಂತಹ ಬಿಜೆಪಿ ನಾಯಕರು ರಾಣೆಗೆ ಕರೆ ಮಾಡಿ ತಮ್ಮ ಬೆಂಬಲ ಸೂಚಿಸಿದ್ದಾರೆ. ರಾಣೆಯ ಮಕ್ಕಳು ಅವರ ಹೆಸರಿಗೆ ಕಪ್ಪು ಮಸಿ ಬಳಿಯುತ್ತಿದ್ದಾರೆ. ರಾಣೆ ಅವರ ಹೇಳಿಕೆಯು ಮಹಾರಾಷ್ಟ್ರದ ಘನತೆ ಮೇಲಿನ ದಾಳಿ ಎಂಬುದು ನಿಜವಾದರೆ, ದೆಹಲಿ ನಾಯಕರು ರಾಣೆ ಅವರ ಬೆಂಬಲಕ್ಕೆ ನಿಲ್ಲುವುದು ಏಕೆ' ಎಂದ ರಾವುತ್ ಕೇಳಿದ್ದಾರೆ.

ನಾರಾಯಣ ರಾಣೆ

ಸಂಜಯ್ ರಾವುತ್

ಸಾಮ್ನಾದಲ್ಲಿನ ಈ ವಾಗ್ದಾಳಿಗೆ ರಾಣೆ ಅವರು ಸಿಂಧುದುರ್ಗ ಜಿಲ್ಲೆಯಲ್ಲಿನ ಜನ ಆಶೀರ್ವಾದ ಯಾತ್ರೆಯಲ್ಲಿ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. 'ಇದು ಮುಂದುವರಿದರೆ, ನಾನು ನನ್ನ ಪತ್ರಿಕೆಯಲ್ಲಿ ಸರಣಿ ಲೇಖನಗಳನ್ನು ಬರೆಯುತ್ತೇನೆ' ಎಂದು ಬೆದರಿಕೆ ಹಾಕಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಭಾರತದಲ್ಲಿ ಹಿಂಸಾಚಾರ ನಡೆಸುವುದಾಗಿ ಶಸ್ತ್ರಸಜ್ಜಿತ ವ್ಯಕ್ತಿಯೊಬ್ಬರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೆದರಿಕೆ ಹಾಕುತ್ತಿರುವ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ. ಪಾಕಿಸ್ತಾನಿ ತಾಲಿಬಾನ್ ಉಗ್ರರು ಇತ್ತೀಚೆಗೆ ಭಾರತಕ್ಕೆ ಒಡ್ಡಿದ್ದ ಬೆದರಿಕೆ ಇದು ಎಂಬುದಾಗಿ ಚರ್ಚೆಯಾಗುತ್ತಿದೆ. ಪಾಕ್ ಸಂಜಾತ ಕೆನಡಾದ ಲೇಖಕ ತಾರಿಕ್ ಫತೇಹ್ ಅವರು ಈ ವಿಡಿಯೊ ಹಂಚಿಕೊಂಡಿದ್ದು 1.3 ಲಕ್ಷ ಜನರು ನೋಡಿದ್ದಾರೆ. ಬಿಜೆಪಿ ಮುಖಂಡ ರವೀಂದ್ರ ಗುಪ್ತಾ ಸೇರಿದಂತೆ ಹಲವರು ಷೇರ್ ಮಾಡಿದ್ದಾರೆ.

ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ಈ ವಿಡಿಯೊವನ್ನು 2019ರ ಫೆಬ್ರುವರಿಯಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂಬುದು ತಿಳಿದುಬಂದಿದೆ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ಪಡೆದ ಬಳಿಕ ಭಾರತಕ್ಕೆ ತಾಲಿಬಾನ್ ಬೆದರಿಕೆ ಒಡ್ಡಿದೆ ಎಂಬ ವಾದವನ್ನು ಇದು ಸುಳ್ಳಾಗಿಸಿದೆ. ಪಾಕಿಸ್ತಾನದ ಫೇಸ್‌ಬುಕ್ ಪುಟದಲ್ಲಿ ವಿಡಿಯೊ ಅಪ್‌ಲೋಡ್ ಆಗಿದೆ. ಬುಡಕಟ್ಟು ನಾಯಕ ಮಲಿಕ್ ಸೈಯದ್ ಕಬೀರ್ ಅಫ್ರಿದಿ ಎಂಬಾತನ ಭಾಷಣ ಇದರಲ್ಲಿದೆ. ಭಾರತವನ್ನು ವಶಪಡಿಸಿಕೊಳ್ಳುವುದಾಗಿ ಎರಡು ವರ್ಷಗಳ ಹಿಂದೆ ನೀಡಿದ್ದ ಹೇಳಿಕೆಯು ಇತ್ತೀಚಿನದ್ದು ಎಂಬುದಾಗಿ ತಪ್ಪಾಗಿ ಬಿಂಬಿಸಲಾಗಿದೆ.

ಗುಂಡಣ್ಣ

ದಿನ ಭವಿಷ್ಯ

ಸೋಮವಾರ ಆಗಸ್ಟ್ 30, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮಖಾ ಅಷ್ಟಮೀ ಗಂ. 43-36 (ರಾ. 11-41) ಸೋಮವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 60-00 (ದಿನಪೂರ್ತಿ) ವ್ಯಾಘಾ ನಾಮ ಯೋಗ ಗಂ. 5-19 ಬಾಲವ ಕರಣ ಗಂ. 11-4 ವಿಷ ಗಂ. 44-1 ಅಮೃತ ಗಂ. 57-19 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-12 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 3 7

ಮೇಷ: ಬಹುದಿನಗಳಿಂದ ಬಾಕಿ ಇರುವ ಕೆಲಸ ಕಾರ್ಯಗಳು ಇಂದು ವಿಳಂಬವಿಲ್ಲದೇ ನೆರವೇರುವ ಸಾಧ್ಯತೆ. ಭರವಸೆಗಳ ಈಡೇರಿಕೆಗಾಗಿ ಅತ್ಯಂತ ಶ್ರಮ ವಹಿಸಬೇಕಾದೀತು.

ವೃಷಭ: ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಜಾಣ್ಮೆಯನ್ನು ಬಳಸಬೇಕಾದ ಸಂದರ್ಭ ಬರಬಹುದು. ನಿಮ್ಮ ದಿಟ್ಟ ಮಾತುಗಳಿಂದಾಗಿ ಅನಾವಶ್ಯಕ ಹೊರೆ ಹೊರಬೇಕಾದೀತು.

ಮಿಥುನ: ನಂಬಿ ಬಂದವರಿಗೆ ಉತ್ತಮ ಆಸರೆ ನೀಡಿ ಹರ್ಷದಾಯಕ ಸಂದೇಶ ನೀಡುವ ಸಾಧ್ಯತೆ. ಚಮತ್ಕಾರಿಕವಾಗಿ ಸತ್ಕಾರ್ಯಗಳಲ್ಲಿ ತೊಡಗಿ ನಿರ್ವಹಿಸುವ ಅವಕಾಶ ನಿಮ್ಮದಾಗಲಿದೆ.

ಕರ್ಕಾಟಕ: ಭರವಸೆಗಳ ಮಹಾಪೂರವೇ ಹರಿದುಬಂದು ಸಂತೋಷ ಮೂಡುವುದು. ಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಸವಾಲುಗಳು ಎದುರಾಗಲಿದ್ದು ಎದೆಗುಂದದೇ ಮುನ್ನುಗ್ಗಿ.

ಸಿಂಹ: ಬೇರೆಯವರ ಸಲಹೆಯಿಂದಾಗಿ ಅಪಾಯದಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ. ಹಿರಿಯರ ಮಾತುಗಳನ್ನು ಗೌರವಿಸುವುದರಿಂದ ಆಪತ್ತಿನಿಂದ ಪಾರಾಗುವಿರಿ. ಛಲಕ್ಕೊಂದು ಬಲದೊರೆತು ಯಶಸ್ಸು ನಿಮ್ಮದಾಗಲಿದೆ.

ಕನ್ಯಾ: ಹೊಂದಿಕೊಳ್ಳುವ ಮನೋಭಾವದಿಂದಾಗಿ ಮಹತ್ವದ ವಿಷಯಗಳಲ್ಲಿ ಒಡಂಬಡಿಕೆಗೆ ಬರುವ ಸಾಧ್ಯತೆ. ವಿಪರೀತ ಸನ್ನಿವೇಶಗಳು ಎದುರಾಗಬಹುದು.

ತುಲಾ: ಅಭಿರುಚಿಗೆ ತಕ್ಕಂತೆ ಸ್ವಾವಲಂಬಿ ಕಾರ್ಯಗಳಲ್ಲಿ ತೊಡಗುವಿರಿ. ಆದರ್ಶ ಹೊಂದಿದ ಕೆಲಸಕಾರ್ಯಗಳಿಗೆ ಸಹಾಯ ದೊರಕಿ ಕಾರ್ಯಸಾಧನೆ ಮಾಡಲಿದ್ದೀರಿ.

ವೃಶ್ಚಿಕ: ಬಂಧುಗಳ ಸಲಹೆ ಮತ್ತು ಆಶ್ವಾಸನೆಗಳಲ್ಲಿ ವಿಶ್ವಾಸವಿಡಿ. ಹೊಸ ಕೆಲಸಕಾರ್ಯಗಳಲ್ಲಿ ತೊಡಗಲು ಪ್ರಶಸ್ತವಾಗಿದೆ. ಷರತ್ತು ಬದ್ಧ ಅವಕಾಶಗಳು ದೊರಕುವ ಸಾಧ್ಯತೆ.

ಧನು: ಸದಾಚಾರ ಕಾರ್ಯಗಳಲ್ಲಿ ಸ್ವಸ್ಥ ಮನಸ್ಸಿನಿಂದ ತೊಡಗುವಿರಿ. ಇಷ್ಟ ಮಿತ್ರರ ಮಧ್ಯಸ್ಥಿಕೆಯಲ್ಲಿ ಗಂಭೀರ ಸಮಾಲೋಚನೆ ನಡೆಯುವ ಸಾಧ್ಯತೆಯಿದ್ದು ಶುಭದಾಯಕವಾಗಿ ಪರಿಣಮಿಸಲಿದೆ.

ಮಕರ: ಕಷ್ಟಗಳೆಲ್ಲವೂ ಕರಗಿ, ಕಾರ್ಯ ಯೋಜನೆಗಳು ಸುಲಭವಾಗಿ ಸಾಕಾರಗೊಳ್ಳುವವು. ಬಂಧುವರ್ಗದವರಿಂದ ಸಕಾಲಿಕ ನೆರವು ದೊರೆಯುವ ಸಾಧ್ಯತೆ.

ಕುಂಭ: ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿರುವವರ ಬಣ್ಣ ಇಂದು ಬಯಲಾಗಲಿದೆ. ಮೇಧಾವಿತನದಿಂದಾಗಿ ಹಿತಕರ ವಾತಾವರಣ ನಿಮ್ಮದಾಗುವುದು. ಗೊಂದಲದ ನಿವಾರಣೆಗಾಗಿ ವೆಚ್ಚ ಸಾಧ್ಯತೆ.

ಮೀನ: ನಿಮ್ಮ ಬಹುದಿನಗಳ ಬಯಕೆ ಇಡೇರುವ ಸಾಧ್ಯತೆ. ವೃತ್ತಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆ. ಉತ್ತಮ ಕೆಲಸ ಕಾರ್ಯಗಳಿಂದಾಗಿ ಮನ್ನಣೆ ಗಳಿಸುವಿರಿ.

ನಿಮ್ಮ ಜನ್ಮದಿನ 30-ಆಗಸ್ಟ್: ಇಂದು ಅತ್ಯಂತ ಶುಭದಾಯಕವಾಗಿದ್ದು, ಪ್ರಾರಂಭಿಸಬೇಕೆಂದಿರುವ ಉದ್ಯಮವನ್ನು ಪ್ರಾರಂಭಿಸಲು ಸಕಾಲವಾಗಿದ್ದು ಉನ್ನತಿಗೆ ದಾರಿಯಾಗಲಿದೆ. ವ್ಯವಹಾರದಲ್ಲಿ ಪ್ರಸ್ತುತ ವರ್ಷದಲ್ಲಿ ವಿಶೇಷ ಸಾಧನೆಯೊಂದನ್ನು ಮಾಡಲಿದ್ದೀರಿ. ದಾಂಪತ್ಯದಲ್ಲಿ ಸದಾ ಸಂತೋಷವನ್ನನುಭವಿಸುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಶಕ್ರನ ವರಗಳು

ದೇವೇಂದ್ರ ಶಕ್ರ ವರದಾನ ಮಾಡಿದ ಮೇಲೆ ಬೋಧಿಸತ್ವ, 'ದೇವೇಂದ್ರ, ನಿನ್ನ ಕರುಣೆ ದೊಡ್ಡದು. ನನಗೆ ಅದೇ ವರ, ಬೇರೆ ವರಗಳು ಬೇಡ' ಎಂದ. ಆಗ ಶಕ್ರ ಒತ್ತಾಯಿಸಿ ವರಗಳನ್ನು ನೀಡಿಯಾಗಿದೆ. ಅವುಗಳನ್ನು ಕೇಳಲೇಬೇಕು ಎಂದು ಆಜ್ಞೆ ಮಾಡಿದಾಗ, ಬೋಧಿಸತ್ವ ಎಂಟು ವರಗಳನ್ನು ಕೇಳಿದ.

'ಹೇ, ಸಮಸ್ತಪ್ರಾಣಿಗಳ ದೈವವಾದ ಶಕ್ರ, ನನಗೆ ವರಗಳನ್ನು ಕೊಡಬೇಕೆಂದಿದ್ದರೆ, ನಾನು ಇಲ್ಲಿಂದ ನನ್ನ ರಾಜ್ಯದ ಅರಮನೆಗೆ ಹೋದರೆ ನನ್ನ ತಂದೆ ನನ್ನನ್ನು ಅನುಮೋದನೆ ಮಾಡಲಿ ಹಾಗೂ ಪ್ರೀತಿಯಿಂದ ಆಸನ ಗ್ರಹಿಸಲು ಹೇಳಲಿ. ಇದು ಮೊದಲ ವರ. ರಾಜಾಪರಾಧವನ್ನು ಮಾಡಿದವನೆಂದು ಯಾವುದೋ ನಿರಪರಾಧಿಯನ್ನು ವಧೆಗೆ ಕಳಿಸುವಂತಾಗಿದ್ದರೆ ಅವನನ್ನು ನಾನು ಮುಕ್ತಗೊಳಿಸುವಂತಾಗಲಿ. ಇದು ಎರಡನೆಯ ವರ. ಮುದುಕರು, ಚಿಕ್ಕಮಕ್ಕಳು, ಮಧ್ಯವಯಸ್ಸಿನವರು ಎಲ್ಲರೂ ನನ್ನ ಧರ್ಮಶ್ರದ್ಧೆಯ ಆಧಾರದ ಮೇಲೆ ಬದುಕಲಿ. ಇದು ಮೂರನೆಯ ವರ. ನಾನೆಂದಿಗೂ ಪರಸ್ತ್ರೀಯರಲ್ಲಿ ಮನ ಮಾಡದಿರಲಿ, ಬೇರೆ ಹೆಂಗಸರಿಗೆ ನಾನು ವಶವಾಗದಿರಲಿ ಮತ್ತು ನನ್ನ ಹೆಂಡತಿಯಲ್ಲಿ ಮಾತ್ರ ಅನುರಕ್ತನಾಗಿರಲಿ. ಇದು ನಾಲ್ಕನೆಯ ವರ. ನನಗೆ ಪುತ್ರನಾದರೆ ಅವನು ದೀರ್ಘಾಯುವಾಗಲಿ ಮತ್ತು ಅವನು ಧರ್ಮದಿಂದ ಜಗತ್ತನ್ನು ಗೆಲ್ಲಲಿ. ಇದು ಐದನೆಯ ವರ. ರಾತ್ರಿ ಕಳೆದ ಮೇಲೆ, ಸೂರ್ಯೋದಯವಾದ ಮೇಲೆ ದಿವ್ಯ ಭೋಜನವಾಗಲಿ. ಹೀಗೆಂದರೆ, ಎಂದಿಗೂ ಆಹಾರದ ಅಭಾವ ತಲೆದೋರದಿರಲಿ. ಇದು ಆರನೆಯ ವರ. ನಾನು ದಾನ ಮಾಡುವುದರಿಂದ ನನ್ನ ಬಳಿ ಇದ್ದ ಹಣ ಮುಗಿದು ಹೋಗದಿರಲಿ, ನನಗೆ ಕೊಟ್ಟು ಎಂದಿಗೂ ದುಃಖವಾಗದಂತಿರಲಿ, ಪ್ರತಿಬಾರಿಯೂ ದಾನಮಾಡಿದಾಗ ಹೆಚ್ಚು ಆನಂದ ಉಂಟಾಗಲಿ. ಇದು ಏಳನೆಯ ವರ. ನನಗೆ ಈ ದೇಹದಿಂದ ಬಿಡುಗಡೆಯಾದ ಮೇಲೆ ನಾನು ವಿಶೇಷರೂಪದಿಂದ ಸ್ವರ್ಗಗಾಮಿಯಾಗುವಂತಾಗಲಿ. ಮುಂದೆ ಪುನಃ ಪುನಃ ಜನನ, ಮರಣಗಳ ಬಂಧನದಿಂದ ಪಾರಾಗಿ ಮೋಕ್ಷ ದೊರೆಯುವಂತಾಗಲಿ. ಇದು ನನ್ನ ಎಂಟನೆಯ ವರ. ಕೃಪೆಯಿಟ್ಟು ಈ ವರಗಳನ್ನು ನನಗೆ ನೀಡು'.

ಶಕ್ರ ಹೇಳಿದ, 'ಬೋಧಿಸತ್ವ, ನೀನು ಕೇಳಿದ ವರಗಳೆಲ್ಲ ಪವಿತ್ರವಾದವು, ಜನಪರವಾದವುಗಳು. ನೀನು ಬೇಡಿದ್ದೆಲ್ಲ ನಿನಗೆ ದೊರೆಯಲಿ ಎಂದು ವರ ನೀಡುತ್ತೇನೆ. ಇನ್ನೂ ಸ್ವಲ್ಪ ದಿನಗಳಲ್ಲಿ ನಿನ್ನ ತಂದೆ ನಿನ್ನನ್ನು ನೋಡಲು ಬರುತ್ತಾನೆ. ನಿನಗೆ ಮಂಗಳವಾಗಲಿ', ಹೀಗೆ ಹೇಳಿ ಶಕ್ರ ತನ್ನ ಸ್ವಸ್ಥಾನಕ್ಕೆ ಮರಳಿ ಹೋದ. ನಂತರ ಬೋಧಿಸತ್ವ ಮತ್ತು ಮಾದ್ರಿಯರು ಶಕ್ರನೇ ಕೊಟ್ಟ ಆಶ್ರಮದಲ್ಲಿ ಸಂತೋಷದಿಂದ ಇರತೊಡಗಿದರು. ಇತ್ತ ಮಕ್ಕಳನ್ನು ಕರೆದುಕೊಂಡು ಹೊರಟ ಮುದಿ ಬ್ರಾಹ್ಮಣ ಅರವತ್ತು ಯೋಜನ ಮಾರ್ಗದಲ್ಲಿ ನಡೆಯುತ್ತ ಹೊರಟಿದ್ದ. ದೇವತೆಗಳು ಮಕ್ಕಳ ರಕ್ಷಣೆ ಮಾಡುತ್ತಿದ್ದರು. ಸೂರ್ಯಾಸ್ತವಾದ ಮೇಲೆ ಬ್ರಾಹ್ಮಣ ಮಕ್ಕಳನ್ನು ಬಿಗಿಯಾಗಿ ಕಟ್ಟಿ ನೆಲದ ಮೇಲೆ ಮಲಗಿಸುತ್ತಿದ್ದ. ತಾನು ಕಾಡುಪ್ರಾಣಿಗಳ ಭಯದಿಂದ ಮರವನ್ನೇರಿ ಕೊಂಬೆಗಳ ಮೇಲೆ ಬಿದ್ದಿರುತ್ತಿದ್ದ. ಆ ಸಮಯದಲ್ಲಿ ಒಬ್ಬ ದೇವಪುತ್ರ ವೆಸ್ಸಂತರನ ರೂಪ ಧರಿಸಿ ಮತ್ತು ಇನ್ನೊಬ್ಬ ದೇವಕನ್ಯೆ ಮಾದ್ರಿದೇವಿಯ ರೂಪಧರಿಸಿ ಬಂದು ಮಕ್ಕಳ ಕಟ್ಟುಗಳನ್ನು ಬಿಡಿಸಿ, ಕೈಕಾಲುಗಳಿಗೆ ಸುಗಂಧಪೂರಿತವಾದ ಎಣ್ಣೆಯನ್ನು ಹಚ್ಚಿ, ಮಾಲೀಶುಮಾಡಿ, ಮೀಯಿಸಿ, ಅಲಂಕರಿಸಿ, ಊಟ ಮಾಡಿಸಿ ದಿವ್ಯಶಯ್ಯೆಯಲ್ಲಿ ಮಲಗಿಸುತ್ತಿದ್ದರು. ಬೆಳಗಾಗುತ್ತಿರುವಂತೆ ಮತ್ತೆ ಅವರನ್ನು ಬಂಧಿಸಿದಂತೆಯೇ ಇಟ್ಟು ಮಾಯವಾಗುತ್ತಿದ್ದರು.

ಪದಬಂಧ 4704

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಗ್ರವಾಗಿ ಮುಂದುವರೆಯುವನು (4)
3.ಕರಡಿ ಇಲ್ಲಿದೆ (3)
5.ಹೆಣ್ಣು ದುಂಬಿಯಿದು (4)
7.ಜಲದೊಳಗಿರುವ ಕ್ಲಿಷ್ಟತೆ (3)
8.ಪಾಕಕ್ಕೆ ಸಿಕ್ಕಿರುವ ಬಹುಮಾನ (5)
11.ಮೇಲಕ್ಕೆ ಎತ್ತುವುದು (3)
12.ಹತ್ತು ಎಣಿಸುವಾಗ ಉಲ್ಟಾ ಆದ ಸಂಚು! (4)
14.ನಷ್ಟ ಅಥವಾ ಹಾನಿ (3)
15.ಪುರುಷನಿಗೆ ಸಿಕ್ಕಿರುವ ಬಿಡುವು (4)

ಮೇಲಿಂದ ಕೆಳಕ್ಕೆ

1.ಅಂತ್ಯ ಕಾಲ ವಿದು (4)
2.ಈತ ಹಾಡುಗಾರ (3)
4.ಕೆಸರಿನಲ್ಲಿ ಅರಳುವ ಹೂವು (3)
6.ದುರಸ್ತಿಯನ್ನು ಹೀಗೆನ್ನಿ (3)
7.ಜನರ ಹತ್ತಿರವಿರುವ ತಂದೆ (3)
8.ಈತ ತಿಳುವಳಿಕೆಯಿಲ್ಲದವನು (3)
9.ಷರಬತ್ತು ತಂದವನು ಹಾಕಿದ ಕರಾರು! (3)
10.ಇದು ಹಿಂದಿಯವನ ಪರಿಶ್ರಮ! (4)
11.ಉಯ್ಯಾಲೆ ಆಡುವಾಗ ದೊರೆತ ಮೃತ್ಯುಪತ್ರ (3)
13.ಕರುವಿನಲ್ಲಿ ಸೀಯುವಿಕೆಯನ್ನು ನೋಡಿ! (3)



4703ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ದುರ್ದಾನ 5.ಜಲಕೇಳಿ 6.ನಾಮಧೇಯ 7.ಕಸ 9.ಲಿನ 13.ಚಾರಿತ್ರಿಕ 14.ಸರದಾರ 15.ರಭಸ

ಮೇಲಿಂದ ಕೆಳಕ್ಕೆ: 1.ಮದುಮಗ 2.ಜನನಾಯಕ 3.ಸಂಕೇತ 5.ಜಯಶಾಲಿ 8.ಸದಾಚಾರ 10.ನವೀಕರಣ 11.ದುರ್ವ್ಯಸನ 12.ಉರಗಿ

ಸುಡೊಕು 5090

		1		7		6		2
			2		9			
2	8			1			9	5
	5		7		4	8		
				8		5		9
8		6	5					4
6				5		9		7
	7		1	3			5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5089 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ತಬ್ಲೀಗ್ ಜಮಾತ್‌ನ 12 ಸದಸ್ಯರು ಆರೋಪಮುಕ್ತ

ಬರೇಲಿ (ಉತ್ತರಪ್ರದೇಶ): ಸಾಕ್ಷ್ಯಾಧಾರಗಳ ಕೊರತೆ ಕಾರಣ ತಬ್ಲೀಗ್ ಜಮಾತ್‌ನ 12 ಸದಸ್ಯರನ್ನು ಇಲ್ಲಿನ ಸ್ಥಳೀಯ ನ್ಯಾಯಾಲಯ ಶುಕ್ರವಾರ ದೋಷಮುಕ್ತಗೊಳಿಸಿದೆ. ಈ 12 ಮಂದಿಯಲ್ಲಿ 9 ಮಂದಿ ಥಾಯ್ಲೆಂಡ್‌ನ ಪ್ರಜೆಗಳು ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯಾದಿ ಆಹ್ವಾನ



ಶ್ರೀಮಾನ್ ಚಿಕ್ಕಯ್ಯರವರು
(ಲೇ!! ಬೆಲ್ಲದ ಚಿನ್ನೆಗೌಡರ ಮಗ)
ಸಂಸ್ಥಾಪಕರು: ವಿಜಯನಗರ ಅಂಗವಿಕಲರ ಕಲ್ಯಾಣ ಸಂಘ (ರಿ)
ನಿಧನ: 21–08–2021
ಇವರ ವೈಕುಂಠ ಸಮಾರಾಧನೆಯನ್ನು ದಿ: 31.08.2021 ಮಂಗಳವಾರದಂದು ಸ್ವಗೃಹ ದಾಳಿಂಬಗ್ರಾಮ, ಸಾತನೂರು ಹೋ॥ ಕನಕಪುರ ತಾ॥ ರಾಮನಗರ ಜಿಲ್ಲೆ ಇಲ್ಲಿ ಬೆಳಿಗ್ಗೆ 11.00 ಗಂಟೆಗೆ ನೆರವೇರಿಸಲಾಗುವುದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕೆಂದು ಕೋರುವ
ದುಃಖ ತಪ್ತರು:
ಶ್ರೀಮತಿ ಎಲ್.ಯಶೋಧ ಮತ್ತು ಕುಟುಂಬವರ್ಗದವರು

15ನೇ ವರ್ಷದ ಚಿರಸ್ಮರಣೆ

ಜೆ.ಟಿ.ರಾಮಮೂರ್ತಿ
ನಿಧನ: 30-8-2006
ಒಲವಿನ ಬೀಜಬಿತ್ತಿ ಪ್ರೀತಿವಾತ್ಸಲ್ಯದ ಹೆಮ್ಮರ ಬೆಳೆಸಿದ ಪ್ರೇಮ ಮೂರ್ತಿ ನೀವು
ಪತ್ನಿ: ಶಾಂತ, ಮಕ್ಕಳು ಮತ್ತು ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಶ್ರೀನಗರ, ಬೆಂಗಳೂರು.

LOOKING TO BUILD, BUY OR SELL A PROPERTY
Please refer Classifieds on Sunday

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೃಷ್ಣನ ನೆನೆವ ಪರಿ...

ಇಂದು ಕೃಷ್ಣಾಷ್ಟಮಿ

ಭಾರತೀಯ ಸಂಸ್ಕೃತಿಯನ್ನು ಸುಂದರಗೊಳಿಸಿದ, ಶ್ರೀಮಂತಗೊಳಿಸಿದ ತತ್ತ್ವವೇ ಶ್ರೀಕೃಷ್ಣತತ್ತ್ವ. ಈ ತತ್ತ್ವದ ಅನುಸಂಧಾನಕ್ಕೆ ನೂರಾರು ಮಾರ್ಗಗಳು...

● ಮಂಜುನಾಥ ಕೊಳ್ಳೇಗಾಲ

ಮಧುಪಕಿತವಬಂಧೋ ಮಾ ಸ್ಪೃಶಾಂಘ್ರಿಂ ಸಪತ್ನ್ಯಾಃ
ಕುಚವಿಲುಲಿತಮಾಲಾಕುಂಕುಮಶ್ಮಶ್ರುಭಿರ್ನಃ
ವಹತು ಮಧುಪತಿಸ್ತನ್ಮಾನಿನೀನಾಂ ಪ್ರಸಾದಂ
ಯದುಸದಸಿವಿಡಂಬಂ ಯಸ್ಯದೂತಸ್ತ್ವಮೀದೃಕ್

(ಎಲೋ ದುಂಬಿಯೇ, ನೀನು ಎಷ್ಟಾದರೂ ಆ ಕಪಟಿಯಾದ ಕೃಷ್ಣನ ಬಂಧುವೇ ತಾನೆ? ಅವನ ಮಾಲೆಯಲ್ಲಿನ ಜೇನು ಹೀರಲು ಹೋಗಿದ್ದೆಯಷ್ಟೇ? ಆ ಸವತಿಯರ ಮೊಲೆಯಿಂದ ಮಾಲೆಯ ಮೇಲುದುರಿದ ಕುಂಕುಮದ ಕೆಂಪು ನಿನ್ನ ಮೀಸೆಗೂ ಹತ್ತಿದೆ ನೋಡು. ಅದರಿಂದ ನಮ್ಮ ಕಾಲನ್ನೇನು ಮುಟ್ಟಬೇಡ. ಆ ಮಾನಿನಿಯರ ಪ್ರಸಾದವನ್ನೂ, ನಿನ್ನಂಥವನನ್ನು ದೂತನನ್ನಾಗಿ ಕಳಿಸಿದ್ದರಿಂದ ಯಾದವಸಭೆಯಲ್ಲಿ ಬರುವ ಅಪಹಾಸ್ಯವನ್ನೂ ಆ ನಿನ್ನ ಸ್ವಾಮಿಯೇ ಇಟ್ಟುಕೊಳ್ಳಲಿ!)

ಮಹಾಭಾರತ-ಭಾಗವತಗಳು ಕೃಷ್ಣನ ಎರಡು ಸಂಪೂರ್ಣ ವಿಭಿನ್ನ ಚಿತ್ರಗಳನ್ನು ಕಟ್ಟಿಕೊಡುತ್ತವೆ. ಸಂಭಾವಿತರಲ್ಲಿ ಸಂಭಾವಿತ, ಮಹಾಮುತ್ಸದ್ದಿ, ಪಾಂಡವಬಂಧು, ದ್ರೌಪದೀವತ್ಸಲ, ಗೀತಾಚಾರ್ಯನಾದ ಜಗದ್ಗುರು ಶ್ರೀಕೃಷ್ಣನ ವಿಶ್ವರೂಪವನ್ನೇ ಮಹಾಭಾರತ ಕಟ್ಟಿಕೊಟ್ಟರೆ, ಕರುಗಳ ಬಾಲವಳೆಯುತ್ತಾ, ಬೆಣ್ಣೆಕದ್ದು ಮಂಗಗಳಿಗೆ ತಿನ್ನಿಸುತ್ತಾ, ಗೋಪಿಯರನ್ನು ಕಾಡುತ್ತಾ, ಮಣ್ಣು ತಿಂದು ಅಮ್ಮನಿಗೆ ಬಾಯಲ್ಲೇ ಬ್ರಹ್ಮಾಂಡ ತೋರುವ, ಗೋಪಿಯರೊಡನೆ ರಾಸಲೀಲೆಯಾಡುವ ತುಂಟ ಕೃಷ್ಣನ ಚಿತ್ರ ಭಾಗವತದ್ದು.

ಮಹಾಭಾರತವನ್ನು ರಚಿಸಿ ಮುಗಿಸಿದ ಮೇಲೆ ವೇದವ್ಯಾಸರ ಮನಸ್ಸು ಕಟ್ಟರೆಯಾಗಿಯೇ ಉಳಿಯಿತಂತೆ. ವೇದಗಳನ್ನು ವಿಭಾಗಿಸಿದ್ದಾಯಿತು, ಸೂತ್ರಗಳನ್ನು ರಚಿಸಿದ್ದಾಯಿತು, ಧರ್ಮಾರ್ಥಸೂಕ್ಷ್ಮಗಳನ್ನು ತಿಳಿಸುವ ಮಹಾಭಾರತವನ್ನೂ ರಚಿಸಿದ್ದಾಯಿತು, ಮನಸ್ಸಿನ ದುಗುಡವಂತೂ ಕಳೆಯಲೊಲ್ಲದು. ಆಗ ನಾರದರು, ಮನಸ್ಸು ನಿರ್ಮಲವಾಗಲೋಸುಗ ಭಗವಂತನ ಲೀಲಾವಿನೋದಗಳನ್ನು ಕೀರ್ತಿಸುವ ಭಾಗವತವನ್ನು ರಚಿಸಲು ಹೇಳಿದರಂತೆ.

ಭಾಗವತದ ದಶಮಸ್ಕಂಧವಂತೂ ಸ್ವತಃ ಕಾವ್ಯವಷ್ಟೇ ಅಲ್ಲ, ಅಸಂಖ್ಯ ಕವಿಭಾವುಕರಿಗೆ, ಮೊಗೆದಷ್ಟೂ ಮುಗಿಯದ ಅಕ್ಷಯಸ್ಫೂರ್ತಿಯ ಭಂಡಾರ. ಅಲ್ಲಲ್ಲಿ ಹೊಮ್ಮುವ ಕೆಲವು 'ಗೀತೆ'ಗಳು ನಿಜಕ್ಕೂ ರಮ್ಯವಾದ ಭಾವಗೀತೆಗಳೇ.

ಕೃಷ್ಣನು ಅಕ್ರೂರನ ಕರೆಯನ್ನು ಮನ್ನಿಸಿ ಮಥುರೆಗೆ ಹೋದನಷ್ಟೇ? ಅವನು ತಮ್ಮನ್ನು ಎಂದೆಂದಿಗೂ ಬಿಟ್ಟೇ ಹೋಗುವನೆಂದು ಬಡಗೋಕುಲಕ್ಕೆ ಹೇಗೆ ತಾನೇ ತಿಳಿದೀತು; ಅವರಿಗೆ ತಾನೇ ಕಟ್ಟಿಕೊಟ್ಟಿದ್ದ ರಮ್ಯವಾದ ಗಂಧರ್ವಲೋಕವೊಂದು ಸುಳಿವೂ ಇಲ್ಲದಂತೆ ಕರಗಿಯೇ ಹೋದೀತೆಂದು ಸ್ವತಃ ಕೃಷ್ಣನಾದರೂ ಎಣಿಸಿದ್ದಾನೇ? ಮಥುರೆಗೆ ಹೋದ ಮೇಲೆ ಕೃಷ್ಣನ ಬದುಕೇ ಬೇರೆ; ಅದೊಂದು ಮಹಾ ಅಶ್ವತ್ಥವೃಕ್ಷದಂತಹ ಬೆಳವಣಿಗೆ. ಗೋವುಗಳನ್ನು ಗೋಪಿಯರನ್ನು ನೆನೆಯುವುದಿರಲಿ, ಆಮೇಲೆ ಆ ವೇಣುಗೋಪಾಲ ಕೊಳಲನ್ನಾದರೂ ಹಿಡಿದು ಮನಸ್ತೃಪ್ತಿಯಾಗಿ ನುಡಿಸಿದನೋ?

ಕಂಸಸಂಹಾರದ ನಂತರ ಮಥುರೆಯಲ್ಲೇ ನೆಲೆನಿಂತ ಕೃಷ್ಣನಿಗೂ ನಂದಗೋಕುಲದ ನೆನಪು ಆಗಾಗ ಕಾಡುವುದುಂಟು. ಹಾಗೊಮ್ಮೆ ಪ್ರಿಯಸ್ನೇಹಿತನಾದ ಉದ್ಧವನನ್ನು ತನ್ನವರೆಲ್ಲರ ಕ್ಷೇಮಸಮಾಚಾರ ವಿಚಾರಿಸಲೋಸುಗ ನಂದಗೋಕುಲಕ್ಕೆ ಅಟ್ಟುತ್ತಾನೆ. ಉದ್ಧವನೊಡನೆ ಕೃಷ್ಣನ ನೆನಪುಗಳನ್ನು ಹಂಚಿಕೊಳ್ಳುತ್ತ ಗೋಪಿಕೆಯರು ಗದ್ಗದಿತರಾಗಿ ಹಲವು ಭಾವಗಳಿಗೆ ಸಿಕ್ಕಿ ನಲುಗುತ್ತಾರೆ. ತನ್ನನ್ನು ಮುತ್ತಲು ಬಂದ ದುಂಬಿಯೊಂದನ್ನು ಕೃಷ್ಣನ ದೂತನೆಂದೇ ಭಾವಿಸಿ ಗೋಪಿಯೊಬ್ಬಳು ಅದರೊಂದಿಗೆ ಸಿಟ್ಟಿನಿಂದ ಮಾತಾಡತೊಡಗುತ್ತಾಳೆ.

ಮೇಲಿನಂತೆ ಆರಂಭವಾಗುವ ಹತ್ತು ಶ್ಲೋಕಗಳಲ್ಲಿ ಕೃಷ್ಣನನ್ನು ಜರಿಯುತ್ತಾಳೆ, ಹಂಬಲಿಸುತ್ತಾಳೆ, 'ಅವನೆಷ್ಟಾದರೂ ಈಗ ಬಹಳ ದೊಡ್ಡ ಮನುಷ್ಯನಪ್ಪಾ, ನಾವೆಷ್ಟರವರು' ಎಂದು ಹತಾಶೆಗೊಳ್ಳುತ್ತಾಳೆ, ಯಾವತ್ತಾದರೂ ಅವನು ಮತ್ತೆ ತಮ್ಮೊಡನೆ ಬಂದು ಸೇರುವನೆಂದು ಆಶಿಸುತ್ತಾಳೆ, ಕುಶಲ ವಿಚಾರಿಸುತ್ತಾಳೆ, ಪ್ರೇಮ ನಿವೇದಿಸುತ್ತಾಳೆ. ಭ್ರಮರಗೀತೆಯೆಂದೇ ಪ್ರಸಿದ್ಧವಾದ ಈ ಭಾಗ, ಭಾಗವತದಲ್ಲಿ ಕಾಣುವ ಬಹುಮನೋಜ್ಞವಾದ ಭಾವಗೀತೆಗಳಲ್ಲೊಂದು.

ಭ್ರಮರಗೀತೆಯನ್ನು ನೆನೆದಾಗ ನಮ್ಮವರೇ ಆದ ಶ್ರೀಪಾದರಾಜರ ಕನ್ನಡ ಭ್ರಮರಗೀತೆಯನ್ನು ಮರೆಯುವುದು ಸಾಧ್ಯವೇ? 'ಭೃಂಗ ನಿನ್ನಟ್ಟಿದನೇ? ಶ್ರೀ ರಂಗ ಮಧುರೇಲಿ ನಿಂದು' ಎಂದು ಪ್ರಾರಂಭವಾಗುವ ಈ ಕೃತಿಯಲ್ಲಿ ಗೋಪಿಯರ ಆ ವಿಹ್ವಲತೆ ಬಲುಮುದ್ದಾಗಿ ಮನೋಹರವಾಗಿ ಮೂಲಕ್ಕೆ ಹೊಯಿಗೈಯ್ಯಾಗಿ ಮೂಡಿದೆ. ವ್ಯಾಸರ ಗೋಪಿ ಆ ದುಂಬಿಯನ್ನು 'ಕಿತವಬಂಧೋ" (ಕಪಟಿಯ ಮಿತ್ರನೇ) ಎಂದು ಕರೆದರೆ, ನಮ್ಮ ಕನ್ನಡಗೋಪಿ ಇನ್ನೂ ಸಿಟ್ಟಾಗಿ 'ಹೇ ಕಿತವಾ' (ಕಪಟಿಯೇ) ಎಂದೇ ಕರೆಯುತ್ತಾಳೆ. ಅದು ಸಹಜವೇ, ಏಕೆಂದರೆ ಆ ದುಂಬಿಯನ್ನು ನೋಡಿ ಅವಳಿಗೆ ಕೃಷ್ಣನನ್ನೇ ಕಂಡಂತಾಗಿದೆ. ಆಕೆ ಉದ್ಗರಿಸುತ್ತಾಳೆ:

'ನಿನ್ನ ನೋಡೆ ನಮ್ಮ ಅಚ್ಯುತನ್ನ ಕಂಡಂತಾಯಿತಯ್ಯ
ಚನ್ನಿಗರರಸ ಕುಶಲೋನ್ನತಿಯೊಳಿಹನೇನೋ?'

ಸಿಟ್ಟುಗೊಳ್ಳುತ್ತಲೇ ಅವನ ಕುಶಲವನ್ನೂ ವಿಚಾರಿಸಿಕೊಳ್ಳುವ ಗೋಪಿ -

'ಲಕ್ಷುಮಿರಮಣನವ ಸೂಕ್ಷುಮ ಗೊಲ್ಲತೇರಾವು,
ಕುಕ್ಷಿಯೊಳು ಬೊಮ್ಮಾಂಡವವಗೆ ಮಕ್ಷಿಕಗಳಂತಿಪ್ಪೆವು;
ಮೋಕ್ಷದರಸನು ಅವ, ಗೋಕ್ಷೀರದಿ ತೃಪ್ತರಾವು;
ಲಕ್ಷಿಸುವುದೆಂತೊ ಎಮ್ಮನು ಶ್ರೀ ಹರಿಯು'

ಎಂದು ತನ್ನನ್ನೇ ಸಮಾಧಾನಿಸಿಕೊಳ್ಳುತ್ತಾಳೆ.

ಕೃಷ್ಣನ ನೆನಪುಗಳಿರಲಿ, ಅವನ್ನು ಅವನವರು ನೆನಪಿಸಿಕೊಳ್ಳುವ ಪರಿಯೂ ಮಧುರವೇ ಅಲ್ಲವೇ? ❖

ರಾಂಚಿ: ಸಾಮೂಹಿಕ ಅತ್ಯಾಚಾರ ಎಸಗಿದ ಏಳು ಬಾಲಕರು

ರಾಂಚಿ (ಪಿಟಿಐ): ಜಾರ್ಖಂಡ್‌ನ ರಾಂಚಿ ಜಿಲ್ಲೆಯಲ್ಲಿ ಬಾಲಕಿಯೊಬ್ಬಳ ಮೇಲೆ ಏಳು ಬಾಲಕರು ಸಾಮೂಹಿಕವಾಗಿ ಅತ್ಯಾಚಾರ ಎಸಗಿರುವ ಕೃತ್ಯ ನಡೆದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ನಾಲ್ವರನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ಇತರರಿಗೆ ಶೋಧ ಮುಂದುವರಿದಿದೆ. ಕೃತ್ಯ ಆ. 26ರಂದು ನಡೆಸಿದ್ದು, ಆರೋಪಿಗಳಲ್ಲಿ ಒಬ್ಬ ಸಂತ್ರಸ್ತೆಗೆ ಪರಿಚಿತನೇ ಆಗಿದ್ದ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೂ ಗೆಳೆಯರು ಕಾಯುತ್ತಿದ್ದ ನಿರ್ಜನ ಪ್ರದೇಶಕ್ಕೆ ಪರಿಚಿತ ಬಾಲಕಿಯನ್ನು ಮೋಟರ್‌ಸೈಕಲ್‌ನಲ್ಲಿ ಕರೆದುಕೊಂಡು ಹೋಗಿದ್ದಾನೆ. ಹುಡುಗರನ್ನು ನೋಡಿದ ಬಾಲಕಿ ಓಡಲು ಯತ್ನಿಸಿದ್ದು, ಸಫಲಳಾಗಿಲ್ಲ ಎಂದು ತಿಳಿಸಿದ್ದಾರೆ. ಬಂಧಿತರನ್ನು ಬಾಲಮಂದಿರದ ವಶಕ್ಕೆ ಒಪ್ಪಿಸಲಾಗಿದೆ ಎಂದು ತನಿಖಾಧಿಕಾರಿಯು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಬ್‌ಹೌಸ್ 'ಆಲದ ಮರ'ದ ವೇದಿಕೆಯಲ್ಲಿ ಅಭಿಮತ

'ಯುಗಳ ಗೀತೆಗಳು ಶಾಶ್ವತ'

ಪ್ರಜಾವಾಣಿ ವಾರ್ತೆ

ವಿ.ನಾಗೇಂದ್ರ ಪ್ರಸಾದ್ | ಕೆ. ಕಲ್ಯಾಣ್ | ಜಯಮಾಲಾ | ಎಚ್‌.ಆರ್‌. ಸುಜಾತಾ | ಎಚ್. ಜಿ. ಚೈತ್ರಾ

ಆಲದಮರ (ಪ್ರಜಾವಾಣಿ ಕ್ಲಬ್ ಹೌಸ್): ಯುಗಯುಗಗಳೇ ಸಾಗಲಿ ಸಿನಿಮಾ ಇರುವವರೆಗೂ ಯುಗಳಗೀತೆಗಳು ಶಾಶ್ವತವಾಗಿರುತ್ತವೆ. ಅವುಗಳಿಗೆ ಅಳಿವಿಲ್ಲ...

– ಇದು ಭಾನುವಾರ ಪ್ರಜಾವಾಣಿ ಕ್ಲಬ್‌ಹೌಸ್ 'ಆಲದ ಮರ'ದ ಅಡಿ ಸೇರಿದ ಚಿತ್ರ ಸಾಹಿತಿ, ಗಾಯಕರು ಮತ್ತು ಕಲಾವಿದರ ಒಕ್ಕೊರಲಿನ ಮಾತು.

'ಸಿನಿಮಾ ಯುಗಳ ಗೀತೆಗಳ ಕಾಲ ಮುಗಿಯಿತೇ? – ಒಂದು ನಾಸ್ಟಾಲ್ಜಿಕ್ ನೋಟ' ವಿಷಯದ ಕುರಿತ ಮಾತುಕತೆಯಲ್ಲಿ ಚಿತ್ರ- ಸಂಗೀತ ಕ್ಷೇತ್ರದ ಪ್ರಮುಖರು ಈ ಶೀರ್ಷಿಕೆಯ ಕುರಿತೇ ಚರ್ಚೆ ಆರಂಭಿಸಿದರು. ಯುಗಳ ಗೀತೆಗಳ ಕಾಲ ಮುಗಿಯಿತು ಎಂದು ನಿರ್ಧಾರಕ್ಕೆ ಬರಲಾಗದು ಎಂದು ಗಟ್ಟಿ ನಿಲುವು ವ್ಯಕ್ತಪಡಿಸಿದ ಚಿತ್ರಸಾಹಿತಿ ಡಾ.ವಿ.ನಾಗೇಂದ್ರ ಪ್ರಸಾದ್ ತಮ್ಮದೇ ಸಾಲೊಂದನ್ನು ಉಲ್ಲೇಖಿಸಿ,

'ಏಳು ಸ್ವರವು ಮುಗಿದ ಮೇಲೂ ಕಾಡುವಂತ ನನ್ನ ನಿನ್ನ ಯುಗಳಗೀತೆ ಮುಗಿಯೋದಿಲ್ಲ...

ಎಂದು ಹಾಡೇ ಬರೆದಿದ್ದೇನೆ. ಅಭಿವ್ಯಕ್ತಿ ಬೇರೆ ಆಗಬಹುದು. ಆದರೆ ಮುಗಿದೇ ಹೋಯಿತು ಎನ್ನಲಾಗದು. ನಾಯಕ ನಟನ ವೈಭವೀಕರಣ ಬಂದ ಮೇಲೆ ಇದು ಸ್ವಲ್ಪ ಬದಿಗೆ ಸರಿದಿದೆ ಎನ್ನಬಹುದು' ಎಂದರು.

ಈ ಮಾತಿಗೆ ಸಹಮತ ವ್ಯಕ್ತಪಡಿಸಿದವರು ಇನ್ನೊಬ್ಬ ಚಿತ್ರಸಾಹಿತಿ ಹಾಗೂ ಸಂಗೀತ ನಿರ್ದೇಶಕ ಕೆ.ಕಲ್ಯಾಣ್.

'ಸೋಲೋ ಹಾಡುಗಳಲ್ಲೂ ಯುಗಳ ಗೀತೆಯ ಭಾವ ಇದೆ. ಪ್ರಣಯ ಭರಿತ ಗೀತೆಗಳು ಇಲ್ಲದೇ ಹೋದರೆ ಚಿತ್ರರಂಗ ದೀರ್ಘಕಾಲ ಉಳಿಯದು' ಎಂದು ಕಲ್ಯಾಣ್ ವಿಶ್ಲೇಷಿಸಿದರು.

ನಟಿ, ನಿರ್ಮಾಪಕಿ, ರಾಜಕಾರಣಿ ಜಯಮಾಲಾ ಮಾತನಾಡಿ, 'ಮನುಷ್ಯ ಬದುಕಿರುವಷ್ಟು ಕಾಲ ಚಿತ್ರಗಳಲ್ಲಿ ಯುಗಳ ಗೀತೆ ಇದ್ದೇ ಇರುತ್ತದೆ. ಏಕೆಂದರೆ ನಮ್ಮ ಸಿನಿಮಾ ಸಂಸ್ಕೃತಿ ಅಂಥದ್ದು. ಯುಗಳ ಗೀತೆಗಳೆಂದರೆ ಅವು ನೆನಪುಗಳ ಸರಮಾಲೆಯನ್ನೇ ಹೊತ್ತು ತರುತ್ತವೆ. ಆದರೆ, ಪ್ರತಿ 10 ವರ್ಷಗಳಿಗೊಮ್ಮೆ ಸಾಹಿತ್ಯ, ತಂತ್ರಜ್ಞಾನ, ಅಭಿವ್ಯಕ್ತಿಯ ಟ್ರೆಂಡ್ ಬದಲಾಗುತ್ತದೆ' ಎಂದರು.

ಹಾಡುಗಳ ನೆನಪಿನ ಓಘದಲ್ಲಿ ಬರಿಯ ಮಾತಷ್ಟೇ ಉಳಿಯದಂತೆ ಮಾಡಿದವರು ಗಾಯಕಿ ಎಚ್.ಜಿ. ಚೈತ್ರಾ ಅವರು. ಬೆಳ್ಳಿ ಮೋಡ ಚಿತ್ರದ ದ.ರಾ. ಬೇಂದ್ರೆ ಅವರ ರಚನೆಯ 'ಮೂಡಲ ಮನೆಯ ಮುತ್ತಿನ ನೀರಿನ ಎರಕವಾ ಹೊಯ್ದ...' ಹಾಡಿನಿಂದ ಆರಂಭ ಮಾಡಿದರು. ಚರ್ಚೆ ಏರುಗತಿ ಪಡೆಯುತ್ತಿದ್ದಂತೆಯೇ 'ಬಿಡು ಬಿಡು ಕದ್ದು ಕದ್ದು ನೋಡೋದನ್ನ...' ಎನ್ನುತ್ತಾ ಸಂಗೀತದ ಸಿಂಚನ ಹರಿಸಿದರು. ಮಾತಿನ ಮಂಟಪಕ್ಕೆ ತೆರೆ ಎಳೆದದ್ದೂ ಅವರದ್ದೇ ಹಾಡು.

ಈ ಮಧ್ಯೆ ಎಚ್.ಆರ್.ಸುಜಾತಾ ಅವರು, ಹಂಸಲೇಖ- ರವಿಚಂದ್ರನ್ ಜೋಡಿ ಯುಗಳಗೀತೆಯ ಸಾಹಿತ್ಯ ಹಾಗೂ ಪ್ರಸ್ತುತಿಯ ಶೈಲಿಯನ್ನೇ ಬದಲಾಯಿಸಿದ್ದನ್ನು ನೆನಪಿಸಿದರು. ಯುಗಳ ಗೀತೆಗೆ ಪೋಲಿ ಶೈಲಿಯಲ್ಲೂ ಹೊಸ ಸ್ಪರ್ಶ ಕೊಟ್ಟದ್ದೇ ಈ ಜೋಡಿ ಎಂಬ 'ಶ್ಲಾಘನೆ'ಯೂ ವ್ಯಕ್ತವಾಯಿತು.

ಬೆಂಗಳೂರು ಆಕಾಶವಾಣಿಯ ಹಿರಿಯ ಉದ್ಘೋಷಕಿ ಬಿ.ಕೆ. ಸುಮತಿ ಅವರು, 'ಚಿತ್ರಗೀತೆಗಳು ಜನಜೀವನದ ಅವಿಭಾಜ್ಯ ಅಂಗ. ಇಂದಿಗೂ ಸಾಕಷ್ಟು ಕೇಳುಗರು ಯುಗಳಗೀತೆಗಳನ್ನು ಪ್ರಸಾರ ಮಾಡುವಂತೆ ಕೋರಿಕೆ ಸಲ್ಲಿಸುತ್ತಾರೆ. ಆದರೆ ಇಂದು ಕೇಳುವ ವೇದಿಕೆಗಳು ನೂರಾರು ಇವೆ. ಹಾಗಾಗಿ ಕೇಳುಗರೂ ಚದುರಿ ಹೋಗಿದ್ದಾರೆ' ಎಂದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್) ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಅವರು ಮಾತನಾಡಿ, 'ಆಟಿಸಂನಿಂದ ಬಳಲುತ್ತಿರುವ ಮಕ್ಕಳಿಗೆ ಸಂಗೀತ ಥೆರಪಿಯೇ ಪರಿಣಾಮಕಾರಿ. ಹಾಗಾಗಿ ಸಂಗೀತದ ಮಹತ್ವವನ್ನು ಅಲ್ಲಗಳೆಯಲಾಗದು' ಎಂದು ಹೇಳಿದರು.

'ಇತ್ತೀಚೆಗೆ ಕೇಳುಗರ ಆಸಕ್ತಿ ಮತ್ತು ಅಭಿರುಚಿ ಬದಲಾಗುತ್ತಿದೆ. ಸಿನಿಮಾಗಳು ಹೀರೋ ಕೇಂದ್ರಿತ ಆಗಿರುವುದರಿಂದ ಯುಗಳಗೀತೆಗಳಿಗೆ ಮಹತ್ವ ಕಡಿಮೆ ಆಗುತ್ತಿದೆ. ಹೀಗಾಗಿ ಹಳೆಯ ಯುಗಳ ಗೀತೆಗಳೇ ನಮಗೆ ಆಪ್ತವೆನಿಸುತ್ತವೆ' ಎಂದು ಕಿನ್ನರಿ ಆಡಿಯೊ ಸಂಸ್ಥೆ ಮಾಲೀಕ ಪದ್ಮಪಾಣಿ ಜೋಡಿದಾರ್ ಹೇಳಿದರು.

ಕವಯಿತ್ರಿ ನಂದಿನಿ ಹೆದ್ದುರ್ಗ ಮಾತನಾಡಿ, 'ನಾಸ್ಟಲ್ಜಿಕ್ ಎನ್ನುವ ಎಲ್ಲವೂ ಸೊಗಸೇ. ಬಾಲ್ಯದಲ್ಲಿ ಹೆಚ್ಚು ಕೇಳಿದ ವಿಷಯಗಳು ಮನಸ್ಸಿನಲ್ಲಿ ಗಾಢವಾಗಿ ಉಳಿದುಬಿಡುತ್ತವೆ. ಮುಂದೆ ಬೆಳೆದಾಗ ಹಳೆಯದೇ ಸೊಗಸಾಗಿ ಕಾಣಿಸುತ್ತವೆ. ಇದು ಸಹಜ' ಎಂದರು.

ಗಾಯಕಿ ಶ್ರೀದೇವಿ, ಕ್ಯಾಲಿಫೋರ್ನಿಯಾದಿಂದ ನೀತಾ ಆರ್. ವಿ., ರವಿಶಂಕರ್ ಪ್ರಭಾಕರ್, ಎ.ಜೆ. ರವಿಚಂದ್ರ, ಕೃಷ್ಣಪ್ರಿಯೇ, ಚೈತ್ರಾ ಮಣಿ ಸಹಿತ ಹಲವು ಕೇಳುಗರು ಅಭಿಪ್ರಾಯಗಳನ್ನು ಹಂಚಿಕೊಂಡರು. ಪ್ರಜಾವಾಣಿ ಸಹ ಸಂಪಾದಕ ಬಿ.ಎಂ. ಹನೀಫ್ ಸಂವಾದ ನಡೆಸಿಕೊಟ್ಟರು.

ಸೆ.1ರಿಂದ 'ಸುಪ್ರೀಂ' ಭೌತಿಕ ಕಲಾಪ: ಹೊಸ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: 17 ತಿಂಗಳ ಬಳಿಕ ಸುಪ್ರೀಂ ಕೋರ್ಟ್‌ನ ಭೌತಿಕ ಸ್ವರೂಪದ ಕಲಾಪ ಸೆಪ್ಟೆಂಬರ್ 1ರಿಂದ ಆರಂಭವಾಗಲಿದೆ. ಭೌತಿಕ ಸ್ವರೂಪದ ಜತೆಗೆ ವರ್ಚುವಲ್ ಮೂಲಕವೂ ಕಲಾಪ ಮುಂದುವರಿಯಲಿದೆ.

ಕಲಾಪಕ್ಕೆ ಸಂಬಂಧಿಸಿದಂತೆ ಹೊಸ ಮಾರ್ಗಸೂಚಿಗಳನ್ನು ನ್ಯಾಯಾಲಯ ಪ್ರಕಟಿಸಿದೆ.

ಪ್ರಕರಣಗಳ ಅಂತಿಮ ವಿಚಾರಣೆಯನ್ನು ಭೌತಿಕ ಕಲಾಪದ ಮೂಲಕ ನಡೆಸಲು ಆದ್ಯತೆ ನೀಡಲು ನಿರ್ಧರಿಸಲಾಗಿದೆ. ಜತೆಗೆ, ಸೋಮವಾರ ಮತ್ತು ಶುಕ್ರವಾರ ಹೊರತುಪಡಿಸಿ ಇತರ ದಿನಗಳಲ್ಲಿ ವಿಚಾರಣೆಗಾಗಿ ಪಟ್ಟಿ ಮಾಡುವ ನಿತ್ಯದ ವಿಷಯಗಳನ್ನು ಭೌತಿಕ ಕಲಾಪದ ಮೂಲಕ ನಡೆಸಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಭೌತಿಕ ಕಲಾಪ ನಡೆಸುವ ನಿರ್ಧಾರವನ್ನು ಸಂಬಂಧಿಸಿದ ಪೀಠವು ಕೈಗೊಳ್ಳಬಹುದು. ಕಕ್ಷಿಗಾರರ ಸಂಖ್ಯೆ ಮತ್ತು ನ್ಯಾಯಾಲಯದ ಕೊಠಡಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ನಿರ್ಧಾರ ಕೈಗೊಳ್ಳಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ವಿಡಿಯೊ ಕಾನ್ಫರೆನ್ಸ್ ಅಥವಾ ಭೌತಿಕವಾಗಿ ಭಾಗಿಯಾಗುವ ಬಗ್ಗೆ ವಕೀಲರು ನ್ಯಾಯಾಲಯದ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಭೌತಿಕವಾಗಿ ನ್ಯಾಯಾಲಯದಲ್ಲಿ ಹಾಜರಾಗುವುದನ್ನು ವಕೀಲರು ಅಥವಾ ಅರ್ಜಿದಾರರು ಆಯ್ಕೆ ಮಾಡಿಕೊಂಡರೆ ವಿಡಿಯೊ ಕಾನ್ಫರೆನ್ಸ್ ಅಥವಾ ಟೆಲಿಕಾನ್ಫರೆನ್ಸ್ ಮೂಲಕ ಹಾಜರಾಗುವ ಸೌಲಭ್ಯವನ್ನು ಕಲ್ಪಿಸುವುದಿಲ್ಲ ಎಂದು ಸೂಚಿಸಲಾಗಿದೆ.

ಕೋವಿಡ್–19 ಕಾರಣಕ್ಕೆ 2020ರ ಮಾರ್ಚ್‌ನಿಂದ ವರ್ಚುವಲ್ ವ್ಯವಸ್ಥೆ ಮೂಲಕ ಕಲಾಪ ನಡೆಸಲಾಗುತ್ತಿದೆ. ಆದರೆ, ಭೌತಿಕ ಕಲಾಪ ನಡೆಸುವಂತೆ ವಕೀಲರ ಸಂಘಗಳು ಒತ್ತಾಯಿಸಿದ್ದವು.

ನ್ಯಾಯಮೂರ್ತಿಗಳ ಸಮಿತಿಯ ಶಿಫಾರಸು ಆಧರಿಸಿ, ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ನಿರ್ದೇಶನದನ್ವಯ ಹೊಸ ಮಾರ್ಗಸೂಚಿ ಹೊರಡಿಸಲಾಗಿದೆ.

ಗುಜರಾತ್ ಘಟಕದಲ್ಲಿ ಉತ್ಪಾದನೆಯಾದ ಕೋವ್ಯಾಕ್ಸಿನ್ ಮಾರುಕಟ್ಟೆಗೆ

ಅಂಕ್ಲೇಶ್ವರ, ಗುಜರಾತ್ (ಪಿಟಿಐ): ಭರೂಚ್ ಜಿಲ್ಲೆಯ ಅಂಕ್ಲೇಶ್ವರದಲ್ಲಿರುವ ಭಾರತ್ ಬಯೋಟೆಕ್‌ನ ನೂತನ ಘಟಕದಲ್ಲಿ ಉತ್ಪಾದನೆಯಾದ ಮೊದಲ ಬ್ಯಾಚ್‌ನ ಕೋವ್ಯಾಕ್ಸಿನ್ ಲಸಿಕೆಯನ್ನು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಭಾನುವಾರ ಬಿಡುಗಡೆ ಮಾಡಿದರು.

'ವಾಣಿಜ್ಯ ಉದ್ದೇಶದ ಮೊದಲ ಬ್ಯಾಚ್‌ನ ಕೋವ್ಯಾಕ್ಸಿನ್ ಲಸಿಕೆಯನ್ನು ಬಿಡುಗಡೆ ಮಾಡಲಾಯಿತು. ಕೋವಿಡ್ ವಿರುದ್ಧದ ಹೋರಾಟದಲ್ಲಿ ಲಸಿಕೆಯ ಪಾತ್ರ ಮಹತ್ವದ್ದು' ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಈ ಕ್ರಮದಿಂದ ಲಸಿಕೆ ಪೂರೈಕೆ ಹೆಚ್ಚುವುದು. ಆ ಮೂಲಕ ಲಸಿಕೆ ಕಾರ್ಯಕ್ರಮಕ್ಕೆ ವೇಗ ಸಿಗುವುದು' ಎಂದೂ ಅವರು ಟ್ವೀಟ್ ಮಾಡಿದ್ದಾರೆ.

'ಲೈಂಗಿಕ ಉದ್ದೇಶವಿಲ್ಲದೆ ಮಗುವಿನ ಕೆನ್ನೆಯ ಸ್ಪರ್ಶ ಅಪರಾಧವಲ್ಲ'

ಮುಂಬೈ (ಪಿಟಿಐ): ಲೈಂಗಿಕತೆಯ ಉದ್ದೇಶವಿಲ್ಲದೆ ಮಗುವಿನ ಕೆನ್ನೆಯನ್ನು ಸ್ಪರ್ಶಿಸುವುದನ್ನು ಲೈಂಗಿಕ ದೌರ್ಜನ್ಯ ಎಂಬುದಾಗಿ ಪರಿಗಣಿಸಲಾಗದು ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂದೀಪ್ ಶಿಂಧೆ ಅವರಿರುವ ಏಕಸದಸ್ಯ ನ್ಯಾಯಪೀಠ, ಪ್ರಕರಣದ ಆರೋಪಿಯಾದ 46 ವರ್ಷದ ವ್ಯಕ್ತಿಗೆ ಆ.27ರಂದು ಜಾಮೀನು ಮಂಜೂರು ಮಾಡಿದೆ.

ಠಾಣೆ ಜಿಲ್ಲೆಯ ರಾಬೋಡಿ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿತ್ತು. ಮಾಂಸ ಮಾರಾಟ ಅಂಗಡಿ ನಡೆಸುತ್ತಿರುವ ಮೊಹಮ್ಮದ್ ಅಹ್ಮದ್ ಉಲ್ಲಾ ಎಂಬುವವರು, ಅಂಗಡಿಗೆ ಬಂದಿದ್ದ 8 ವರ್ಷದ ಬಾಲಕಿಯ ಕೆನ್ನೆ ಸವರಿದ್ದರು ಎಂದು ಆರೋಪಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮಹಿಳೆಯೊಬ್ಬರು ಸಲ್ಲಿಸಿದ್ದ ದೂರಿನನ್ವಯ ಉಲ್ಲಾ ಅವರನ್ನು ಕಳೆದ ವರ್ಷ ಜುಲೈನಲ್ಲಿ ಬಂಧಿಸಿ, ನವಿಮುಂಬೈನ ತಲೋಜಾ ಜೈಲಿನಲ್ಲಿರಿಸಲಾಗಿತ್ತು. ಜಾಮೀನು ಕೋರಿ ಆರೋಪಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶಿಂಧೆ, 'ಲೈಂಗಿಕ ಉದ್ದೇಶವಿಲ್ಲದೇ ಬಾಲಕಿಯ ಕೆನ್ನೆ ಸ್ಪರ್ಶ ಮಾಡಿರುವುದು ಪೋಕ್ಸೊ ಕಾಯ್ದೆಯಡಿ ವಿವರಿಸಿರುವಂತೆ ಲೈಂಗಿಕ ದೌರ್ಜನ್ಯ ಎನಿಸುವುದಿಲ್ಲ' ಎಂದು ಅಭಿಪ್ರಾಯಪಟ್ಟರು.

'ನ್ಯಾಯಾಲಯದ ಅಭಿಪ್ರಾಯವು ಈ ಪ್ರಕರಣದ ಆರೋಪಿಗೆ ಜಾಮೀನು ನೀಡುವುದಕ್ಕೆ ಮಾತ್ರ ಅನ್ವಯಿಸುತ್ತದೆ. ಇದು ಆರೋಪಿ ವಿರುದ್ಧದ ತನಿಖೆ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ' ಎಂದೂ ಹೇಳಿದರು.

'ಸೈಬರ್ ಉಗ್ರರ' ಮೇಲೆ ಜಮ್ಮು–ಕಾಶ್ಮೀರ ಪೊಲೀಸ್ ನಿಗಾ

ಶ್ರೀನಗರ (ಪಿಟಿಐ): ಯುವಕರನ್ನು ದಾರಿ ತಪ್ಪಿಸಿ ವಿಧ್ವಂಸಕ ಕೃತ್ಯಗಳಲ್ಲಿ ಪಾಲ್ಗೊಳ್ಳುವಂತೆ ಪ್ರಚೋದನೆ ನೀಡುತ್ತಿರುವ 'ಸೈಬರ್' ಭಯೋತ್ಪಾದಕರನ್ನು ನಿಯಂತ್ರಿಸಲು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮುಂದಾಗಿದ್ದಾರೆ.

'ಇವರು ಅತ್ಯಂತ ಕೆಟ್ಟ ಭಯೋತ್ಪಾದಕರು. ಅನಾಮಧೇಯವಾಗಿ ಉಳಿಯುವ ಈ ಸೈಬರ್ ಭಯೋತ್ಪಾದಕರು ಅಪಾರ ಹಾನಿ ಮಾಡುತ್ತಿದ್ದಾರೆ' ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

'ಕೋಮು ಸಂಘರ್ಷ ಸೃಷ್ಟಿಸುವುದು ಅಥವಾ ಸಾಮಾಜಿಕ ಮಾಧ್ಯಮಗಳ ಮೂಲಕ ಸುದ್ದಿಗಳನ್ನು ತಿರುಚುವ ಕೃತ್ಯಗಳನ್ನು ಇವರು ಮಾಡುತ್ತಿದ್ದಾರೆ. ಆದರೆ, ಈ ಭಯೋತ್ಪಾದಕರು ದೂರದ ದೇಶಗಳಲ್ಲಿ ಸುರಕ್ಷಿತವಾಗಿದ್ದಾರೆ' ಎಂದರು.

ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಮಹಾನಿರ್ದೇಶಕ ದಿಲ್‌ಬಾಗ್ ಸಿಂಗ್ ಹಾಗೂ ಹಿರಿಯ ಸೇನಾ ಅಧಿಕಾರಿಗಳು ಮತ್ತು ವಿವಿಧ ಭದ್ರತಾ ಸಂಸ್ಥೆಗಳ ಅಧಿಕಾರಿಗಳು ಈ ಬಗ್ಗೆ ನಿರಂತರವಾಗಿ ಪರಿಶೀಲನೆ ನಡೆಸಿದ್ದಾರೆ.

'ಸೈಬರ್ ಭಯೋತ್ಪಾದಕರು ನಿಜವಾದ ಭಯೋತ್ಪಾದಕರಿಗಿಂತ ಅಪಾಯಕಾರಿ. ಹೀಗಾಗಿ, ಇವರ ಮೇಲೆ ಹೆಚ್ಚು ನಿಗಾವಹಿಸುವ ಪ್ರಯತ್ನ ಮಾಡಿದ್ದು, ಸ್ವಲ್ಪಮಟ್ಟಿನ ಯಶಸ್ಸು ಸಹ ದೊರೆತಿದೆ' ಎಂದು ಡಿಜಿಪಿ ದಿಲ್‌ಬಾಗ್ ಸಿಂಗ್ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Business
ರೇಡಿಯೇಟರ್ ಕೂಲಂಟ್ ಲಭ್ಯವಿದೆ @ ರೂ .35/ ಪ್ರತಿ ಲೀಟರ್‌ಗೆ. ಸಂಪರ್ಕಿಸಿ: ಸಾಯಿಶಬ್ದ್ ಇಂಡಸ್ಟ್ರೀಸ್ (ಮಧ್ಯ ಪ್ರದೇಶ), 9827091911

ಉದ್ಯೋಗಾವಕಾಶ
Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

General
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNC ಕಂಪನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 9611715755

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/-ದವರೆಗೆ. 7829256781, 7829215432

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000- 56,000/- ವಸತಿಯೂಟವಿದೆ. 7204853296, 7204396011

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

Wanted
ವಯಸ್ಸಾದವರನ್ನು ನೂಡೀಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟ ವಸತಿಯೊಂದಿಗೆ 11000 ರಿಂದ 16000ವರೆಗೆ ಸಂಬಳ. ಫೋ: 8139962883

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56 ಸಂಪರ್ಕಿಸಿ: 9606385001, 9606523337

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂ-ಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

ಭವಿಷ್ಯ
Astrology
★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★॥ಶ್ರೀಆಂಜನೇಯಸ್ವಾಮಿ॥★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್_ಕೇಸ್, ವ್ಯಾಪಾರ, ಸಂತಾನ ಇನ್ನೂ ಯಾವುದೇ ಗುಪ್ತ_ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9880977623

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ_ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಇತರೆ
Medical
ಶ್ರೀಶಕ್ತಿ ಹೆಲ್ತ್-ಕೇರ್ ವತಿಯಿಂದ ಯಾವುದೇ ಶಸ್ತ್ರಚಿಕಿತ್ಸೆವಿಲ್ಲದೆ ಮಂಡಿನೋವು, ಬೆನ್ನುನೋವು, ಕತ್ತುನೋವು, ವೆರಿಕೋಸ್ ವೈನ್ಸ್, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರು, ಸಂಧಿವಾತ, ಟೆನ್ನಿಸ್ ಎಲ್ಬೋಪೇನ್, ತಲೆನೋವು, ಮೈಗ್ರೇನ್, ರೋಮೆಟೋ ಆರ್ಥ್ರೈಟಿಸ್, ಹಿಮ್ಮಡಿನೋವು, ಬುಜದನೋವುಗಳಿಗೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಚಿಕಿತ್ಸೆ ಕೊಡಲಾಗುವುದು ಸ್ಥಳ ಹುಮನಾಬಾದ ಜಿ// ಬೀದರ್: 6366656745

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮದುವೆ ನೆಪದಲ್ಲಿ ಯುವತಿಯರ ಸೆಳೆದು ಡ್ರಗ್ಸ್ ಮಾರುತ್ತಿದ್ದ • ಸಿಗರೇಟ್ ಪಾಕೆಟ್‌ನಲ್ಲಿ ಕೊಕೇನ್

‘ರಾಕಿ ಭಾಯಿ’ ಜೊತೆ ಮನೆಯಲ್ಲೇ ‘ಆಫ್ಟರ್ ಪಾರ್ಟಿ’

• ಸಂತೋಷ ಜಿಗಳಿಕೊಪ್ಪ

ಸಂಜನಾ ಗಲ್ರಾನಿ

ದೊಡ್ಡವರ ‘ಡ್ರಗ್ಸ್’ ನಶೆ

ಬೆಂಗಳೂರು: ‘ವಿದೇಶಗಳಲ್ಲಿರುವ ಕ್ಯಾಸಿನೊ ಮತ್ತು ಕ್ಲಬ್‌ಗಳಿಗೆ ಗ್ರಾಹಕರನ್ನು ಕರೆದೊಯ್ಯುವ ಮಧ್ಯವರ್ತಿಯಾಗಿದ್ದ ಆರೋಪಿ ರಾಹುಲ್ ತೋನ್ಸೆ, ಮದುವೆ ನೆಪದಲ್ಲಿ ಯುವತಿಯರನ್ನು ಪರಿಚಯಿಸಿಕೊಂಡು ಡ್ರಗ್ಸ್ ಜಾಲಕ್ಕೆ ದೂಡುತ್ತಿದ್ದ. ಆತನನ್ನು ‘ರಾಕಿ ಭಾಯಿ’ ಎನ್ನುತ್ತಿದ್ದ ನಟಿ ಸಂಜನಾ ಗಲ್ರಾನಿ, ಮನೆಗೆ ಹಲವು ಬಾರಿ ಆಹ್ವಾನಿಸಿ ಜೊತೆಯಲ್ಲೇ ‘ಆಫ್ಟರ್ ಪಾರ್ಟಿ’ ಆಚರಿಸಿ ಡ್ರಗ್ಸ್ ಸೇವಿಸಿದ್ದಳು’ ಎಂಬ ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಹೊರಬಿದ್ದಿದೆ.

ಮಾದಕ ವಸ್ತು (ಡ್ರಗ್ಸ್) ಸೇವಿಸಲು ಹಾಗೂ ಮಾರಾಟದಿಂದ ಹಣ ಗಳಿಸಲು ಸಂಘಟಿತರಾಗಿದ್ದ ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದ ಆರೋಪಿಗಳು, ಯುವಜನರನ್ನು ತೆಕ್ಕೆಗೆ ಬೀಳಿಸಿಕೊಂಡು ನಶೆ ಏರಿಸಿಕೊಳ್ಳಲು ಪ್ರಚೋದಿಸುತ್ತಿದ್ದರು. ಪ್ರಕರಣದಲ್ಲಿ 25 ಆರೋಪಿಗಳ ಪಾತ್ರ ಕುರಿತು ಸಿಸಿಬಿ ಪೊಲೀಸರು, ದೋಷಾರೋಪ ಪಟ್ಟಿಯಲ್ಲಿ ದಾಖಲೆ ಸಮೇತ ಉಲ್ಲೇಖಿಸಿದ್ದಾರೆ.

‘ಸುಂದರ ಯುವತಿಯರನ್ನು ಪರಿಚಯಿಸಿಕೊಂಡು ಮದುವೆ ಮಾಡಿಕೊಳ್ಳುವುದಾಗಿ ಹೇಳುತ್ತಿದ್ದ ರಾಹುಲ್, ಅವರನ್ನು ಪಾರ್ಟಿಗಳಿಗೆ ಆಹ್ವಾನಿಸಿ ಡ್ರಗ್ಸ್ ಸೇವಿಸುವಂತೆ ಮಾಡುತ್ತಿದ್ದ.

ಫ್ಯಾಷನ್ ಶೋ ಆಯೋಜಕನ ಮನೆಯಲ್ಲಿ ಡ್ರಗ್ಸ್

‘ಪ್ರಕರಣದ 13ನೇ ಆರೋಪಿ ಆಗಿರುವ ನಿಯಾಸ್ ಅಹ್ಮದ್, ಸಂಜನಾ ಜೊತೆ ಒಡನಾಟ ಹೊಂದಿದ್ದ. ಆಕೆಯ ಮನೆಯಲ್ಲಿ ಆಯೋಜಿಸುತ್ತಿದ್ದ ಪಾರ್ಟಿಗಳಲ್ಲಿ ಪಾಲ್ಗೊಂಡು ಡ್ರಗ್ಸ್ ಸೇವಿಸುತ್ತಿದ್ದ. ಫ್ಯಾಷನ್ ಶೋ ಆಯೋಜಕನಾಗಿದ್ದ ಆತನ ಮನೆ ಮೇಲೆ ದಾಳಿ ಮಾಡಿದಾಗ, 4 ಗ್ರಾಂ ಗಾಂಜಾ ಹಾಗೂ ಕಪ್ಪು ಬಣ್ಣದ ಚಿಲುಮೆ ಪತ್ತೆಯಾಗಿತ್ತು’ ಎಂಬ ಅಂಶವನ್ನೂ ಪಟ್ಟಿಯಲ್ಲಿ ತಿಳಿಸಲಾಗಿದೆ.

ಕಾಗದದಲ್ಲಿ ಗಾಂಜಾ ಸುತ್ತಿ ಗೆಳತಿಯ ಜೊತೆ ಸೇವಿಸುತ್ತಿದ್ದ ಫೋಟೊಗಳು ಆತನ ಮೊಬೈಲ್‌ನಲ್ಲಿ ಲಭ್ಯವಾಗಿವೆ’ ಎಂಬ ಅಂಶ ಪಟ್ಟಿಯಲ್ಲಿದೆ.

'ಪ್ರಕರಣದ 14ನೇ ಆರೋಪಿ ಆಗಿರುವ ಅರ್ಚನಾ ಮನೋಹರ್ ಗಲ್ರಾನಿ ಅಲಿಯಾಸ್ ಸಂಜನಾ ಗಲ್ರಾನಿ, ಇಂದಿರಾನಗರದ ದೂಪನಹಳ್ಳಿಯ ಸಾಯಿ ತೇಜ್ ಶೈನ್ ವಸತಿ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ವಾಸವಿದ್ದಳು. ರಾಹುಲ್ ತೋನ್ಸೆ ಹಾಗೂ ನಿಯಾಸ್ ಅಹಮ್ಮದ್‌ನನ್ನು ಹಲವು ಬಾರಿ ಮನೆಗೆ ಕರೆಸಿದ್ದ ಸಂಜನಾ, ಡ್ರಗ್ಸ್ ಸಮೇತ ‘ಆಫ್ಟರ್ ಪಾರ್ಟಿ’ (ಆಪ್ತರನ್ನಷ್ಟೇ ಸೇರಿಸಿಕೊಂಡು ಮಾಡುತ್ತಿದ್ದ ಪಾರ್ಟಿ) ಮಾಡಿರುವುದು ದೃಢಪಟ್ಟಿದೆ.’

‘ನೈಜೀರಿಯಾ ಪ್ರಜೆ ಜಾನ್ ಅಲಿಯಾಸ್ ಬೆನಾಲ್ಡ್ ಉಡೇನ್ನಾ ಎಂಬಾತನೇ ಆರೋಪಿಗಳಿಗೆ ಕೊಕೇನ್, ಎಂಡಿಎಂಎ ಹಾಗೂ ಗಾಂಜಾ ಪೂರೈಕೆ ಮಾಡಿದ್ದ. ಪಕ್ಕದ ಮನೆಯ ನಿವಾಸಿಯೊಬ್ಬರನ್ನು ನೈಜೀರಿಯಾ ಪ್ರಜೆ ಬಳಿ ಕಳುಹಿಸಿದ್ದ ಸಂಜನಾ, ಅವರ ಮೂಲಕ ಡ್ರಗ್ಸ್ ತರಿಸಿದ್ದಳು. ಇದೇ ವಿಚಾರವಾಗಿ ನಿವಾಸಿಯ ಪತ್ನಿಯು ಸಂಜನಾ ಜೊತೆ ಗಲಾಟೆ ಸಹ ಮಾಡಿದ್ದರು’ ಎಂಬ ಮಾಹಿತಿ ದೋಷಾರೋಪ ಪಟ್ಟಿಯಲ್ಲಿದೆ.

ಸಿಗರೇಟ್ ಪ್ಯಾಕ್‌ನಲ್ಲಿ ಕೊಕೇನ್: ‘ಸಿಗರೇಟ್ ಪ್ಯಾಕ್‌ನಲ್ಲಿ ಕೊಕೇನ್ ಬಚ್ಚಿಟ್ಟು ಸಂಜನಾ ಮನೆಗೆ ಕಳುಹಿಸಲಾಗುತ್ತಿತ್ತು. ಅದನ್ನು ಪಡೆಯುತ್ತಿದ್ದ ಸಂಜನಾ, ಪ್ಲೇಟ್‌ನಲ್ಲಿ ಕೊಕೇನ್ ಸುರಿದುಕೊಂಡು ಮೂಗಿನಿಂದ ಎಳೆದು ನಶೆ ಏರಿಸಿಕೊಳ್ಳುತ್ತಿದ್ದಳು’ ಎಂಬ ಅಂಶವನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

‘2019ರ ಅಕ್ಟೋಬರ್ 9 ರಂದು ನ್ಯೂ ಬಿಇಎಲ್ ರಸ್ತೆಯಲ್ಲಿರುವ ‘ಹಾಫ್ ವೇ ಹೌಸ್’ ರೆಸ್ಟೋರೆಂಟ್‌ನಲ್ಲಿ ಸಂಜನಾ ಗಲ್ರಾನಿ ಹುಟ್ಟುಹಬ್ಬ ಪಾರ್ಟಿ ಆಯೋಜಿಸಲಾಗಿತ್ತು. ಅಲ್ಲಿಯೂ ಡ್ರಗ್ಸ್ ಸೇವನೆ ಹಾಗೂ ಮಾರಾಟ ನಡೆದಿತ್ತು. 2017ರ ಅಕ್ಟೋಬರ್‌ನಲ್ಲಿ ಕೋರಮಂಗಲದ ವಾಲ್‌ಸ್ಟ್ರೀಟ್ ಕ್ಲಬ್‌ನಲ್ಲೂ ಆಯೋಜಿಸಿದ್ದ ಪಾರ್ಟಿಯಲ್ಲೂ ಡ್ರಗ್ಸ್ ದಂಧೆ ಜೋರಾಗಿತ್ತು.’

‘2018ರ ಫೆಬ್ರುವರಿ 14 ರಂದು ‘ಪ್ರೇಮಿಗಳ ದಿನಾಚರಣೆ’ ಹೆಸರಿನಲ್ಲಿ ಜೆಡಬ್ಲ್ಯು ಮ್ಯಾರಿಯೇಟ್ ಹೋಟೆಲ್‌ನಲ್ಲಿ ಆರೋಪಿ ವೈಭವ್ ಕುಮಾರ್ ಜೈನ್ ಪಾರ್ಟಿ ಆಯೋಜಿಸಿದ್ದ. ಅದೇ ಪಾರ್ಟಿಗೆ ಹೋಗಿದ್ದ ಸಂಜನಾಳ ಬಾಯಿಗೆ ಆರೋಪಿ ವೈಭವ್ ಡ್ರಗ್ಸ್ ಮಾತ್ರೆಗಳನ್ನು ಹಾಕಿದ್ದ. ಸ್ನೇಹಿತರೊಬ್ಬರು ನೀರು ಕುಡಿಸಿದ್ದರು. ಪಾರ್ಟಿಯಲ್ಲಿ ಪಾಲ್ಗೊಂಡಿದ್ದವರು ಡ್ರಗ್ಸ್ ಸೇವಿಸಿ, ಅದರ ಮತ್ತಿನಲ್ಲೇ ತೇಲಾಡಿದ್ದರು’ ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

ನೀಲಕುರುಂಜಿ ಹೂವು 7 ವರ್ಷದ ಪ್ರಭೇದ

ನೀಲಕುರುಂಜಿ ಹೂವು

ಮಡಿಕೇರಿ: ‘ಕೊಡಗು ಜಿಲ್ಲೆಯ ಮಾಂದಲ್‌ಪಟ್ಟಿ ಹಾಗೂ ಕೋಟೆಬೆಟ್ಟದ ವ್ಯಾಪ್ತಿಯಲ್ಲಿ ಕಂಗೊಳಿಸುತ್ತಿರುವ ನೀಲಕುರುಂಜಿ ಹೂವು 7 ವರ್ಷಕ್ಕೊಮ್ಮೆ ಅರಳುವ ಪ್ರಭೇದಕ್ಕೆ ಸೇರಿದ್ದು’ ಎಂದು ಸಸ್ಯತಜ್ಞರು ಸ್ಪಷ್ಟಪಡಿಸಿದ್ದಾರೆ.

ಸಸ್ಯತಜ್ಞ ಡಾ.ಜೋಮಿ ಅಗಸ್ಟಿನ್ ಹಾಗೂ ಪರಿಸರ ಸಂಸ್ಥೆಯ ಅಧ್ಯಕ್ಷ ಈಶ್ವರ್ ಪ್ರಸಾದ್ ನೇತೃತ್ವದಲ್ಲಿ ಐವರ ತಂಡವು ಈಚೆಗೆ ಈ ಬೆಟ್ಟಗಳಲ್ಲಿ ಅಧ್ಯಯನ ನಡೆಸಿತ್ತು.

ಅರಣ್ಯ ಇಲಾಖೆ ಅಧಿಕಾರಿಗಳು, ‘ಇದು 12 ವರ್ಷಗಳಿಗೊಮ್ಮೆ ಅರಳುವ ನೀಲಕುರುಂಜಿ (ಸ್ಟ್ರೊಬಿಲಾಂತಸ್ ಕುಂತಿಯಾನ)’ ಎಂದಿದ್ದರು. ಇಲಾಖೆ ವೆಬ್‌ಸೈಟ್‌ನಲ್ಲೂ ಇದೇ ಮಾಹಿತಿ ಇತ್ತು. ಆದರೆ, ಇದನ್ನು ಸಸ್ಯ ತಜ್ಞರು ಅಲ್ಲಗಳೆದಿದ್ದಾರೆ.

ನೀಲಹೂವಿನ ಸಸ್ಯವರ್ಗದಲ್ಲಿ ಅಂದಾಜು 70 ಪ್ರಭೇದಗಳಿವೆ. ಈಗ ಬಿಟ್ಟಿರುವುದು 7 ವರ್ಷದ ಪ್ರಭೇದ (ಸ್ಟ್ರೊಬಿಲಾಂತಸ್ ಸೆಸ್ಸೈಲಿಸ್). 12 ವರ್ಷಕ್ಕೆ ಅರಳುವ ಕುಂತಿಯಾನ ಅಲ್ಲ’ ಎಂದು ತಜ್ಞರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

ಕುಂತಿಯಾನ ಹೂವುಗಳು ತಿಳಿನೀಲಿ ಬಣ್ಣದ್ದಾಗಿದ್ದು, ಎಲೆಗಳು ತೊಟ್ಟುಗಳನ್ನು ಹೊಂದಿರುತ್ತವೆ. ಏಳು ವರ್ಷದ ಪ್ರಭೇದದ ಹೂವುಗಳು ನೇರಳೆ ಬಣ್ಣದಿಂದ ಕೂಡಿದ್ದು, ನೇರವಾಗಿ ಕಾಂಡಕ್ಕೆ ಅಂಟಿಕೊಂಡಂತೆ ಬೆಳೆಯುತ್ತವೆ’ ಎಂದು ಈಶ್ವರ್ ಪ್ರಸಾದ್ ತಿಳಿಸಿದ್ದಾರೆ. ಮಂಗಳೂರಿನ ಚೇತನಾ ಬಡೇಕರ್, ಕಾಸರಗೋಡಿನ ಬಿಜು, ಕೇರಳದ ಉನ್ನಿಕೃಷ್ಣ ತಂಡದಲ್ಲಿದ್ದರು.

ಕೃಷ್ಣಾಗಮನ..

ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಭಾನುವಾರ ಮೈಸೂರಿನ ಕಲಾಮಂದಿರದ ಬಳಿ ಮಾರಾಟಕ್ಕಿಡಲಾಗಿದ್ದ ಕೃಷ್ಣನ ವಿಗ್ರಹಗಳ ನಡುವೆ ಬಾಲಕನೊಬ್ಬ ಕಂಡು ಬಂದಿದ್ದು ಹೀಗೆ ಪ್ರಜಾವಾಣಿ ಚಿತ್ರ

ಕೋವಿಡ್ ಪ್ರಕರಣ: 29.47 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,262 ಮಂದಿ ಕೊರೊನಾ ಸೋಂಕಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.47 ಲಕ್ಷ ದಾಟಿದೆ.

ಒಂದು ದಿನದಲ್ಲಿ 1.78 ಲಕ್ಷ ಮಾದರಿಗಳ ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.70ರಷ್ಟಿದೆ. 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಎರಡಂಕಿ, 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿವೆ. ಬೀದರ್, ಚಿಕ್ಕಬಳ್ಳಾಪುರ, ಗದಗ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 202, ಮೈಸೂರು, ಕೊಡಗಿನಲ್ಲಿ ತಲಾ 86 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 361 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 17 ಮಂದಿ ಮೃತಪಟ್ಟಿದ್ದಾರೆ. 9 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣ ವರದಿಯಾಗಿದೆ. ಬೆಂಗಳೂರಿನಲ್ಲಿ 6, ದಕ್ಷಿಣ ಕನ್ನಡದಲ್ಲಿ 3 ಹಾಗೂ ಹಾಸನದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಆರು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರ ಶೇ 1.34ರಷ್ಟಿದೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 37,278ಕ್ಕೆ ತಲುಪಿದೆ. ಸೋಂಕಿತರಲ್ಲಿ 1,384 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.91 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 18,758ಕ್ಕೆ ಇಳಿಕೆಯಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,47,255 ಒಟ್ಟು ಸೋಂಕಿತರು (29,45,993 ನಿನ್ನೆಯ ವಿವರ)

18,758 ಸಕ್ರಿಯ ಪ್ರಕರಣಗಳು

28,91,193 ಗುಣಮುಖರಾದವರು

37,278 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,262
ಗುಣಮುಖ	1,384
ಸಾವು	17

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ರಾಮಕೃಷ್ಣ ಹೆಗಡೆ ಜನ್ಮದಿನಾಚರಣೆಯಲ್ಲಿ ಶಾಸಕ ಕೆ.ಆರ್. ರಮೇಶ್ ಕುಮಾರ್

ಮೌಲ್ಯಗಳಿಗೆ ಚ್ಯುತಿಯಾಗದಂತೆ ನಡೆದ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮೌಲ್ಯಾಧಾರಿತ ರಾಜಕಾರಣದ ದೊಡ್ಡ ಮಾದರಿ. ನಂಬಿದ್ದ ಮೌಲ್ಯಗಳಿಗೆ ಎಂದೂ ಚ್ಯುತಿಯಾಗದಂತೆ ನಡೆದುಕೊಂಡಿದ್ದರು. ಅದಕ್ಕಾಗಿಯೇ ಕುಟುಂಬ ರಾಜಕಾರಣದಿಂದ ದೂರ ಉಳಿದಿದ್ದರು ಎಂದು ಶಾಸಕ ಕೆ.ಆರ್. ರಮೇಶ್ ಕುಮಾರ್ ಹೇಳಿದರು.

ರಾಷ್ಟ್ರೀಯ ನವನಿರ್ಮಾಣ ವೇದಿಕೆ ಮತ್ತು ಭಾರತ ಯಾತ್ರಾ ಕೇಂದ್ರ ಜಂಟಿಯಾಗಿ ನಗರದ ಚಿತ್ರಕಲಾ ಪರಿಷತ್‌ನಲ್ಲಿ ಭಾನುವಾರ ಆಯೋಜಿಸಿದ್ದ ರಾಮಕೃಷ್ಣ ಹೆಗಡೆಯವರ 95ನೇ ಜನ್ಮದಿನಾಚರಣೆಯಲ್ಲಿ ಸಾಹಿತಿ ಗೊ.ರು. ಚನ್ನಬಸಪ್ಪ ಅವರಿಗೆ ‘ರಾಮಕೃಷ್ಣ ಹೆಗಡೆ ಪ್ರಶಸ್ತಿ’ ಪ್ರದಾನ ಮಾಡಿ ಮಾತನಾಡಿದರು.

ಕುಟುಂಬ ರಾಜಕಾರಣದ ವ್ಯಾಮೋಹಕ್ಕೆ ಸಿಲುಕಬಾರದು ಎಂದು ಲೋಕನಾಯಕ ಜಯಪ್ರಕಾಶ್ ನಾರಾಯಣ್ ಮತ್ತು ಅವರ ಪತ್ನಿ ಮಕ್ಕಳಾಗದಂತೆ ಸ್ವಯಂ ನಿರ್ಬಂಧಿಸಿಕೊಂಡಿದ್ದರು. ಆಂಧ್ರಪ್ರದೇಶದ ಕಮ್ಯುನಿಸ್ಟ್ ನಾಯಕ ಉಚ್ಚಾಲಪಲ್ಲಿ ಸುಂದರಯ್ಯ ದಂಪತಿ ಕೂಡ ಅದೇ ಮಾರ್ಗ ಅನುಸರಿಸಿದ್ದರು. ಆದರೆ, ರಾಮಕೃಷ್ಣ ಹೆಗಡೆ ಅವರು ಮಕ್ಕಳಿದ್ದರೂ, ಅವರನ್ನು ರಾಜಕಾರಣಕ್ಕೆ ತರದೇ ಕುಟುಂಬ ರಾಜಕೀಯವನ್ನು ಮೀರಿ ಮುನ್ನಡೆದರು ಎಂದು ಸ್ಮರಿಸಿದರು.

ನಿಗರ್ವಿ, ಜನಪರ ಮತ್ತು ಅಹಂಕಾರವಿಲ್ಲದ ನಡವಳಿಕೆಯಿಂದಲೇ ಹೆಗಡೆ ಜನಾನುರಾಗಿ ನಾಯಕರಾಗಿ ಬೆಳೆದಿದ್ದರು. ಡಿ. ದೇವರಾಜ ಅರಸು ಮತ್ತು ಹೆಗಡೆ ಅವರ ಆಡಳಿತದ ಕಾಲದಲ್ಲಿ ಕಡತಗಳ ವಿಲೇವಾರಿಗೆ ದರ ನಿಗದಿಸುವ ಪರಿಪಾಠ ಇರಲಿಲ್ಲ. ಅವರಿಬ್ಬರೂ ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾಗ ಪ್ರಜಾಪ್ರಭುತ್ವ ವ್ಯವಸ್ಥೆಯ ದಿಕ್ಸೂಚಿಯಂತೆ ಕೆಲಸ ಮಾಡಿದ್ದರು ಎಂದರು.

ಕ್ರೂರಿಗಳಂತೆ ವರ್ತಿಸಬಾರದು: ‘ಚಾಮರಾಜನಗರದಲ್ಲಿ ಆಮ್ಲಜನಕದ ಕೊರತೆಯಿಂದ 31 ಮಂದಿ ಮೃತಪಟ್ಟ ಘಟನೆಯನ್ನು ಎಲ್ಲರೂ ಮೂರು ದಿನಗಳಲ್ಲೇ ಮರೆತುಬಿಟ್ಟೆವು. ಸಾಕಿದ್ದ ನಾಯಿ ಸತ್ತರೆ ಮೂರು ದಿನ ಅಳುತ್ತೇವೆ. 31 ಜನರ ಸಾವಿಗೆ ಬೆಲೆ ಇಲ್ಲದಂತೆ ವರ್ತಿಸಲಾಯಿತು. ಆಳುವವರು ಕ್ರೂರಿಗಳಾಗಬಾರದು’ ಎಂದು ರಮೇಶ್ ಕುಮಾರ್ ಹೇಳಿದರು.

ಒಗ್ಗಟ್ಟಿನ ಕೊರತೆ: ಅಧ್ಯಕ್ಷತೆ ವಹಿಸಿದ್ದ ಚಿತ್ರಕಲಾ ಪರಿಷತ್ ಅಧ್ಯಕ್ಷ ಡಾ.ಬಿ. ಎಲ್.ಶಂಕರ್ ಮಾತನಾಡಿ, ‘ಒಗ್ಗಟ್ಟಿನ ಕೊರತೆಯಿಂದ ಜನತಾ ಪರಿವಾರಕ್ಕೆ ಹಿನ್ನಡೆಯಾಯಿತು. ಜನತಾ ಪರಿವಾರದ ನಾಯಕರು ಒಗ್ಗಟ್ಟಿನಿಂದ ಇದ್ದಿದ್ದರೆ ಎಚ್.ಡಿ. ದೇವೇಗೌಡರು ಪೂರ್ಣಾವಧಿಗೆ ಪ್ರಧಾನಿ ಹುದ್ದೆಯಲ್ಲಿರುತ್ತಿದ್ದರು. ರಾಮಕೃಷ್ಣ ಹೆಗಡೆ ಅವರೂ ಪ್ರಧಾನಿಯಾಗುತ್ತಿದ್ದರು’ ಎಂದರು.

ಚಿತ್ರಕಲಾ ಪರಿಷತ್‌ನಲ್ಲಿ ಭಾನುವಾರ ಆಯೋಜಿಸಿದ್ದ ರಾಮಕೃಷ್ಣ ಹೆಗಡೆಯವರ 95ನೇ ಜನ್ಮದಿನಾಚರಣೆಯಲ್ಲಿ ಶಾಸಕ ಕೆ.ಆರ್. ರಮೇಶ್ ಕುಮಾರ್ ಅವರು ಸಾಹಿತಿ ಗೊ.ರು. ಚನ್ನಬಸಪ್ಪ ಅವರಿಗೆ ‘ರಾಮಕೃಷ್ಣ ಹೆಗಡೆ ಪ್ರಶಸ್ತಿ’ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ನಿರ್ದೇಶಕ ಟಿ.ಎಸ್.ಸೀತಾರಾಂ, ಜೆಡಿಯು ಮುಖಂಡ ಡಾ.ಎಂ.ಪಿ. ನಾಡಗೌಡ, ಭಾರತ ಯಾತ್ರಾ ಕೇಂದ್ರದ ಕೆ.ವಿ. ನಾಗರಾಜಮೂರ್ತಿ, ಚಿತ್ರಕಲಾ ಪರಿಷತ್ ಉಪಾಧ್ಯಕ್ಷ ಟಿ. ಪ್ರಭಾಕರ್, ಹೆಗಡೆಯವರ ಮಗಳು ಮಮತಾ ನಿಚ್ಚಾನಿ, ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಹಾಗೂ ಚಿತ್ರಕಲಾ ಪರಿಷತ್ ಅಧ್ಯಕ್ಷ ಡಾ.ಬಿ.ಎಲ್.ಶಂಕರ್ ಇದ್ದರು – ಪ್ರಜಾವಾಣಿ ಚಿತ್ರ

ಗ್ರಾಮಗಳಿಗೆ ಶಕ್ತಿ ತುಂಬಬೇಕು

ಪ್ರಶಸ್ತಿ ಪುರಸ್ಕೃತ ಗೊ.ರು. ಚನ್ನಬಸಪ್ಪ ಅವರು, ‘ಸ್ವಾವಲಂಬಿ ಮತ್ತು ಆತ್ಮಗೌರವ ಇರುವ ಭಾರತ ನಿರ್ಮಿಸಲು, ಗ್ರಾಮ ಭಾರತವನ್ನು ಸಶಕ್ತಗೊಳಿಸಲು ಎಲ್ಲರೂ ಕೈಜೋಡಿಸಬೇಕಿದೆ’ ಎಂದರು.

ಸ್ವಗ್ರಾಮ ಗೊಂಡೇದಹಳ್ಳಿಯನ್ನು ಸಶಕ್ತವಾಗಿ ರೂಪಿಸಿದ ಮಾದರಿಯನ್ನು ದೇಶದ ಇತರ ಗ್ರಾಮಗಳಿಗೂ ತಲುಪಿಸಲು ಯೋಜನೆಯೊಂದನ್ನು ರೂಪಿಸಲಾಗುತ್ತಿದೆ ಎಂದು ಹೇಳಿದರು.

‘ಹಳೆಯ ತಪ್ಪು ಮಾಡಿದ ಬಿಎಸ್‌ವೈ’

‘ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಹಳೆಯ ತಪ್ಪುಗಳ ಬಗ್ಗೆ ಎಚ್ಚರಿಸಿದ್ದೆ. ಅವರು ಆ ದಿನ ಸಹಮತ ವ್ಯಕ್ತಪಡಿಸಿದ್ದರು. ಮತ್ತೆ ಮುಖ್ಯಮಂತ್ರಿಯಾದ ಬಳಿಕ ಮರೆತರು. ಹೀಗಾಗಿ ಪುನಃ ಅದೇ ತಪ್ಪು ಮಾಡಿ, ಈ ಸ್ಥಿತಿಗೆ ಬಂದಿದ್ದಾರೆ’ ಎಂದು ರಮೇಶ್ ಕುಮಾರ್ ಹೇಳಿದರು.

ಆರೋಪಿಗಳನ್ನು 10 ದಿನ ಪೊಲೀಸರ ವಶಕ್ಕೆ ನೀಡಿದ ನ್ಯಾಯಾಲಯ

ಅತ್ಯಾಚಾರ; ತೀವ್ರಗೊಂಡ ತನಿಖೆ

ಪ್ರಜಾವಾಣಿ ವಾರ್ತೆ

ಮೈಸೂರು: ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ ಐವರು ಆರೋಪಿಗಳ ತನಿಖೆ ತೀವ್ರಗೊಂಡಿದೆ. ಇಲ್ಲಿನ 3ನೇ ಜೆಎಂಎಫ್‌ಸಿ ನ್ಯಾಯಾಲಯ ಇವರನ್ನು 10 ದಿನ ಪೊಲೀಸ್ ವಶಕ್ಕೆ ನೀಡಿದೆ.

ಆರೋಪಿಗಳಿಂದ ಕೂದಲು, ಚರ್ಮ ಮೊದಲಾದ ಮಾದರಿ ಪಡೆದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ತನಿಖೆ ವೇಳೆ ಒಬ್ಬಾತ ತಂಡದಲ್ಲಿ 7 ಮಂದಿ ಇರುವುದಾಗಿ ಹೇಳಿದ್ದು, ಆತನ ಪತ್ತೆಗೆ ಪೊಲೀಸರ ತಂಡ ತಮಿಳುನಾಡಿಗೆ ತೆರಳಿದೆ.

‘ಪೊಲೀಸರು ಮಧ್ಯರಾತ್ರಿ ಏಕಾಏಕಿ ಮನೆಗೆ ನುಗ್ಗಿ ಮಗನನ್ನು ಎಳೆದುಕೊಂಡು ಹೋದರು. ಕೂಲಿ ಕೆಲಸ ಮಾಡಿ ಕುಟುಂಬ ನಿರ್ವಹಣೆ ಮಾಡುತ್ತಿದ್ದ ಆತನ ಬಂಧನದಿಂದ ದಿಕ್ಕು ತೋಚದಂತಾಗಿದೆ’ ಎಂದು ತಮಿಳುನಾಡಿನ ತಾಳವಾಡಿಯಲ್ಲಿ ಆರೋಪಿಯೊಬ್ಬನ ತಾಯಿ ಕಣ್ಣೀರು ಹಾಕಿದ್ದಾರೆ.

ಮತ್ತೊಬ್ಬ ಆರೋಪಿಯ ಕುಟುಂಬದವರು ಮನೆಗೆ ಬೀಗ ಹಾಕಿ ಪರಾರಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆರೋಪಿಗಳಲ್ಲಿ ಬಾಲ ಆರೋಪಿಗಳೂ ಇದ್ದು, ಅವರ ವಯಸ್ಸಿನ ದೃಢೀಕರಣ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಹೆಣ್ಣು, ಹಣದ ಚಪಲ: ಬಂಧಿತರ ಪೈಕಿ ಇಬ್ಬರು ಆರೋಪಿಗಳು ಮಹಿಳೆಯರನ್ನು ವಿಕೃತವಾಗಿ ಹಿಂಸಿಸುತ್ತಿದ್ದರು. ಉಳಿದವರು ಹಣ, ಒಡವೆ ದರೋಡೆ ಮಾಡುತ್ತಿದ್ದ ಅಂಶ ವಿಚಾರಣೆ ವೇಳೆ ಗೊತ್ತಾಗಿದೆ. ಅತ್ಯಾಚಾರದ ವಿಡಿಯೊ ಮಾಡಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ಹಲವು ಮಂದಿ ಗೂಗಲ್‌ಪೇ ಮೂಲಕ ಹಣ ಪಾವತಿಸುತ್ತಿದ್ದರು. ಆರೋಪಿಗಳ ವಿರುದ್ಧ ಗಂಧದ ಮರ ಕಳವು ಹಾಗೂ ಕೊಲೆ ಪ್ರಕರಣಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ ಎಂದು ಮೂಲಗಳು ತಿಳಿಸಿವೆ.

‘ಹಗಲಿನಲ್ಲಿ ನಿದ್ರಿಸುತ್ತಿದ್ದ ಆರೋಪಿಗಳು ರಾತ್ರಿ ವೇಳೆ ಕಳ್ಳತನ, ದರೋಡೆಗೆ ಇಳಿಯುತ್ತಿದ್ದರು. ತಾಳವಾಡಿ ಸೇರಿದಂತೆ ತಮಿಳುನಾಡಿನ ಇತರೆ ಭಾಗಗಳಲ್ಲಿ ಸಣ್ಣಪುಟ್ಟ ಕಳ್ಳತನ ಮಾಡುತ್ತಿದ್ದರು’ ಎಂದು ತಾಳವಾಡಿ ನಿವಾಸಿಯೊಬ್ಬರು ಹೇಳುತ್ತಾರೆ.

ಪ್ರವೀಣ್ ಸೂದ್ ಸೂಚನೆ: ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದು, ಸಾಮೂಹಿಕ ಅತ್ಯಾಚಾರ ಹಾಗೂ ದರೋಡೆಯಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಲು ಸೂಚಿಸಿದ್ದಾರೆ.

‘ಅಪರಾಧ ಪತ್ತೆ ಕಾರ್ಯಕ್ಕಿಂತ ನಡೆಯದಂತೆ ಎಚ್ಚರ ವಹಿಸಬೇಕಾದ್ದು ಮುಖ್ಯ. ಗಸ್ತು ಹಾಗೂ ಭದ್ರತೆ ಹೆಚ್ಚಿಸಬೇಕು, ಹಳೆ ಆರೋಪಿಗಳ ಮಾಹಿತಿ ಸಂಗ್ರಹಿಸಬೇಕು’ ಎಂದು ನಿರ್ದೇಶನ ನೀಡಿದ್ದಾರೆ.

ಅತ್ಯಾಚಾರ ಆರೋಪಿ ಪೊಲೀಸ್ ಠಾಣೆಯಲ್ಲೇ ಆತ್ಮಹತ್ಯೆ

ದೇವಿಂದ್ರ ಸಂಗೋಗಿ

ವಿಜಯಪುರ: ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಪೊಲೀಸರು ಬಂಧಿಸಿದ್ದ ಆರೋಪಿ ದೇವಿಂದ್ರ ಭೀಮರಾಯ ಸಂಗೋಗಿ (37) ಸಿಂದಗಿ ಪೊಲೀಸ್ ಠಾಣೆಯಲ್ಲಿ ಭಾನುವಾರ ಬೆಳಿಗ್ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮೃತನಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಮತ್ತು ತಾಯಿ ಇದ್ದಾರೆ.

ಈ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ. ಆನಂದಕುಮಾರ್, ‘ಆರೋಪಿಯನ್ನು ಸಿಂದಗಿ ಠಾಣೆ ಪೊಲೀಸರು ಶನಿವಾರ ತಡರಾತ್ರಿ ಬಂಧಿಸಿದ್ದರು. ಭಾನುವಾರ ನಸುಕಿನಲ್ಲಿ ಶೌಚಾಲಯಕ್ಕೆ ತೆರಳಿದ್ದ ಆರೋಪಿ ನೇಣು ಹಾಕಿಕೊಂಡಿದ್ದಾನೆ. ಚಿಕಿತ್ಸೆಗಾಗಿ ವಿಜಯಪುರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಆರೋಪಿ ಮೃತಪಟ್ಟಿದ್ದಾನೆ’ ಎಂದರು.

‘ನೇಣು ಹಾಕಿಕೊಂಡಿದ್ದರಿಂದಲೇ ಆರೋಪಿ ಮೃತಪಟ್ಟಿದ್ದಾನೆ. ಪೊಲೀಸರ ಕಿರುಕುಳದಿಂದ ಆರೋಪಿ ಮೃತಪಟ್ಟಿಲ್ಲ’ ಎಂದು ಸ್ಪಷ್ಟಪಡಿಸಿದ ಅವರು, ‘ಪೊಲೀಸ್ ಠಾಣೆಯಲ್ಲಿಯೇ ಸಾವಿಗೀಡಾದ ಇಂಥ ಪ್ರಕರಣಗಳನ್ನು ಸಿಐಡಿ ತನಿಖೆಗೆ ವಹಿಸಲಾಗುತ್ತದೆ. ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಲಾಗುವುದು’ ಎಂದರು.

ಈ ನಡುವೆ, ಮೃತನ ಪೋಷಕರು, ಸಂಬಂಧಿಕರು ಪೊಲೀಸ್ ಠಾಣೆ ಎದುರಿಗೆ ಪ್ರತಿಭಟನೆ ನಡೆಸಿ, ದೇವಿಂದ್ರ ಸಾವಿಗೆ ಪೊಲೀಸರ ಕಿರುಕುಳ ಕಾರಣ ಎಂದು ಆರೋಪಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	118.03	3,766	9,587
ಹಾರಂಗಿ	2,859	2,857.34	1,558	1,600
ಕಬಿನಿ	2,284	2,281.22	5,500	5,000
ಹೇಮಾವತಿ	2,922	2,917.44	2,821	5,030
ಲಿಂಗನಮಕ್ಕಿ	1,819	1,812.60	8,497	-
ಸೂಪಾ (ಮೀ)	564	554.68	3,090	3,950
ಮಾಣಿ	594.36	585.74	1,746	229
ತುಂಗಭದ್ರಾ	1,633	1,632.30	11,572	10,780
ಮಲಪ್ರಭಾ	2,079.50	2,078.30	894	894
ಘಟಪ್ರಭಾ	2,175	2,175	1,840	1,840
ಭದ್ರಾ	186	185	3,547	3,246
ಆಲಮಟ್ಟಿ (ಮೀ)	519.60	519.60	4,460	4,460
ನಾರಾಯಣಪುರ (ಮೀ)	492.25	491.79	1,980	7,160

* ನೆಲಮಟ್ಟದಿಂದ

ಮಹಿಳೆಯರು, ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ನಿಯಂತ್ರಣಕ್ಕಾಗಿ ಸಮಿತಿ

ಕಪಾಟು ಸೇರಿದ ತಜ್ಞರ ಸಮಿತಿ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ವಿಧಾನ ಪರಿಷತ್‌ನ ಆಗಿನ ಸದಸ್ಯ ವಿ.ಎಸ್. ಉಗ್ರಪ್ಪ ನೇತೃತ್ವದ ಸದಸ್ಯರ ತಜ್ಞರ ಸಮಿತಿಯು ಸುದೀರ್ಘ ಕಾಲ ಅಧ್ಯಯನ ನಡೆಸಿ ಸಲ್ಲಿಸಿದ್ದ ವರದಿಯು ಮೂರು ವರ್ಷಗಳಿಂದ ಕಪಾಟು ಸೇರಿದೆ.

ಬಹುತೇಕ ಜಿಲ್ಲೆಗಳಿಗೆ ಭೇಟಿ ನೀಡಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ಮಾಹಿತಿ ಸಂಗ್ರಹಿಸಿದ್ದ ಸಮಿತಿ, ಬಹು ಆಯಾಮಗಳಲ್ಲಿ ಅಧ್ಯಯನ ನಡೆಸಿತ್ತು. ಮೂರು ವರ್ಷಗಳಿಗೂ ಹೆಚ್ಚು ಕಾಲ ಅಧ್ಯಯನ ನಡೆಸಿ 2018ರ ಮಾರ್ಚ್ 23ರಂದು 6,017 ಪುಟಗಳ ವರದಿಯನ್ನು ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿತ್ತು.

1,200 ಪುಟಗಳ ಮುಖ್ಯ ವರದಿ ಮತ್ತು 11 ಸಂಪುಟಗಳ ಅನುಬಂಧಗಳೊಂದಿಗೆ ವಿಸ್ತೃತ ವರದಿಯಲ್ಲಿ ಹಲವು ಶಿಫಾರಸುಗಳನ್ನೂ ಮಾಡಿತ್ತು.

ತಾಲ್ಲೂಕಿಗೊಂದು ವಿಶೇಷ ಪೊಲೀಸ್ ಠಾಣೆ ತೆರೆಯುವುದು, ಆರೋಪಿಗಳು ಖುಲಾಸೆಯಾದರೆ ತನಿಖಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವುದು, ಪ್ರೇಮ ವಿವಾಹಕ್ಕೆ ಅಡ್ಡಿಪಡಿಸಿರುವ ಪೋಷಕರಿಗೆ ಶಿಕ್ಷೆ ವಿಧಿಸಲು ಕಾನೂನು ರೂಪಿಸುವುದು, ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೊಳಗಾದವರ ಆಸ್ತಿ ಜಪ್ತಿ ಮತ್ತು ಮತದಾನದ ಹಕ್ಕು ರದ್ದುಗೊಳಿಸುವುದು ಸೇರಿದಂತೆ 135 ಶಿಫಾರಸುಗಳು ವರದಿಯಲ್ಲಿದ್ದವು.

ಮೋಟಮ್ಮ

ಮೂಲೆ ಸೇರಿದ ವರದಿ: ವರದಿ ಸ್ವೀಕರಿಸಿದ್ದ ಸಿದ್ದರಾಮಯ್ಯ, ರಾಜ್ಯ ಸರ್ಕಾರದ ಹಂತದಲ್ಲಿ ಕೈಗೊಳ್ಳಬಹುದಾದ ಕ್ರಮಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಲಾಗುವುದು. ಕೇಂದ್ರ ಸರ್ಕಾರದ ಹಂತದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡಲಾಗುವುದು ಎಂಬ ಭರವಸೆ ನೀಡಿದ್ದರು.

‘2018ರ ವಿಧಾನಸಭಾ ಚುನಾವಣೆ ಬಳಿಕ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂತು. ಆಗಿನ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರನ್ನು ಭೇಟಿಮಾಡಿ ವರದಿ ಜಾರಿಗೆ ಒತ್ತಾಯಿಸಿದ್ದೆವು. ನಂತರ ಸಮ್ಮಿಶ್ರ ಸರ್ಕಾರ ಪತನವಾಗಿ, ಬಿಜೆಪಿ ಸರ್ಕಾರ ಬಂತು. ಯಾವ ಪ್ರಗತಿಯೂ ಆಗಿಲ್ಲ’ ಎಂದು ಸಮಿತಿಯ ಸದಸ್ಯೆಯಾಗಿದ್ದ ಮೋಟಮ್ಮ ‘ಪ್ರಜಾವಾಣಿ’ಗೆ ತಿಳಿಸಿದರು.

ಉಗ್ರಪ್ಪ ನೇತೃತ್ವದ ಸಮಿತಿಯು ಮಹಿಳೆಯರು ಮತ್ತು ಮಕ್ಕಳ ರಕ್ಷಣೆ ವಿಚಾರದಲ್ಲಿ ರಾಜ್ಯದಲ್ಲಿ ಸಂಚಲನ ಮೂಡಿಸಿತ್ತು. ದೌರ್ಜನ್ಯ ಪ್ರಕರಣಗಳು ನಡೆದರೆ, ತನಿಖೆಯಲ್ಲಿ ಲೋಪವಾದರೆ ಸಮಿತಿ ವಿವರಣೆ ಕೇಳುತ್ತದೆ ಎಂಬ ಭಯ ಅಧಿಕಾರಿಗಳಲ್ಲಿ ಇತ್ತು. ಈಗ ಯಾವ ಹೆದರಿಕೆಯೂ ಇಲ್ಲ. ತಜ್ಞರ ಸಮಿತಿಯ ಮಾದರಿಯಲ್ಲೇ ಶಾಶ್ವತವಾದ ಸಮಿತಿಯೊಂದನ್ನು ಅಸ್ತಿತ್ವಕ್ಕೆ ತರಬೇಕು. ತಜ್ಞರ ಸಮಿತಿಯ ಶಿಫಾರಸುಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು ಎಂದು ಅವರು ಆಗ್ರಹಿಸಿದರು.

ಈ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರ ಮೊಬೈಲ್ ಸಂಖ್ಯೆ ‘ಸ್ವಿಚ್ಡ್ ಆಫ್’ ಆಗಿತ್ತು.

‘ಶ್ರಮ ವ್ಯರ್ಥ ಆಗದಿರಲಿ’

ವಿ.ಎಸ್.ಉಗ್ರಪ್ಪ

‘ನಮ್ಮ ಸಮಿತಿಯಲ್ಲಿದ್ದ ಎಲ್ಲರೂ ಶ್ರಮವಹಿಸಿ ಅಧ್ಯಯನ ನಡೆಸಿ, ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಿದ್ದೆವು. ಮಹಿಳೆಯರು, ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ನೆರವಾಗುವ ಶಿಫಾರಸುಗಳು ವರದಿಯಲ್ಲಿವೆ. ಅವುಗಳನ್ನು ಅನುಷ್ಠಾನಕ್ಕೆ ತರುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಸಮಿತಿಯ ಸದಸ್ಯರ ಶ್ರಮ ವ್ಯರ್ಥ ಆಗಬಾರದು’ ಎಂದು ತಜ್ಞರ ಸಮಿತಿಯ ಅಧ್ಯಕ್ಷರಾಗಿದ್ದ ವಿ.ಎಸ್. ಉಗ್ರಪ್ಪ ಪ್ರತಿಕ್ರಿಯಿಸಿದರು.

ಸಮಿತಿಯಲ್ಲಿ ಯಾರಿದ್ದರು?

ವಿಧಾನ ಪರಿಷತ್ ಸದಸ್ಯರಾಗಿದ್ದ ಎಂ.ಸಿ.ನಾಣಯ್ಯ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ನೇಮಿಸಿ 2014ರಲ್ಲಿ ಆದೇಶ ಹೊರಡಿಸಲಾಗಿತ್ತು. 2015ರಲ್ಲಿ ನಾಣಯ್ಯ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ನಂತರ ವಿ.ಎಸ್. ಉಗ್ರಪ್ಪ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಸಮಿತಿಯನ್ನು ಪುನರ್ ರಚಿಸಲಾಗಿತ್ತು.

80 ದಿನ ಅಧಿವೇಶನಕ್ಕೆ ₹ 98.80 ಕೋಟಿ ಖರ್ಚು

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಈವರೆಗೆ 9 ಬಾರಿ ನಡೆದಿರುವ ವಿಧಾನಮಂಡಲ ಅಧಿವೇಶನಕ್ಕೆ ₹ 98.80 ಕೋಟಿ ಖರ್ಚಾಗಿದೆ. ಮಾಹಿತಿ ಹಕ್ಕು ಕಾಯ್ದೆಯ ಅರ್ಜಿಗೆ ಮುಖಂಡ ಭೀಮಪ್ಪ ಗಡಾದ ಅವರಿಗೆ ಈ ಮಾಹಿತಿ ನೀಡಲಾಗಿದೆ.

2006ರಿಂದ 2018ರವರೆಗೆ 80 ದಿನ ಅಧಿವೇಶನ ನಡೆದಿದೆ. ನಿತ್ಯ ಸರಾಸರಿ ₹ 1.20 ಕೋಟಿ ವೆಚ್ಚ ಮಾಡಿರುವುದು ಸರ್ಕಾರದಿಂದ ಒದಗಿಸಿರುವ ದಾಖಲೆಗಳಿಂದ ಗೊತ್ತಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸುವರ್ಣ ವಿಧಾನಸೌಧದ ಉದ್ಘಾಟನೆಗೆ ₹ 8 ಕೋಟಿ, ಪ್ರವಾಸಿಮಂದಿರದಲ್ಲಿ ರಾಷ್ಟ್ರಪತಿ ಆಸನಕ್ಕಾಗಿ ₹36 ಲಕ್ಷ ವೆಚ್ಚ, ಪ್ರವಾಸಿಮಂದಿರದ ಉದ್ಯಾನ ಅಭಿವೃದ್ಧಿಗೆ ₹ 31 ಲಕ್ಷ ಖರ್ಚು ಮಾಡಲಾಗಿದೆ.

ಅಧಿವೇಶನದಲ್ಲಿ ಪಾಲ್ಗೊಳ್ಳುವ ಪ್ರತಿ ಶಾಸಕರಿಗೆ ₹ 2ಸಾವಿರ ದಿನಭತ್ಯೆ, ಕ್ಷೇತ್ರಗಳಿಂದ ಇಲ್ಲಿಗೆ ಬರಲು ಪ್ರತಿ ಕಿ.ಮೀ.ಗೆ ₹25 ಪ್ರಯಾಣ ಭತ್ಯೆ ನೀಡಲಾಗಿದೆ. ಹುಬ್ಬಳ್ಳಿಯಲ್ಲಿ ವಾಸ್ತವ್ಯ ಹೂಡಿದ್ದ ಶಾಸಕರಿಗೆ ನಿತ್ಯ ₹ 5 ಸಾವಿರ, ನಗರದಲ್ಲಿ ತಂಗಿದ್ದವರಿಗೆ ನಿತ್ಯ ₹ 2,500 ಭತ್ಯೆ ಕೊಡಲಾಗಿದೆ. 2017ರ ಅಧಿವೇಶನದ ವೇಳೆ ಪ್ರವಾಸಿಮಂದಿರದಲ್ಲಿ ವಾಸ್ತವ್ಯ ಹೂಡಿದ್ದ ಮುಖ್ಯಮಂತ್ರಿ, ನಾಲ್ವರು ಸಚಿವರು ಹಾಗೂ ಸಿಬ್ಬಂದಿ ಊಟ–ಉಪಾಹಾರಕ್ಕಾಗಿ ₹ 24 ಲಕ್ಷ ವ್ಯಯಿಸಲಾಗಿದೆ.

ವಿರುಪಾಪುರ ಗಡ್ಡೆ: ಮತ್ತೆ ಅನಧಿಕೃತ ರೆಸಾರ್ಟ್

• ಎನ್.ವಿಜಯ್

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ವಿರುಪಾಪುರ ಗಡ್ಡೆಯ ಸುತ್ತಮುತ್ತಲಿನ ಕಂದಾಯ ಭೂಮಿಗಳಲ್ಲಿ ಪರವಾನಗಿ ಪಡೆಯದೇ 16 ರೆಸಾರ್ಟ್‌ಗಳನ್ನು ನಿರ್ಮಿಸಲಾಗಿದೆ.

ಹಿಂದೆ ನಿರ್ಮಾಣಗೊಂಡಿದ್ದ ಎಲ್ಲ ರೆಸಾರ್ಟ್‌ಗಳನ್ನು ತೆರವುಗೊಳಿಸಲಾಗಿತ್ತು. ಆದರೂ ಕೆಲವರು ರಾಜಕೀಯ ಪ್ರಭಾವ ಬಳಸಿ ಸಾಣಾಪುರ, ಸೇತುವೆ, ಹನುಮನಹಳ್ಳಿ, ಚಿಕ್ಕರಾಂಪುರ, ಅಂಜನಳ್ಳಿ, ರಂಗಾಪುರ ಗ್ರಾಮದಲ್ಲಿ ಮತ್ತೆ ರೆಸಾರ್ಟ್ ನಿರ್ಮಿಸಿದ್ದಾರೆ.

‘ಆನೆಗುಂದಿ ಭಾಗದ ಸುತ್ತಮುತ್ತಲಿನ ಎಲ್ಲ ಗ್ರಾಮಗಳು ಹಂಪಿ ವಿಶ್ವ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತವೆ. ಪ್ರಾಧಿಕಾರದ ಪರವಾನಗಿ ಇಲ್ಲದೇ ಕಟ್ಟಡ ನಿರ್ಮಾಣ, ವ್ಯಾಪಾರಕ್ಕೆ ಅವಕಾಶವಿಲ್ಲ ಎಂಬ ನಿಯಮ ಇದೆ. ಈ ನಿಯಮವನ್ನು ಗಾಳಿಗೆ ತೂರಲಾಗಿದೆ. ರೆಸಾರ್ಟ್ ನಿರ್ಮಾಣಕ್ಕೆ ಕೃಷಿಕರು ಭೂಮಿಯನ್ನು ಗುತ್ತಿಗೆ ರೂಪದಲ್ಲಿ ನೀಡಿದ್ದಾರೆ’ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

‘ಹಿಂದೆ ಕೆಲ ಕೃಷಿಕರು ಭೂಮಿಯನ್ನು ವಾರ್ಷಿಕ ₹50 ರಿಂದ ₹60 ಸಾವಿರಕ್ಕೆ ಗುತ್ತಿಗೆ ನೀಡುತ್ತಿದ್ದರು. ಈಗ ₹3 ಲಕ್ಷದವರೆಗೆ ಗುತ್ತಿಗೆ ನೀಡಿದ್ದು, 5 ರಿಂದ 10 ವರ್ಷಗಳವರೆಗೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ’ ಎಂದೂ ಗ್ರಾಮಸ್ಥರು ತಿಳಿಸಿದ್ದಾರೆ.

ಪರವಾನಗಿಯೇ ಇಲ್ಲ: ಉಳುಮೆ ಮಾಡುವ ಭೂಮಿಯಲ್ಲಿ ವ್ಯಾಪಾರ-ವಹಿವಾಟು ನಡೆಸಲು, ಪರವಾನಗಿ ಪಡೆಯಬೇಕು. ಜೊತೆಗೆ ಉಳುಮೆಗೆ ಈ ಭೂಮಿ ಸೂಕ್ತವಲ್ಲ ಎಂದು (ಎನ್‌ಎ) ಸರ್ಟಿಫಿಕೇಟ್ ಪಡೆದಿರಬೇಕು. ಈ ಭಾಗದಲ್ಲಿ ನಿರ್ಮಾಣವಾದ ರೆಸಾರ್ಟ್‌ಗಳಿಗೆ ಪರವಾನಗಿಯೇ ಇಲ್ಲ ಎನ್ನಲಾಗಿದೆ.

ಅಧಿಕಾರಿಗಳ ಸಾಥ್: ’ರೆಸಾರ್ಟ್ ನಿರ್ಮಾಣದ ನಂತರ ವಿದ್ಯುತ್ ಸೌಲಭ್ಯಕ್ಕೆ ಸಂಬಂಧಪಟ್ಟ ಪಿಡಿಒಗಳಿಂದ ಎನ್‌ಒಸಿ ಸಹ ಪಡೆಯಲಾಗಿದೆ. ಈ ಪತ್ರದ ಆಧಾರದಲ್ಲಿ ಜೆಸ್ಕಾಂ ಅಧಿಕಾರಿಗಳು ವಿದ್ಯುತ್ ಸಂಪರ್ಕ ನೀಡುತ್ತಿದ್ದಾರೆ’ ಎಂಬ ಆರೋಪಗಳಿವೆ.

ಗಂಗಾವತಿ ಮಾರ್ಗವಾಗಿ ತೆರಳುವ ಹನುಮನಹಳ್ಳಿ ಸಮೀಪ ಕಂದಾಯ ಭೂಮಿಯಲ್ಲಿ ನಿರ್ಮಿಸಲಾದ ರೆಸಾರ್ಟ್

ಸಾಣಾಪುರ ಭಾಗದ ಸುತ್ತಮುತ್ತ ಪರವಾನಗಿ ಪಡೆಯದ ರೆಸಾರ್ಟ್‌ಗಳಿಗೆ ತಾಲ್ಲೂಕು ಆಡಳಿತ ಮತ್ತು ಅರಣ್ಯ ಇಲಾಖೆ ವತಿಯಿಂದ ನೋಟಿಸ್ ನೀಡಲಾಗಿದೆ

ಯು.ನಾಗರಾಜ, ತಹಶೀಲ್ದಾರ್ ಗಂಗಾವತಿ

ಅನಧಿಕೃತ ರೆಸಾರ್ಟ್‌ಗಳಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಕೆಲ ಕಂದಾಯ ಭೂಮಿ ವಾರಸುದಾರರು ಪಹಣಿಗಳನ್ನು ನೀಡಿದ್ದು, ಜಂಟಿ ಸಮೀಕ್ಷೆ ನಡೆಸಲಾಗುವುದು

ಶಿವರಾಜ ಮೇಟಿ, ಅರಣ್ಯ ಸಂರಕ್ಷಣಾ ಅಧಿಕಾರಿ, ಗಂಗಾವತಿ

ಉಗ್ರರಿಂದ ರಾಕೆಟ್ ದಾಳಿ– ಐಎಸ್ ಮೇಲೆ ಅಮೆರಿಕದ ಡ್ರೋನ್ ಕಾರ್ಯಾಚರಣೆ

ದಾಳಿ–ಪ್ರತಿದಾಳಿಯ ಪ್ರತೀಕಾರ

ದೇಶ ತೊರೆಯುವುದಕ್ಕಾಗಿ ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣ ದಾಖಲೆಪತ್ರಗಳ ಪರಿಶೀಲನೆಗೆ ಹೋಗಿದ್ದ ದಂಪತಿಯ ಮಗುವನ್ನು ಲಾಲಿಸುತ್ತಿರುವ ಅಮೆರಿಕದ ನೌಕಾಪಡೆಯ ಸದಸ್ಯೆ –ಎಎಫ್‌ಪಿ ಚಿತ್ರ

ಕಾಬೂಲ್/ವಾಷಿಂಗ್ಟನ್ (ಎಪಿ/ರಾಯಿಟರ್ಸ್): ಅಫ್ಘಾನಿಸ್ತಾನದಲ್ಲಿ ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಉಗ್ರರ ದಾಳಿ ಮತ್ತು ಅದಕ್ಕೆ ಅಮೆರಿಕ ಸೈನಿಕರ ಪ್ರತಿದಾಳಿಯು ಮುಂದುವರಿದಿದೆ.

ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಾಯವ್ಯ ಪ್ರದೇಶದ ಮೇಲೆ ಭಾನುವಾರ ಸಂಜೆ ರಾಕೆಟ್ ದಾಳಿ ನಡೆದಿದೆ. ದಾಳಿಯಲ್ಲಿ ಮಗುವೊಂದು ಮೃತಪಟ್ಟಿದೆ.

ಅಫ್ಘಾನಿಸ್ತಾನವು ತಾಲಿಬಾನ್ ವಶವಾದ ನಂತರ ಅಮೆರಿಕವು ಅಲ್ಲಿಂದ ನಡೆಸುತ್ತಿರುವ ತೆರವು ಕಾರ್ಯಾಚರಣೆಯು ಅಂತಿಮ ಹಂತದಲ್ಲಿರುವಾಗ ಈ ದಾಳಿ ನಡೆದಿದೆ.

ವಾಹನವೊಂದರಲ್ಲಿ ಕುಳಿತಿದ್ದ ಐಎಸ್ ಉಗ್ರನೊಬ್ಬನ ಮೇಲೆ ಅಮೆರಿಕದ ಸೈನಿಕರು ಭಾನುವಾರ ಡ್ರೋನ್ ಮೂಲಕ ದಾಳಿ ನಡೆಸಿದ್ದಾರೆ. ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ದಾಳಿ ನಡೆಸುವ ಉದ್ದೇಶವನ್ನು ಉಗ್ರ ಹೊಂದಿದ್ದ ಎನ್ನಲಾಗಿದೆ.

ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಐ.ಎಸ್. ಉಗ್ರರು ಗುರುವಾರ ನಡೆಸಿದ್ದ ದಾಳಿಯಲ್ಲಿ 180 ಮಂದಿ ಮೃತಪಟ್ಟಿದ್ದರು. ಅಮೆರಿಕದ 13 ಸೈನಿಕರು ಕೂಡ ಬಲಿಯಾಗಿದ್ದರು. ಅದರ ಬಳಿಕ, ಐಎಸ್ ಮೇಲೆ ಅಮೆರಿಕವು ಭಾನುವಾರ ಎರಡನೇ ದಾಳಿಯನ್ನು ನಡೆಸಿದೆ.

ಅಫ್ಘಾನಿಸ್ತಾನದಲ್ಲಿ ಪರಿಸ್ಥಿತಿಯು ಅತ್ಯಂತ ಅಪಾಯಕಾರಿಯಾಗಿಯೇ ಇದೆ. ಒಂದೆರಡು ದಿನಗಳ ಒಳಗೆ ಉಗ್ರರು ಇನ್ನೊಂದು ದಾಳಿ ನಡೆಸುವುದು ಖಚಿತ ಎಂದು ಸೇನೆಯ ಅಧಿಕಾರಿಗಳು ಹೇಳಿದ್ದಾಗಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಶನಿವಾರ ಹೇಳಿದ್ದರು.

ಅಮೆರಿಕದ ಸೇನೆಯು ಹಿಂದಿರುಗಿದ ಬಳಿಕ ಐಎಸ್ ದಾಳಿಯು ತೀವ್ರಗೊಳ್ಳಲಿದೆ. ರಾಕೆಟ್ ಮತ್ತು ಸ್ಫೋಟಕ ತುಂಬಿದ ವಾಹನಗಳ ಮೂಲಕ ದಾಳಿ ನಡೆಯಬಹುದು ಎಂದು ಅಮೆರಿಕದ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಐಎಸ್ ಉಗ್ರನ ಮೇಲೆ ನಡೆದ ಡ್ರೋನ್ ದಾಳಿಯನ್ನು ದೇಶದ ಹೊರಗಿನಿಂದ ನಿರ್ವಹಿಸಲಾಗಿದೆ. ಉಗ್ರನ ಬಳಿ ಗಣನೀಯ ಪ್ರಮಾಣದಲ್ಲಿ ಸ್ಫೋಟಕ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುರುವಾರದ ದಾಳಿಗೆ ಪ್ರತೀಕಾರವಾಗಿ ಶುಕ್ರವಾರ ನಡೆಸಿದ ದಾಳಿಯಲ್ಲಿ ಐಎಸ್‌ನ ಇಬ್ಬರು ಉಗ್ರರು ಹತ್ಯೆಯಾಗಿದ್ದಾರೆ ಎಂದು ಅಮೆರಿಕ ಹೇಳಿದೆ. ಕಾಬೂಲ್‌ನ ಪೂರ್ವಕ್ಕೆ ಇರುವ ನಂಗರ್‌ಹರ್ ಪ್ರದೇಶದಲ್ಲಿ ಈ ದಾಳಿ ನಡೆದಿದೆ.

ತೆರೆದ ಬ್ಯಾಂಕು: ಅಫ್ಘಾನಿಸ್ತಾನದಲ್ಲಿರುವ ಖಾಸಗಿ ಬ್ಯಾಂಕುಗಳು ಭಾನುವಾರ ಕಾರ್ಯಾಚರಣೆ ಆರಂಭಿಸಿವೆ.

ಆದರೆ, ಹಣ ಹಿಂತೆಗೆತಕ್ಕೆ ಮಿತಿ ಹೇರಲಾಗಿದೆ. ಪ್ರತಿ ದಿನ 200 ಡಾಲರ್‌ಗಿಂತ (ಸುಮಾರು ₹15 ಸಾವಿರ) ಹೆಚ್ಚು ಹಣ ಹಿಂದಕ್ಕೆ ಪಡೆಯುವಂತಿಲ್ಲ. ಹಣ ಪಡೆಯಲು ಸಾಧ್ಯವಾಗಿಲ್ಲ ಎಂದು ಹಲವರು ದೂರಿದ್ದಾರೆ.

ನಾಲ್ಕು ತಿಂಗಳಿಂದ ಸಂಬಳ ಸಿಕ್ಕಿಲ್ಲ ಎಂದು ಸರ್ಕಾರಿ ನೌಕರರು ಹೇಳಿದ್ದಾರೆ.

ಜನಪದ ಗಾಯಕ ಫವಾದ್ ಅಂದ್ರಾಬಿ ಹತ್ಯೆ

ಅಫ್ಗನ್ ಜನಪದ ಗಾಯಕ ಫವಾದ್ ಅಂದ್ರಾಬಿ ಅವರನ್ನು ತಾಲಿಬಾನ್ ಸೈನಿಕರು ಹತ್ಯೆ ಮಾಡಿದ್ದಾರೆ ಎಂದು ಅವರ ಕುಟುಂಬ ಭಾನುವಾರ ತಿಳಿಸಿದೆ.

ಅಫ್ಗನ್‌ನಲ್ಲಿ ಮರಳಿ ಅಧಿಕಾರ ಪಡೆದಿರುವ ತಾಲಿಬಾನ್, ತನ್ನ ಹಿಂದಿನ ಆಡಳಿತವನ್ನೇ ಜಾರಿಗೊಳಿಸುವ ಆತಂಕ ಈ ಘಟನೆಯಿಂದ ಎದುರಾಗಿದೆ. ಅಮೆರಿಕವು ಅಫ್ಘಾನಿಸ್ತಾನ ತೊರೆಯುವ ಸ್ವಲ್ಪ ಸಮಯದ ಮುನ್ನ ಈ ಘಟನೆ ನಡೆದಿದೆ.

ಕಾಬೂಲ್‌ನಿಂದ ಉತ್ತರ ದಿಕ್ಕಿಗಿರುವ ಅಂದ್ರಾಬಿ ಕಣಿವೆಯಲ್ಲಿ ಶುಕ್ರವಾರ ಈ ಘಟನೆ ನಡೆದಿದೆ ಎಂದು ತಿಳಿದುಬಂದಿದೆ. ತಾಲಿಬಾನ್ ಪ್ರಾಬಲ್ಯಕ್ಕೆ ಬಂದ ಬಳಿಕ ಕಣಿವೆಯಲ್ಲಿ ಕೆಲವು ವಿದ್ಯಮಾನಗಳು ನಡೆದಿವೆ. ಕೆಲವು ಜಿಲ್ಲೆಗಳಲ್ಲಿ ಸೇನಾ ಹೋರಾಟಗಾರರು ತಾಲಿಬಾನ್ ಆಡಳಿತ ವಿರೋಧಿಸಿದ್ದಾರೆ.

ಸರ್ಕಾರ ರಚನೆಗೆ ಹೊಸ ವೇದಿಕೆ

ಅಫ್ಘಾನಿಸ್ತಾನದಲ್ಲಿ ಹೊಸ ಸರ್ಕಾರ ರಚನೆ ಸಂಬಂಧ ತಾಲಿಬಾನ್ ನಾಯಕರ ಜತೆಗೆ ಮಾತುಕತೆ ನಡೆಸಲು ವಿವಿಧ ನಾಯಕರನ್ನೊಳಗೊಂಡ ಹೊಸ ವೇದಿಕೆಯೊಂದು ರಚನೆಯಾಗಿದೆ. ಇಬ್ಬರು ಪ್ರಾದೇಶಿಕ ನಾಯಕರು ಸೇರಿದಂತೆ ಅಫ್ಗನ್ ನಾಯಕರ ತಂಡವು ತಾಲಿಬಾನ್ ಜೊತೆ ಮಾತುಕತೆಗೆ ಮುಂದಾಗಿದೆ. ಮುಂಬರುವ ವಾರಗಳಲ್ಲಿ ಮಾತುಕತೆ ನಡೆಸಲು ಉದ್ದೇಶಿಸಿದೆ.

ಈ ಗುಂಪಿನಲ್ಲಿರುವ ಉಜ್ಬೆಕ್ ಬುಡಕಟ್ಟು ನಾಯಕ ಅಬ್ದುಲ್ ರಶೀದ್ ದೋಸ್ತಮ್ ಮತ್ತು ಇತರರು ತಾಲಿಬಾನ್ ಸ್ವಾಧೀನವನ್ನು ವಿರೋಧಿಸಿದ್ದಾರೆ ಎಂದು ಬಾಲ್ಖ್ ಪ್ರಾಂತ್ಯದ ರಾಜ್ಯಪಾಲರಾಗಿದ್ದ ಮೊಹಮ್ಮದ್ ನೂರ್ ಅವರ ಪುತ್ರ ಖಾಲಿದ್ ನೂರ್ ಹೇಳಿದ್ದಾರೆ.

'ನಾವು ಸಾಮೂಹಿಕವಾಗಿ ಮಾತುಕತೆ ನಡೆಸಲು ಬಯಸುತ್ತೇವೆ. ಅಫ್ಘಾನಿಸ್ತಾನದ ಸಮಸ್ಯೆಯನ್ನು ನಮ್ಮಲ್ಲಿ ಒಬ್ಬರೇ ಪರಿಹರಿಸಲಾಗದು. ಆದ್ದರಿಂದ, ದೇಶದ ರಾಜಕೀಯ ಸಮುದಾಯವು ವಿಶೇಷವಾಗಿ, ಸಾಂಪ್ರದಾಯಿಕ ನಾಯಕರು, ಅಧಿಕಾರ ಹೊಂದಿರುವವರು ಈ ಪ್ರಕ್ರಿಯೆಯಲ್ಲಿ ಭಾಗಿಯಾಗುವುದು ಮುಖ್ಯ' ಎಂದು ತಿಳಿಸಿದ್ದಾರೆ.

ವಿಮಾನ ನಿಲ್ದಾಣ ವಶಕ್ಕೆ ತಾಲಿಬಾನ್ ಸಜ್ಜು

ಕಾಬೂಲ್ (ರಾಯಿಟರ್ಸ್/ಎಪಿ): ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್ ತೊರೆಯಲು ಅಮೆರಿಕ ಸಜ್ಜಾಗಿರುವ ಬೆನ್ನಲ್ಲೇ ವಿಮಾನ ನಿಲ್ದಾಣವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ತಾಲಿಬಾನ್ ಸಜ್ಜಾಗಿದೆ. ಉಳಿದ ನಾಗರಿಕರನ್ನು ತೆರವುಗೊಳಿಸಿದ ಕೂಡಲೇ ಸೇನೆ ಅಮೆರಿಕಕ್ಕೆ ವಾಪಸಾಗಲಿದೆ.

ವಿಮಾನ ನಿಲ್ದಾಣದ ಉಸ್ತುವಾರಿ ವಹಿಸಿಕೊಳ್ಳಲು ಎಂಜಿನಿಯರ್‌ಗಳು ಮತ್ತು ತಂತ್ರಜ್ಞರನ್ನು ತಾಲಿಬಾನ್ ಸಿದ್ಧಪಡಿಸಿದೆ ಎಂದು ತಾಲಿಬಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಕಾಬೂಲ್ ವಿಮಾನ ನಿಲ್ದಾಣದ ಮೇಲೆ ಸಂಪೂರ್ಣ ನಿಯಂತ್ರಣ ಪಡೆಯಲು ಅಮೆರಿಕನ್ನರ ಅಂತಿಮ ಅನುಮೋದನೆಗಾಗಿ ನಾವು ಕಾಯುತ್ತಿದ್ದೇವೆ. ಎರಡೂ ಕಡೆಯವರು ಶೀಘ್ರ ಹಸ್ತಾಂತರ ಪ್ರಕ್ರಿಯೆ ಮುಗಿಸಲು ಉದ್ದೇಶಿಸಿದ್ದಾರೆ' ಎಂದು ಅಧಿಕಾರಿ ಹೇಳಿದ್ದಾರೆ.

ಹಲವರು ಇನ್ನೂ ಬಾಕಿ

ಬ್ರಿಟನ್, ಜರ್ಮನಿ, ಫ್ರಾನ್ಸ್, ಇಟಲಿ, ಸ್ವಿಟ್ಜರ್ಲೆಂಡ್ ಮತ್ತು ಬೆಲ್ಜಿಯಂ ತೆರವು ಕಾರ್ಯಾಚರಣೆಯನ್ನು ಈಗಾಗಲೇ ಸ್ಥಗಿತಗೊಳಿಸಿವೆ. ನಾಗರಿಕರನ್ನು ಹೊತ್ತ ಅಮೆರಿಕದ ಕೊನೆಯ ವಿಮಾನವೂ ಭಾನುವಾರ ರಾತ್ರಿ ಕಾಬೂಲ್ ಬಿಟ್ಟಿದೆ. ಆದರೆ ತೆರವಿಗೆ ಗುರುತಿಸಲಾಗಿದ್ದ ಸಾವಿರಾರು ಮಂದಿ ಇನ್ನೂ ಕಾಬೂಲ್‌ನಲ್ಲಿಯೇ ಉಳಿದಿದ್ದಾರೆ.

ಜರ್ಮನಿ, ಇಟಲಿ, ಸ್ವಿಟ್ಜರ್ಲೆಂಡ್ ಮತ್ತು ಬೆಲ್ಜಿಯಂಗಳು ತಮ್ಮ ಎಲ್ಲಾ ಪ್ರಜೆಗಳು ಮತ್ತು ತೆರವಿಗೆ ಗುರುತಿಸಲಾಗಿದ್ದವರನ್ನು ಸಂಪೂರ್ಣವಾಗಿ ತೆರವು ಮಾಡಿಲ್ಲ. ನ್ಯೂಜಿಲೆಂಡ್ ತನ್ನ ಪ್ರಜೆಗಳನ್ನು ಪೂರ್ಣವಾಗಿ ತೆರವು ಮಾಡಿಲ್ಲ.

ಅಫ್ಘಾನಿಸ್ತಾನ ತೊರೆದ ಬ್ರಿಟನ್‌ನ ಸೇನಾ ಸಿಬ್ಬಂದಿಯು ಆಕ್ಸ್‌ಫರ್ಡ್‌ಶೈರ್‌ನ ಆರ್‌ಎಎಫ್ ಬ್ರೈಸ್‌ನಾರ್ಟನ್ ಸೇನಾ ನೆಲೆಯಲ್ಲಿ ಬಂದಿಳಿದರು –ರಾಯಿಟರ್ಸ್ ಚಿತ್ರ

20 ವರ್ಷಗಳ ಅಮೆರಿಕ ಕಾರ್ಯಾಚರಣೆ ಕೊನೆ

ಕಾಬೂಲ್ (ರಾಯಿಟರ್ಸ್): ಅಮೆರಿಕವು 20 ವರ್ಷಗಳ ನಂತರ ಅಫ್ಘಾನಿಸ್ತಾನವನ್ನು ತೊರೆಯುವ ಅಂತಿಮ ಹಂತದ ಕಾರ್ಯಾಚರಣೆಗೆ ಸಿದ್ಧತೆ ನಡೆಸಿದೆ. 'ನಾಗರಿಕರನ್ನು ತೆರವು ಮಾಡುವ ಕಾರ್ಯಾಚರಣೆಯು ಭಾನುವಾರ ತಡರಾತ್ರಿ ಕೊನೆಯಾಗಲಿದೆ. ಭಾನುವಾರ ಬೆಳಿಗ್ಗೆ ವೇಳೆಗೆ ತೆರವು ಮಾಡಬೇಕಿದ್ದ ನಾಗರಿಕರ ಸಂಖ್ಯೆ 1,000 ಮಾತ್ರ' ಎಂದು ಅಮೆರಿಕದ ರಕ್ಷಣಾ ಸಚಿವಾಲಯ ಹೇಳಿದೆ.

ಅಫ್ಘಾನಿಸ್ತಾನದಲ್ಲಿ ಇರುವ 4,500 ಸೈನಿಕರ ತೆರವು ಕಾರ್ಯಾಚರಣೆ ಸೋಮವಾರ ಬೆಳಿಗ್ಗೆಯಿಂದ ಆಂಭವಾಗಲಿದೆ. ಮಂಗಳವಾರ ಸಂಜೆಯ ವೇಳೆಗೆ ಅಫ್ಘಾನಿಸ್ತಾನವನ್ನು ಸಂಪೂರ್ಣವಾಗಿ ತೊರೆಯಲಾಗುತ್ತದೆ ಎಂದು ಅಮೆರಿಕವು ಹೇಳಿದೆ. ಬುಧವಾರದಿಂದ ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ವಹಣೆಯನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ತಾಲಿಬಾನ್ ಘೋಷಿಸಿದೆ.

2001ರ ಸೆಪ್ಟೆಂಬರ್ 11ರಂದು ಅಮೆರಿಕದ ಪೆಂಟಗನ್ ಕಟ್ಟಡಗಳ ಮೇಲೆ ಅಲ್-ಕೈದಾ ಉಗ್ರರು ದಾಳಿ ನಡೆಸಿದ್ದರು. ಆ ದಾಳಿಯ ಪ್ರತೀಕಾರವಾಗಿ ಅಮೆರಿಕವು ಅಲ್-ಕೈದಾ ಉಗ್ರರ ವಿರುದ್ಧ ಹೋರಾಡಲು ಅಫ್ಘಾನಿಸ್ತಾನದಲ್ಲಿ ಸೇನಾ ಕಾರ್ಯಾಚರಣೆ ನಡೆಸಿತ್ತು. ತಾಲಿಬಾನಿಗಳ ವಿರುದ್ಧವೂ ಹೋರಾಟ ನಡೆಸಿದ್ದ ಅಮೆರಿಕವು, ಅಫ್ಗನ್‌ನಲ್ಲಿ ಸರ್ಕಾರ ರಚಿಸಲು ನೆರವು ನೀಡಿತ್ತು.

ಅಫ್ಘಾನಿಸ್ತಾನದಲ್ಲಿರುವ ಕೊನೆಯ ವಿದೇಶಿ ಪ್ರಜೆಯನ್ನು ತೆರವು ಮಾಡಿದ ತಕ್ಷಣ ನಮ್ಮ ಸೈನಿಕರನ್ನು ತೆರವು ಮಾಡುತ್ತೇವೆ. ತೆರವು ಗಡುವಿಗೆ ಬದ್ಧವಾಗಿರುತ್ತೇವೆ

ಅಮೆರಿಕ

ಈ 20 ವರ್ಷಗಳ ಅವಧಿಯಲ್ಲಿ ಅಮೆರಿಕದ ಸೇನೆಯು ಉಗ್ರರ ವಿರುದ್ಧ ಹೋರಾಡಿತ್ತಲ್ಲದೆ, ಅಫ್ಗನ್ ಸೈನಿಕರಿಗೆ ತರಬೇತಿ ನೀಡಿತ್ತು. ಅಫ್ಗನ್ ಸೇನೆಗೆ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಪೂರೈಕೆ ಮಾಡಿತ್ತು.

ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಹಂತಹಂತವಾಗಿ ಅಫ್ಘಾನಿಸ್ತಾನದಿಂದ ಸೇನೆಯನ್ನು ವಾಪಸ್ ಕರೆಸಿಕೊಳ್ಳುವುದಾಗಿ ಘೋಷಿಸಿದ್ದರು. ಅದನ್ನು ಅನುಷ್ಠಾನಕ್ಕೆ ತಂದರು. ಜೋ ಬೈಡನ್ ಅಧಿಕಾರಕ್ಕೆ ಬಂದ ನಂತರ ಸೇನೆ ವಾಪಸಾತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಿದರು. ಆದರೆ ಅಫ್ಘಾನಿಸ್ತಾನದಲ್ಲಿ ಅಮೆರಿಕದ ಸೈನಿಕರ ಸಂಖ್ಯೆ ಕಡಿಮೆಯಾದಂತೆ ತಾಲಿಬಾನಿಗಳು ಒಂದೊಂದೇ ಪ್ರಾಂತ್ಯವನ್ನು ವಶಕ್ಕೆ ಪಡೆದರು. ಆಗಸ್ಟ್ 14ರ ವೇಳೆಗೆ ಸಂಪೂರ್ಣವಾಗಿ ವಶಕ್ಕೆ ಪಡೆದರು. ಲಕ್ಷಾಂತರ ಅಫ್ಗನ್ನರು ದೇಶ ತೊರೆಯಲು ಮುಂದಾದರು.

ಆಗ ಆಗಸ್ಟ್ 31ರ ವೇಳೆಗೆ ಅಫ್ಘಾನಿಸ್ತಾನವನ್ನು ಸಂಪೂರ್ಣವಾಗಿ ತೊರೆಯುವುದಾಗಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಘೋಷಿಸಿದ್ದರು. ಆ ಗಡುವಿನೊಳಗೆ ತೆರವು ಕಾರ್ಯಾಚರಣೆ ಕಷ್ಟವೆಂದು ಅಮೆರಿಕದ ಮಿತ್ರರಾಷ್ಟ್ರಗಳು ಹೇಳಿದ್ದವು. ಗಡುವು ಮೀರುವಂತಿಲ್ಲ ಎಂದು ತಾಲಿಬಾನ್ ಎಚ್ಚರಿಕೆ ನೀಡಿತ್ತು. ಗಡುವಿಗೆ ಬದ್ಧವಾಗಿರುವುದಾಗಿ ಅಮೆರಿಕ ಹೇಳಿದೆ.

ಅಮೆರಿಕಕ್ಕೆ ತಾಲಿಬಾನ್ ಎಚ್ಚರಿಕೆ

ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ ಗಡಿಯಲ್ಲಿನ ನಂಗಾರ್ಹರ್ ಪ್ರಾಂತದಲ್ಲಿ ಉಗ್ರರ ವಿರುದ್ಧ ಅಮೆರಿಕವು ಶುಕ್ರವಾರ ನಡೆಸಿದ ಡ್ರೋನ್ ದಾಳಿಯನ್ನು ತಾಲಿಬಾನ್ ಖಂಡಿಸಿದೆ.

'ಅಫ್ಘಾನಿಸ್ತಾನದಲ್ಲಿ ಕಾರ್ಯಾಚರಣೆ ನಡೆಸಲು ಅಮೆರಿಕಕ್ಕೆ ಯಾವುದೇ ಅಧಿಕಾರವಿಲ್ಲ. ಇಂತಹ ಕಾರ್ಯಾಚರಣೆ ನಡೆಸುವ ಮುನ್ನ ಅಮೆರಿಕವು ನಮಗೆ ಮಾಹಿತಿ ನೀಡಬೇಕಿತ್ತು. ಆ ಕಾರ್ಯಾಚರಣೆಯು ಅಫ್ಘಾನಿಸ್ತಾನದ ಗಡಿಯ ಮೇಲೆ ಅಮೆರಿಕವು ನಡೆಸಿದ ದಾಳಿ ಎಂದೇ ಪರಿಗಣಿಸುತ್ತೇವೆ. ಅಮೆರಿಕದ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಗಾಯಗೊಂಡಿದ್ದಾರೆ. ಮತ್ತೆ ಇಂತಹ ದಾಳಿ ನಡೆಸಿದರೆ, ತಕ್ಕ ಪ್ರತ್ಯುತ್ತರ ಎದುರಿಸಬೇಕಾಗುತ್ತದೆ' ಎಂದು ತಾಲಿಬಾನ್ ಎಚ್ಚರಿಕೆ ನೀಡಿದೆ.

ಅಫ್ಗನ್ ಪರಿಸ್ಥಿತಿ ಭಾರತಕ್ಕೆ ಸವಾಲು: ರಾಜನಾಥ್

ಉದಕಮಂಡಲ (ಪಿಟಿಐ): ಅಫ್ಘಾನಿಸ್ತಾನದಲ್ಲಿ ಸಂಭವಿಸಿದ ಅಧಿಕಾರ ಸ್ಥಿತ್ಯಂತರವು ಭಾರತಕ್ಕೆ ಸವಾಲಾಗಿ ಪರಿಣಮಿಸಿದ್ದು ನಮ್ಮ ಕಾರ್ಯತಂತ್ರದ ಮರುವಿಮರ್ಶೆಗೆ ಪ್ರೇರೇಪಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಭಾನುವಾರ ಹೇಳಿದರು.

ಇಲ್ಲಿಗೆ ಹತ್ತಿರದ ವೆಲ್ಲಿಂಗ್ಟನ್‌ನಲ್ಲಿರುವ ಡಿಫೆನ್ಸ್ ಸರ್ವಿಸಸ್ ಮತ್ತು ಸ್ಟಾಫ್ ಕಾಲೇಜಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಫ್ಘಾನಿಸ್ತಾನದಲ್ಲಿ ಬದಲಾಗುತ್ತಿರುವ ಪರಿಸ್ಥಿತಿಯು ನಮಗೆ ಸವಾಲಾಗಿದೆ. ಇದು ನಮ್ಮ ದೇಶದ ಕಾರ್ಯತಂತ್ರವನ್ನು ಮರುಪರಿಶೀಲಿಸುವಂತೆ ಮಾಡಿದೆ. ನಮ್ಮ ಕಾರ್ಯಯೋಜನೆಯಲ್ಲಿ ಬದಲಾವಣೆ ಮಾಡುತ್ತಿದ್ದೇವೆ. ಕ್ವಾಡ್ ರಾಷ್ಟ್ರಗಳೂ ಇದನ್ನೇ ಹೇಳಿವೆ' ಎಂದು ಅವರು ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯಲ್ಲಿ ಮೊದಲ ಪ್ರಧಾನಿ ಚಿತ್ರವಿಲ್ಲ: ಚಿದಂಬರಂ ಟೀಕೆ

ನೆಹರೂ ಚಿತ್ರ ಕೈಬಿಟ್ಟ ಐಸಿಎಚ್‌ಆರ್: ಖಂಡನೆ

ಪಿ.ಚಿದಂಬರಂ

ನವದೆಹಲಿ (ಪಿಟಿಐ): ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಯುಕ್ತ ರೂಪಿಸಿರುವ ಡಿಜಿಟಲ್ ಪೋಸ್ಟರ್‌ಗಳಲ್ಲಿ ಜವಾಹರಲಾಲ್ ನೆಹರೂ ಅವರ ಭಾವಚಿತ್ರವನ್ನು ಕೈಬಿಟ್ಟಿರುವ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ (ಐಸಿಎಚ್‌ಆರ್) ಕ್ರಮವನ್ನು ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಖಂಡಿಸಿದ್ದಾರೆ.

ಈ ಬಗ್ಗೆ ಐಸಿಎಚ್‌ಆರ್‌ನ ಸದಸ್ಯ ಕಾರ್ಯದರ್ಶಿ ನೀಡಿರುವ ವಿವರಣೆ ಹಾಸ್ಯಾಸ್ಪದವಾಗಿದೆ. ಇಂಥ ವಿವರಣೆ ನೀಡುವ ಬದಲು ಅವರು ತಮ್ಮ ಬಾಯಿ ಮುಚ್ಚಿಕೊಂಡಿರುವುದು ಒಳ್ಳೆಯದು' ಎಂದೂ ಟ್ವೀಟ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಐಸಿಎಚ್‌ಆರ್‌ನ ಸದಸ್ಯ ಕಾರ್ಯದರ್ಶಿ ದ್ವೇಷ ಹಾಗೂ ಪೂರ್ವಗ್ರಹಕ್ಕೆ ಮಣಿದಿದ್ದಾರೆ ಎಂದು ಆರೋಪಿಸಿರುವ ಅವರು, 'ಮೋಟಾರು ಕಾರು ಸಂಶೋಧನೆಯಾದ ದಿನವನ್ನು ಆಚರಿಸುವ ವೇಳೆ ಹೆನ್ರಿ ಫೋರ್ಡ್ ಚಿತ್ರವನ್ನು ಕೈಬಿಡುತ್ತೀರಾ? ವಿಮಾನವನ್ನು ಕಂಡು ಹಿಡಿದ ದಿನವನ್ನು ಆಚರಿಸುವಾಗ ರೈಟ್ ಸಹೋದರರ ಚಿತ್ರವನ್ನು ಕೈಬಿಡುತ್ತೀರಾ' ಎಂದು ಪ್ರಶ್ನಿಸಿದ್ದಾರೆ.

'ಆಜಾದಿ ಕಾ ಅಮೃತ ಮಹೋತ್ಸವ' ಆಚರಣೆ ಅಂಗವಾಗಿ ರೂಪಿಸಿದ ಪೋಸ್ಟರ್‌ಗಳಲ್ಲಿ ನೆಹರೂ ಅವರ ಭಾವಚಿತ್ರವನ್ನು ಕೈಬಿಟ್ಟಿರುವ ಐಸಿಎಚ್ ಆರ್ ಕ್ರಮವು ವಿವಾದಕ್ಕೀಡಾಗಿದೆ. ಇದಕ್ಕಾಗಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ವಿರೋಧ ಪಕ್ಷಗಳು, ಇದನ್ನು 'ಕ್ಷುಲ್ಲಕ ಹಾಗೂ ಅಸಹ್ಯಕರ' ಎಂದಿವೆ.

ಭಾರತದ ಮೊದಲ ಪ್ರಧಾನಿಯ ಭಾವಚಿತ್ರವನ್ನು ಉದ್ದೇಶಪೂರ್ವಕವಾಗಿಯೇ ಕೈಬಿಡಲಾಗಿದೆ ಎಂದು ಕಾಂಗ್ರೆಸ್ ಮುಖಂಡರು ಹರಿಹಾಯ್ದಿದ್ದಾರೆ.

ಪಕ್ಷದ ಮುಖಂಡರಾದ ಜೈರಾಂ ರಮೇಶ್, ಶಶಿ ತರೂರ್ ಹಾಗೂ ಪವನ್ ಖೇರಾ ಅವರು, ಐಸಿಎಚ್‌ಆರ್ ವೆಬ್‌ಸೈಟ್‌ನಲ್ಲಿ ನೆಹರೂ ಹೊರತುಪಡಿಸಿ ಮಹಾತ್ಮ ಗಾಂಧಿ, ನೇತಾಜಿ ಸುಭಾಷ್‌ಚಂದ್ರ ಬೋಸ್, ಭಗತ್ ಸಿಂಗ್, ಬಿ.ಆರ್. ಅಂಬೇಡ್ಕರ್, ಸರ್ದಾರ್ ವಲ್ಲಭಬಾಯಿ ಪಟೇಲ್, ರಾಜೇಂದ್ರ ಪ್ರಸಾದ್, ಮದನ್ ಮೋಹನ ಮಾಳವೀಯ ಮತ್ತು ವೀರ ಸಾವರ್ಕರ್ ಭಾವಚಿತ್ರಗಳ ಸ್ಕ್ರೀನ್‌ಶಾಟ್ ತೆಗೆದು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಭಾರತದ ಸ್ವಾತಂತ್ರ್ಯ ಹೋರಾಟದ ಮುಂಚೂಣಿ ದನಿಯಾಗಿದ್ದ ನೆಹರೂ ಅವರ ಭಾವಚಿತ್ರ ಕೈಬಿಡುವ ಮೂಲಕ ಐಸಿಎಚ್‌ಆರ್ ತನ್ನನ್ನು ತಾನೇ ಅವಮಾನಿಸಿಕೊಂಡಿದೆ ಎಂದು ಶಶಿ ತರೂರ್ ಟೀಕಿಸಿದ್ದಾರೆ.

'ಈ ಸರ್ಕಾರದ ಅವಧಿಯಲ್ಲಿ ಇಂಥದ್ದು ಅಚ್ಚರಿಯೇನಲ್ಲ. ಛದ್ಮವೇಷದಲ್ಲಿರುವ ಸರ್ಕಾರದ ಹೊಗಳುಭಟ್ಟರು ವಿದ್ವಾಂಸರೆನಿಸಿಕೊಂಡು ಕ್ರೌರ್ಯ ಮೆರೆಯುವುದು ಇಲ್ಲಿ ಸಹಜ' ಎಂದು ಜೈರಾಂ ರಮೇಶ್ ಹೇಳಿದ್ದಾರೆ

'ಸ್ವಾತಂತ್ರ್ಯ ಹೋರಾಟದ ಸಂದರ್ಭ ದಲ್ಲಿ ಬಿಜೆಪಿ ಅಸ್ತಿತ್ವದಲ್ಲಿಯೇ ಇರಲಿಲ್ಲ. ಆರ್‌ಎಸ್‌ಎಸ್ ಕೂಡ ಭಾಗಿಯಾಗಿರಲಿಲ್ಲ. ಹೀಗಾಗಿ ಬಿಜೆಪಿಯು ಇತಿಹಾಸವನ್ನು ಬದಲಿಸಲು ಮುಂದಾಗಬಾರದು' ಎಂದು ಎನ್‌ಸಿಪಿಯ ಮಜೀದ್ ಮೆಮನ್ ಹೇಳಿದ್ದಾರೆ.

'ಮುಂದಿನ ಪೋಸ್ಟರ್‌ಗಳಲ್ಲಿ ನೆಹರೂ ಚಿತ್ರ'

ನೆಹರೂ ಚಿತ್ರವನ್ನು ಕೈಬಿಟ್ಟಿರುವುದಕ್ಕೆ ವಿರೋಧ ಪಕ್ಷಗಳಿಂದ ತೀವ್ರ ಟೀಕೆಗೊಳಗಾಗಿರುವ ಐಸಿಎಚ್‌ಆರ್, ಈ ವಿವಾದವು ಅನಗತ್ಯ ಎಂದು ಹೇಳಿದೆ. ಅಲ್ಲದೇ ಮುಂದೆ ಬಿಡುಗಡೆಯಾಗಲಿರುವ ಪೋಸ್ಟರ್‌ಗಳಲ್ಲಿ ನೆಹರೂ ಚಿತ್ರ ಇರಲಿದೆ ಎಂದು ತಿಳಿಸಿದೆ.

'ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದ ಯಾರ ಪಾತ್ರವನ್ನೂ ನಾವು ಗೌಣ ಮಾಡಲು ಯತ್ನಿಸುತ್ತಿಲ್ಲ' ಎಂದಿರುವ ಐಸಿಎಚ್‌ಆರ್ ಅಧಿಕಾರಿಯೊಬ್ಬರು, 'ಸ್ವಾತಂತ್ರ್ಯದ ಅಮೃತ ಮಹೋತ್ಸವದ ನಿಮಿತ್ತ ಈಗ ಒಂದು ಪೋಸ್ಟರ್ ಮಾತ್ರ ಬಿಡುಗಡೆಯಾಗಿದೆ. ಮುಂದಿನ ದಿನಗಳಲ್ಲಿ ಹಲವಾರು ಪೋಸ್ಟರ್‌ಗಳು ಬಿಡುಗಡೆಯಾಗಲಿದ್ದು, ಅವುಗಳಲ್ಲಿ ನೆಹರೂ ಅವರ ಚಿತ್ರವೂ ಇರಲಿದೆ. ಹೀಗಾಗಿ ವಿವಾದ ಅನಗತ್ಯ' ಎಂದು ಹೇಳಿದ್ದಾರೆ.

ಐಸಿಎಚ್‌ಆರ್, ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾಗಿದ್ದು, ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ ಅಂಗವಾಗಿ ಸ್ವಾತಂತ್ರ್ಯ ಹೋರಾಟದ ಬಗೆಗಿನ ಸರಣಿ ಉಪನ್ಯಾಸ ಹಾಗೂ ಗೋಷ್ಠಿಗಳನ್ನು ನಡೆಸುತ್ತಿದೆ.

'ಸುಪ್ರೀಂ': ಹೊಸ ನ್ಯಾಯಮೂರ್ತಿಗಳ ಪ್ರಮಾಣವಚನ ಸ್ವೀಕಾರ ಇಂದು

ಬಿ.ವಿ.ನಾಗರತ್ನ

ನವದೆಹಲಿ: ಸುಪ್ರೀಂ ಕೋರ್ಟ್‌ಗೆ ಹೊಸದಾಗಿ ನೇಮಕಗೊಂಡಿರುವ ಮೂವರು ಮಹಿಳಾ ನ್ಯಾಯಮೂರ್ತಿಗಳು ಸೇರಿದಂತೆ ಒಂಬತ್ತು ನ್ಯಾಯಮೂರ್ತಿಗಳು ಸೋಮವಾರ ಅಧಿಕಾರ ಸ್ವೀಕರಿಸಲಿದ್ದಾರೆ.

ಸುಪ್ರೀಂ ಕೋರ್ಟ್‌ನ ಹೆಚ್ಚುವರಿ ಕಟ್ಟಡದಲ್ಲಿರುವ ಸಭಾಂಗಣದಲ್ಲಿ ಆಗಸ್ಟ್ 30ರಂದು ಬೆಳಿಗ್ಗೆ 10.30ಕ್ಕೆ ಹೊಸ ನ್ಯಾಯಮೂರ್ತಿಗಳು ಮುಖ್ಯ ನ್ಯಾಯಮೂರ್ತಿಯಿಂದ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಹಿಂದೆ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಮುಖ್ಯ ನ್ಯಾಯಮೂರ್ತಿಗಳ ನ್ಯಾಯಾಲಯದ ಕೊಠಡಿಯಲ್ಲೇ ನಡೆಸಲಾಗುತ್ತಿತ್ತು.

ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಎ.ಎಸ್. ಓಕಾ, ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ವಿಕ್ರಮ್ ನಾಥ್, ಜೆ.ಕೆ. ಮಹೇಶ್ವರಿ, ಹಿಮಾ ಕೊಹ್ಲಿ, ಸಿ.ಟಿ.ರವಿಕುಮಾರ್, ಎಂ.ಎಂ. ಸುಂದರೇಶ್, ಬೇಲಾ ತ್ರಿವೇದಿ ಮತ್ತು ಹಿರಿಯ ವಕೀಲ ಪಿ.ಎಸ್. ನರಸಿಂಹ ಅವರು ಪ್ರಮಾಣವಚನ ಸ್ವೀಕರಿಸುವರು.

ನಟ ಅರ್ಮಾನ್ ಕೊಹ್ಲಿ ಬಂಧನ

ಅರ್ಮಾನ್ ಕೊಹ್ಲಿ

ಮುಂಬೈ: ಬಾಲಿವುಡ್ ನಟ ಅರ್ಮಾನ್ ಕೊಹ್ಲಿ ಅವರ ಮುಂಬೈ ಮನೆಯಲ್ಲಿ ಕೊಕೇನ್ (ಮಾದಕ ವಸ್ತು) ಪತ್ತೆಯಾದ ಬಳಿಕ ಡ್ರಗ್ಸ್ ಪ್ರಕರಣದಲ್ಲಿ ಅವರನ್ನು ಭಾನುವಾರ ಮಾದಕ ವಸ್ತು ನಿಯಂತ್ರಣ ಘಟಕವು (ಎನ್‌ಸಿಬಿ) ಬಂಧಿಸಿದೆ.

'ಕೊಹ್ಲಿ ಅವರ ಮನೆ ಮೇಲೆ ಶನಿವಾರ ಸಂಜೆ ಎನ್‌ಸಿಬಿಯ ತಂಡವು ದಾಳಿ ನಡೆಸಿತ್ತು. ಬಳಿಕ ಅವರನ್ನು ಮುಂಬೈನಲ್ಲಿರುವ ತನ್ನ ಕಚೇರಿಗೆ ಕರೆದೊಯ್ದಿದ್ದ ಎನ್‌ಸಿಬಿಯು ಕೆಲಗಂಟೆಗಳ ಕಾಲ ಅವರನ್ನು ವಿಚಾರಣೆಗೊಳಪಡಿಸಿತ್ತು. ಎನ್‌ಡಿಪಿಎಸ್ ಕಾಯ್ದೆ ಅಡಿ ಅವರನ್ನು ಬಂಧಿಸಲಾಗಿದೆ' ಎಂದು ಎನ್‌ಸಿಬಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಅರ್ಮಾನ್ ಅವರ ಬಂಧನ ಸುದ್ದಿಯನ್ನು ಭಾನುವಾರ ಬೆಳಿಗ್ಗೆ 10 ಗಂಟೆಗೆ ಎನ್‌ಸಿಬಿಯು ಮಾಧ್ಯಮಗಳಿಗೆ ತಿಳಿಸಿದೆ. ಅರ್ಮಾನ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಸೋಮವಾರದ ತನಕ ಎನ್‌ಸಿಬಿಯ ವಶಕ್ಕೆ ನೀಡಲಾಗಿದೆ.

'ಅರ್ಮಾನ್ ಮನೆಯಲ್ಲಿ ಸಣ್ಣ ಪ್ರಮಾಣದಲ್ಲಿ ಕೊಕೇನ್ ಪತ್ತೆಯಾಗಿದ್ದು, ಇದು ದಕ್ಷಿಣ ಅಮೆರಿಕದ ಮೂಲದ್ದಾಗಿದೆ. ಕಳ್ಳ ಸಾಗಣೆದಾರರ ಮೂಲಕ ಮುಂಬೈಗೆ ಇದನ್ನು ತರಲಾಗಿದ್ದು ಈ ಬಗ್ಗೆ ತನಿಖೆ ಕೈಗೊಳ್ಳಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನಟ ಗೌರವ್ ದೀಕ್ಷಿತ್ ಹಾಗೂ ಡ್ರಗ್ ಪೆಡ್ಲರ್ ಅಜಯ್ ರಾಜುಸಿಂಗ್ ಅವರನ್ನು ಎನ್‌ಸಿಬಿಯು ಇತ್ತೀಚೆಗೆ ಬಂಧಿಸಿ ವಿಚಾರಣೆಗೊಳಪಡಿಸಿತ್ತು. ಆಗ ಅರ್ಮಾನ್ ಅವರ ಹೆಸರು ಕೇಳಿ ಬಂದಿತ್ತು' ಎಂದು ಮೂಲಗಳು ತಿಳಿಸಿವೆ.

ನಟ ಸಲ್ಮಾನ್ ಖಾನ್ ಅಭಿನಯದ 'ಪ್ರೇಮ್ ರತನ್ ಧನ್ ಪಾಯೊ' ಸಿನಿಮಾ ಸೇರಿದಂತೆ ಇತರ ಸಿನಿಮಾಗಳಲ್ಲಿ ಅರ್ಮಾನ್ ನಟಿಸಿದ್ದಾರೆ. ಕಿರುತೆರೆಯ ರಿಯಾಲಿಟಿ ಷೋ 'ಬಿಗ್‌ಬಾಸ್'ನಲ್ಲೂ ಅವರು ಸ್ಪರ್ಧಿಯಾಗಿ ಪಾಲ್ಗೊಂಡಿದ್ದರು.

ಮರೆತ ಅಂತರ

ಮುಂಬೈನ ಜುಹು ಬೀಚ್‌ಗೆ ಸಾರ್ವಜನಿಕರ ಪ್ರವೇಶಕ್ಕೆ ಅಧಿಕಾರಿಗಳು ಅನುಮತಿ ನೀಡಿದ್ದು, ಭಾನುವಾರ ಬೀಚ್‌ನಲ್ಲಿ ಜನರು ಅಂತರ ಮರೆತು ಗುಂಪಾಗಿ ಸೇರಿದ್ದರು –ಪಿಟಿಐ ಚಿತ್ರ

'ಜೈಶ್ರೀರಾಮ್' ಘೋಷಣೆಗೆ ಒತ್ತಾಯ: ಇಬ್ಬರ ಬಂಧನ

ಭೋಪಾಲ್, ಉಜ್ಜಯಿನಿ (ಪಿಟಿಐ): ಗುಜರಿ ವ್ಯಾಪಾರಿಯಾಗಿರುವ ಮುಸ್ಲಿಂ ವ್ಯಕ್ತಿಯೊಬ್ಬರಿಗೆ 'ಜೈ ಶ್ರೀರಾಮ್' ಘೋಷಣೆ ಕೂಗುವಂತೆ ಬೆದರಿಕೆಯೊಡ್ಡಿದ ಆರೋಪದ ಮೇರೆಗೆ ಇಬ್ಬರು ಆರೋಪಿಗಳನ್ನು ಮಧ್ಯಪ್ರದೇಶದ ಉಜ್ಜಯಿನಿ ಜಿಲ್ಲೆಯಲ್ಲಿ ಭಾನುವಾರ ಪೊಲೀಸರು ಬಂಧಿಸಿದ್ದಾರೆ.

ಬಂಧಿತರನ್ನು ಕಮಲ್ ಸಿಂಗ್ (22) ಮತ್ತು ಈಶ್ವರ್ ಸಿಂಗ್ (27) ಎಂದು ಗುರುತಿಸಲಾಗಿದೆ. ಬಂಧಿತರ ವಿರುದ್ಧ ಕೋಮುಸೌಹಾರ್ದಕ್ಕೆ ಭಂಗ ತಂದ ಆರೋಪದ ಮೇರೆಗೆ ಪ್ರಕರಣ ದಾಖಲಿಸಲಾಗಿದೆ.

ಶನಿವಾರ ಈ ಘಟನೆ ನಡೆದಿದ್ದು, ಇದಕ್ಕೆ ಸಂಬಂಧಿಸಿದೆ ಎಂದುಹೇಳಲಾದ ಎರಡು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

'ಮಹಿದ್‌ಪುರ ಪಟ್ಟಣದ ನಿವಾಸಿ ಅಬ್ದುಲ್ ರಶೀದ್ ಅವರು ಬಹಳ ವರ್ಷಗಳಿಂದ ಗುಜರಿ ವ್ಯಾಪಾರ ಮಾಡುತ್ತಿದ್ದಾರೆ. ಅವರು ತಮ್ಮ ಮಿನಿ ಟ್ರಕ್‌ನಲ್ಲಿ ಸಿಕ್ಲಿ ಗ್ರಾಮಕ್ಕೆ ಗುಜರಿ ವಸ್ತುಗಳ ಸಂಗ್ರಹಕ್ಕೆ ತೆರಳಿದ್ದಾಗ ಅವರನ್ನು ಗ್ರಾಮ ಬಿಟ್ಟು ತೆರಳುವಂತೆ ಒತ್ತಾಯಿಸಿ, ಮತ್ತೊಮ್ಮೆ ಇಲ್ಲಿ ಗುಜರಿ ವ್ಯಾಪಾರಕ್ಕೆ ಬಾರದಂತೆ ಬೆದರಿಕೆಯೊಡ್ಡಲಾಗಿದೆ. ಅಬ್ದುಲ್ ಗ್ರಾಮ ಬಿಟ್ಟು ತೆರಳುವಾಗ, ಪಿಪ್ಲಿಯಾ ಧುಮಾದ ಎನ್ನುವ ಸ್ಥಳದಲ್ಲಿ ಇಬ್ಬರು ವ್ಯಕ್ತಿಗಳು ಅವರನ್ನು ಅಡ್ಡಗಟ್ಟಿ, ನಿಂದಿಸಿ 'ಜೈ ಶ್ರೀರಾಮ್' ಘೋಷಣೆ ಕೂಗುವಂತೆ ಬಲವಂತಪಡಿಸಿದ್ದಾರೆ. ಅವರ ಒತ್ತಡಕ್ಕೆ ಮಣಿದ ಅಬ್ದುಲ್ ನಂತರ ಅಲ್ಲಿಂದ ವಾಪಸ್ ಬಂದಿದ್ದಾರೆ' ಎಂದು ಮಹಿದ್‌ಪುರ ಉಪವಿಭಾಗೀಯ ಪೊಲೀಸ್ ಅಧಿಕಾರಿ ಆರ್.ಕೆ. ರೈ ಸುದ್ದಿಗಾರರಿಗೆ ವಿವರಿಸಿದರು.

'ಈ ಹಿಂದೆ ಇದೇ ರೀತಿಯ ಘಟನೆಗಳು ನಡೆದಿವೆ. ಸರ್ಕಾರ ಎಲ್ಲವನ್ನೂ ಮೂಕಪ್ರೇಕ್ಷಕನಂತೆ ನೋಡುತ್ತಿದೆ' ಎಂದು ಕಾಂಗ್ರೆಸ್ ಮುಖ್ಯಸ್ಥ ಕಮಲ್‌ನಾಥ್ ಟೀಕಿಸಿದ್ದಾರೆ.

ನಕಲಿ ಮರಣ ಪತ್ರ ಬಳಸಿ ಹಣ ಪಡೆದ ಆರೋಪ: ತನಿಖೆಗೆ ಆದೇಶ

ಛಿಂದ್‌ವಾಡ, ಮಧ್ಯಪ್ರದೇಶ (ಪಿಟಿಐ): ನಕಲಿ ಮರಣ ಪ್ರಮಾಣಪತ್ರಗಳನ್ನು ಬಳಸುವ ಮೂಲಕ ಕಟ್ಟಡ ಕಾರ್ಮಿಕರ ಕಲ್ಯಾಣ ಯೋಜನೆಯಡಿ ಹಣ ಪಡೆದಿರುವ ಆರೋಪಗಳ ಕುರಿತು ಮಧ್ಯಪ್ರದೇಶ ಸರ್ಕಾರ ತನಿಖೆಗೆ ಆದೇಶಿಸಿದೆ.

'ಛಿಂದ್‌ವಾಡ ಜಿಲ್ಲೆಯ ಬೋಹ್ನಖೇಡಿ ಗ್ರಾಮದಲ್ಲಿ 23 ಫಲಾನುಭವಿಗಳಿಗೆ ಸಂಬಂಧಿಸಿ ನಕಲಿ ಮರಣ ಪ್ರಮಾಣಪತ್ರಗಳನ್ನು ಸಲ್ಲಿಸಿ, ಯೋಜನೆಯಡಿ ಹಣ ಪಡೆದಿರುವ ಬಗ್ಗೆ ಆರೋಪಗಳು ಕೇಳಿ ಬಂದಿವೆ' ಎಂದು ಕೃಷಿ ಸಚಿವ ಕಮಲ್ ಪಟೇಲ್ ತಿಳಿಸಿದ್ದಾರೆ.

'ಫಲಾನುಭವಿಗಳು ಜೀವಂತವಾಗಿದ್ದಾರೆ. ಆದರೆ, ಅವರ ಹೆಸರಿನಲ್ಲಿ ನಕಲಿ ಮರಣ ಪ್ರಮಾಣಪತ್ರ ಸಲ್ಲಿಸಿ, ಹಣ ಪಡೆದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ' ಎಂದು ಅವರು ಹೇಳಿದ್ದಾರೆ.

'ಆರೋಪಗಳ ಕುರಿತು ತನಿಖೆ ನಡೆಸಿ, ತಪ್ಪಿತಸ್ಥ ಸಿಬ್ಬಂದಿ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿದೆ' ಎಂದಿದ್ದಾರೆ.

'ಇದೊಂದು ಗಂಭೀರ ಪ್ರಕರಣ. ಜಿಲ್ಲೆಯಲ್ಲಿ ಕೇಳಿಬಂದಿರುವ ಇಂಥ ಎಲ್ಲ ಪ್ರಕರಣಗಳ ವಿರುದ್ಧ ತನಿಖೆ ನಡೆಸಿ, ಅಕ್ರಮಗಳಲ್ಲಿ ಶಾಮೀಲಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ಸೂಚಿಸಲಾಗಿದೆ' ಎಂದು ಹೇಳಿದ್ದಾರೆ.

'ರೈತರ ತಲೆ ಒಡೆಯುವಂತೆ ಹೇಳಿದ್ದ ಅಧಿಕಾರಿ ವಿರುದ್ಧ ಕ್ರಮ'

ನವದೆಹಲಿ: ಹರಿಯಾಣದ ಕರ್ನಾಲ್‌ನಲ್ಲಿ ಪ್ರತಿಭಟನೆ ನಡೆಸಿದ ರೈತರ ತಲೆ ಒಡೆಯುವಂತೆ ಹೇಳಿಕೆ ನೀಡಿದ್ದ ಐಎಎಸ್ ಅಧಿಕಾರಿ ಆಯುಷ್ ಸಿನ್ಹಾ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಉಪಮುಖ್ಯಮಂತ್ರಿ ದುಷ್ಯಂತ್ ಚೌತಾಲಾ ಭರವಸೆ ನೀಡಿದ್ದಾರೆ.

'ಐಎಎಸ್ ಅಧಿಕಾರಿ ಇಂತಹ ಭಾಷೆ ಬಳಸಿರುವುದು ಖಂಡನೀಯ. ಸರ್ಕಾರ ಸೂಕ್ತ ಕ್ರಮಕೈಗೊಳ್ಳುವುದು ಖಚಿತ. ಆದರೆ, ಪೊಲೀಸರ ಮೇಲೆ ರೈತರು ಕಲ್ಲು ತೂರಾಟ ನಡೆಸಿರುವುದು ಸಹ ಖಂಡನೀಯ' ಎಂದು ಹೇಳಿದ್ದಾರೆ.

2018ರ ಬ್ಯಾಚ್‌ನ ಐಎಎಸ್ ಅಧಿಕಾರಿ ಆಯುಷ್ ಸಿನ್ಹಾ ಹೇಳಿಕೆಗೆ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, 'ಇವರು ಸರ್ಕಾರಿ ತಾಲಿಬಾನ್' ಎಂದು ಟೀಕಿಸಿದ್ದಾರೆ. ಈ ಅಧಿಕಾರಿಯ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಒತ್ತಾಯಿಸಿದ್ದಾರೆ.

ಹರಿಯಾಣದಲ್ಲಿ ನೂಹ್‌ನಲ್ಲಿ ರೈತರ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಅವರು ನಮ್ಮನ್ನು ಖಲಿಸ್ತಾನಿಗಳಿಗೆ ಹೋಲಿಸುತ್ತಿದ್ದಾರೆ. ನಮ್ಮನ್ನು ಪಾಕಿಸ್ತಾನಿಗಳು ಸಹ ಎಂದು ಕರೆಯುತ್ತಾರೆ. ಹಾಗಿದ್ದರೆ ಇವರು ಸರ್ಕಾರಿ ತಾಲಿಬಾನಿಗಳು' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪೊಲೀಸರ ಕ್ರಮಗಳನ್ನು ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಸಮರ್ಥಿಸಿಕೊಂಡಿದ್ದಾರೆ.

ಅಯೋಧ್ಯೆ, ಲಖನೌದಲ್ಲಿ ಎಎಪಿ ತಿರಂಗಾ ಯಾತ್ರೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿ ವಿಧಾನಸಭೆ ಚುನಾವಣೆಗೆ ಮೊದಲು ಆಮ್ ಆದ್ಮಿ ಪಕ್ಷವು (ಎಎಪಿ) ಭಾರತದ 75ನೇ ವರ್ಷದ ಸಾತಂತ್ರ್ಯೋತ್ಸವ ಪ್ರಯುಕ್ತ ಅಯೋಧ್ಯೆ, ಲಖನೌ ಮತ್ತು ನೋಯಿಡಾದಲ್ಲಿ 'ತಿರಂಗಾ ಯಾತ್ರೆಗಳನ್ನು' ಕೈಗೊಳ್ಳಲಿದೆ ಎಂದು ಪಕ್ಷದ ನಾಯಕರು ಹೇಳಿದ್ದಾರೆ.

ನೋಯಿಡಾದಲ್ಲಿ ಸೆ.1ರಂದು ಯಾತ್ರೆ ನಡೆಯಲಿದ್ದು ಸೆಪ್ಟೆಂಬರ್ ಮಧ್ಯಭಾಗದಲ್ಲಿ ಅಯೋಧ್ಯೆಗೆ ತೆರಳಲಿದೆ ಎಂದು ಪಕ್ಷದ ನಾಯಕ ಸಂಜಯ್ ಸಿಂಗ್ ತಿಳಿಸಿದ್ದಾರೆ.

ಈ ಯಾತ್ರೆಗಳಲ್ಲಿ ದೆಹಲಿಯ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಭಾಗವಹಿಸುವರು. ಭ್ರಷ್ಟಾಚಾರ ಮತ್ತು ಜಾತೀಯತೆಯಿಂದ ಕೂಡಿದ ರಾಜಕೀಯದ ವಿರುದ್ಧ ಜನರನ್ನು ಒಗ್ಗೂಡಿಸುವುದು ಯಾತ್ರೆಯ ಉದ್ದೇಶ ಎಂದು ವಿವರಿಸಿದ್ದಾರೆ.

ಇಂಡೆಕ್ಸ್ ಫಂಡ್: ಹೂಡಿಕೆ ಸೂಕ್ತವೇ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಭಾರತದಲ್ಲಿ ಪ್ರಮುಖವಾಗಿ ಎರಡು ಷೇರುಪೇಟೆ ಸೂಚ್ಯಂಕಗಳಿವೆ (ಇಂಡೆಕ್ಸ್) – ಮುಂಬೈ ಷೇರುಪೇಟೆಯನ್ನು ಪ್ರತಿನಿಧಿಸುವ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆಯನ್ನು ಪ್ರತಿನಿಧಿಸುವ ನಿಫ್ಟಿ. ಈ ಸೂಚ್ಯಂಕಗಳನ್ನು ಯಥಾವತ್ತಾಗಿ ಅನುಕರಿಸಿ ಕೆಲ ಮ್ಯೂಚುವಲ್ ಫಂಡ್‌ಗಳು ರೂಪುಗೊಂಡಿವೆ. ಷೇರು ಮಾರುಕಟ್ಟೆಯ ಭಾಷೆಯಲ್ಲಿ ಈ ರೀತಿಯ ಫಂಡ್‌ಗಳನ್ನು ಇಂಡೆಕ್ಸ್ ಮ್ಯೂಚುವಲ್ ಫಂಡ್ ಎಂದು ಕರೆಯುತ್ತಾರೆ. ಇಂಡೆಕ್ಸ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಯಾರಿಗೆ ಅನುಕೂಲ? ಇದು ಹೇಗೆ ರೂಪುಗೊಂಡಿದೆ? ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಷಿಯೋ) ಇಲ್ಲಿ ಎಷ್ಟು?

ಇಂಡೆಕ್ಸ್ (ಸೂಚ್ಯಂಕ) ಏಕೆ ಬೇಕು?: ಬೆಂಗಳೂರಿನಲ್ಲಿ ಸದ್ಯದ ಸಂಚಾರ ದಟ್ಟಣೆ ಹೇಗಿದೆ ಎಂದು ನಾನು ನಿಮ್ಮನ್ನು ಕೇಳಿದರೆ ಅದಕ್ಕೆ ನೀವು ಹೇಗೆ ಉತ್ತರಿಸುವಿರಿ? ನಗರದಲ್ಲಿ ಸಾವಿರಾರು ರಸ್ತೆಗಳಿವೆ. ಎಲ್ಲಾ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಹೇಗಿದೆ ಎನ್ನುವುದನ್ನು ಪರಿಶೀಲಿಸಿ ಉತ್ತರ ಕಂಡುಕೊಳ್ಳುವುದು ಕಷ್ಟ. ಹೀಗಿರುವಾಗ ನಗರದ ಪ್ರಮುಖ ದಿಕ್ಕುಗಳ ಮುಖ್ಯ ರಸ್ತೆಗಳನ್ನು ಗಮನಿಸಿ ಸಂಚಾರ ದಟ್ಟಣೆ ಹೆಚ್ಚಿದೆಯೋ, ಕಡಿಮೆ ಇದೆಯೋ ಎನ್ನುವ ನಿರ್ಣಯಕ್ಕೆ ಬರುತ್ತೀರಿ.

ಇದನ್ನೇ ಆಧಾರವಾಗಿಟ್ಟುಕೊಂಡು, ಷೇರು ಮಾರುಕಟ್ಟೆ ಇಂದು ಹೇಗೆ ವರ್ತಿಸುತ್ತಿದೆ ಎಂದು ನಾನು ನಿಮ್ಮನ್ನು ಪ್ರಶ್ನಿಸಿದರೆ ನೀವು ಹೇಗೆ ಉತ್ತರಿಸಬಹುದು? ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ) ಸುಮಾರು ಐದು ಸಾವಿರ ಕಂಪನಿಗಳ ಷೇರುಗಳ ಖರೀದಿ–ಮಾರಾಟ ನಡೆಯುತ್ತದೆ, ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಇ) ಸುಮಾರು ಎರಡು ಸಾವಿರ ಕಂಪನಿಗಳ ಷೇರು ವಹಿವಾಟು ನಡೆಯುತ್ತದೆ. ಪ್ರತಿ ಕಂಪನಿಯ ಏರಿಳಿತ ಪರಿಶೀಲಿಸಿ ಉತ್ತರ ದಾಖಲಿಸುವುದು ಸವಾಲಿನ ಕೆಲಸ. ಹಾಗಾಗಿ ಪ್ರಮುಖ ವಲಯಗಳ ಆಯ್ದ ಕಂಪನಿಗಳ ಸ್ಥಿತಿಗತಿ ತಿಳಿದು ನೀವು ಮಾರುಕಟ್ಟೆಯ ಏರಿಳಿತವನ್ನು ಕಂಡುಕೊಳ್ಳುತ್ತೀರಿ.

ಹೀಗೆ ಪ್ರಮುಖ ಕಂಪನಿಗಳ ಸ್ಥಿತಿಗತಿ ಆಧರಿಸಿ ಮಾರುಕಟ್ಟೆಯ ಏರಿಳಿತ ತಿಳಿಸುವುದನ್ನು ಷೇರುಪೇಟೆ ಸೂಚ್ಯಂಕ (ಇಂಡೆಕ್ಸ್) ಎಂದು ಕರೆಯುತ್ತಾರೆ. ಭಾರತದಲ್ಲಿ ಪ್ರಮುಖವಾಗಿ ಎರಡು ಸೂಚ್ಯಂಕಗಳಿವೆ. ಸೆನ್ಸೆಕ್ಸ್ ಸೂಚ್ಯಂಕ ಆಯ್ದ ಪ್ರಮುಖ 30 ಕಂಪನಿಗಳ ಏರಿಳಿತ ಗಮನಿಸಿ ಷೇರುಪೇಟೆಯ ಏರಿಳಿತವನ್ನು ತಿಳಿಸುತ್ತದೆ. ಹಾಗೆಯೇ ನಿಫ್ಟಿ ಪ್ರಮುಖ 50 ಕಂಪನಿಗಳ ಏರಿಳಿತವನ್ನು ಗಣನೆಗೆ ತೆಗೆದುಕೊಂಡು ಮಾರುಕಟ್ಟೆ ಸಕಾರಾತ್ಮಕವಾಗಿದೆಯೋ ನಕಾರಾತ್ಮಕವಾಗಿದೆಯೋ ತಿಳಿಸುತ್ತೆ.

ಷೇರುಪೇಟೆ

ಇಂಡೆಕ್ಸ್ ಫಂಡ್ ಅಂದರೇನು?: ನಿಫ್ಟಿ ಸೂಚ್ಯಂಕದಲ್ಲಿ ರಿಲಯನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ಥಾನ್ ಯುನಿಲಿವರ್, ಐಸಿಐಸಿಐ ಬ್ಯಾಂಕ್ ಸೇರಿ ಪ್ರಮುಖ 50 ಪ್ರಾತಿನಿಧಿಕ ಕಂಪನಿಗಳಿವೆ. ಈ ಸೂಚ್ಯಂಕದಲ್ಲಿರುವ ಎಲ್ಲಾ 50 ಕಂಪನಿಗಳನ್ನು ಯಥಾವತ್ತಾಗಿ ಒಳಗೊಂಡ ಒಂದು ಮ್ಯೂಚುವಲ್ ಫಂಡ್ ರೂಪಿಸಿ ಹೂಡಿಕೆ ಮಾಡುವ ವ್ಯವಸ್ಥೆಯೇ ಇಂಡೆಕ್ಸ್ ಮ್ಯೂಚುವಲ್ ಫಂಡ್. ಇಂಡೆಕ್ಸ್ ಫಂಡ್‌ನಲ್ಲಿ ಫಂಡ್ ಮ್ಯಾನೇಜರ್ ಇಲ್ಲದ ಕಾರಣ ವೆಚ್ಚ ಅನುಪಾತ ಅಂದರೆ, ನಿರ್ವಹಣಾ ಶುಲ್ಕ ಕಡಿಮೆ. ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತ ಶೇಕಡ 1.5ರಷ್ಟಿದ್ದರೆ ಇಂಡೆಕ್ಸ್ ಫಂಡ್‌ಗಳ ವೆಚ್ಚ ಅನುಪಾತ ಶೇ 0.2ರಷ್ಟು.

ವೆಚ್ಚ ಅನುಪಾತ ಶುಲ್ಕ ಕಡಿಮೆ ಇರುವುದರಿಂದ ಇಲ್ಲಿ ಹೂಡಿಕೆದಾರನಿಗೆ ಹೆಚ್ಚು ಉಳಿತಾಯ ಸಾಧ್ಯವಾಗುತ್ತದೆ. ಷೇರು ಮಾರುಕಟ್ಟೆ ಎಷ್ಟು ಪ್ರಮಾಣದಲ್ಲಿ ಏರಿಕೆ ಕಾಣುವುದೋ ಅಷ್ಟು ಲಾಭ ಸಿಕ್ಕರೆ ಸಾಕು, ಹೆಚ್ಚು ರಿಸ್ಕ್ ತೆಗೆದುಕೊಳ್ಳುವುದಿಲ್ಲ ಎನ್ನುವವರಿಗೆ ಇಂಡೆಕ್ಸ್ ಫಂಡ್ ಒಳ್ಳೆಯ ಆಯ್ಕೆ. ಇಂಡೆಕ್ಸ್ ಫಂಡ್ ಮೂಲಕ ಹತ್ತಾರು ವಲಯಗಳ ಕಂಪನಿಗಳಲ್ಲಿ ನಿಮ್ಮ ಹಣ ತೊಡಗಿಸುವುದರಿಂದ ಹೂಡಿಕೆ ವೈವಿಧ್ಯತೆಯೂ ಸುಲಭ.

ಇಂಡೆಕ್ಸ್ ಫಂಡ್, ಪ್ಯಾಸಿವ್ ಫಂಡ್: ಪ್ಯಾಸಿವ್ ಫಂಡ್‌ಗಳಲ್ಲಿ ಯಾವ ಷೇರಿನಲ್ಲಿ ಹೂಡಿಕೆ ಮಾಡಬೇಕು, ಯಾವುದರಲ್ಲಿ ಹೂಡಿಕೆ ಮಾಡಬಾರದು ಎನ್ನುವ ನಿರ್ಧಾರವನ್ನು ಫಂಡ್ ಮ್ಯಾನೇಜರ್ ತೆಗೆದುಕೊಳ್ಳುವುದಿಲ್ಲ. ಸೂಚ್ಯಂಕದ ಭಾಗವಾಗಿರುವ ಕಂಪನಿಗಳ ಷೇರುಗಳಲ್ಲಿಯೇ ಇಂಡೆಕ್ಸ್ ಫಂಡ್‌ಗಳು ಹಣ ತೊಡಗಿಸುತ್ತವೆ. ಈ ಕಾರಣದಿಂದ ಇಂಡೆಕ್ಸ್ ಫಂಡ್ ಪ್ಯಾಸಿವ್ ಫಂಡ್ ಎಂದು ಕರೆಸಿಕೊಳ್ಳುತ್ತದೆ.

ಆ್ಯಕ್ಟಿವ್ ಫಂಡ್‌ಗಳಲ್ಲಿ ಯಾವ ಷೇರಿನಲ್ಲಿ ಹೂಡಿಕೆ ಮಾಡಬೇಕು, ಯಾವುದರಲ್ಲಿ ಹೂಡಿಕೆ ಮಾಡಬಾರದು ಎನ್ನುವ ನಿರ್ಧಾರವನ್ನು ಫಂಡ್ ಮ್ಯಾನೇಜರ್ ತೆಗೆದುಕೊಳ್ಳುತ್ತಾರೆ. ಈಕ್ವಿಟಿ, ಡೆಟ್ ಮತ್ತು ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳು ಆ್ಯಕ್ಟಿವ್ ಫಂಡ್‌ಗೆ ಉತ್ತಮ ಉದಾಹರಣೆ.

ಯಾವ ಫಂಡ್ ಆಯ್ಕೆ ಮಾಡಬೇಕು: ಖಂಡಿತವಾಗಿಯೂ ಆ್ಯಕ್ಟಿವ್ ಫಂಡ್‌ಗಳು ಇಂಡೆಕ್ಸ್ ಫಂಡ್‌ಗಳಿಗಿಂತ ಹೆಚ್ಚು ಲಾಭ ನೀಡುವ ಸಾಮರ್ಥ್ಯ ಹೊಂದಿವೆ. ಆದರೆ, ಆ್ಯಕ್ಟಿವ್ ಫಂಡ್‌ಗಳ ಪೈಕಿ ಯಾವ ಫಂಡ್ ಉತ್ತಮವಾಗಿ ಲಾಭ ನೀಡುತ್ತಿದೆ ಎನ್ನುವುದನ್ನು ನೀವು ನಿರಂತರವಾಗಿ ಗಮನಿಸುತ್ತಿರಬೇಕು. ಹೆಚ್ಚು ತಲೆನೋವು ಬೇಡ, ಹೂಡಿಕೆ ರಿಸ್ಕ್ ಕಡಿಮೆಯಿದ್ದರೆ ಒಳ್ಳೆಯದು ಎನ್ನುವವರು ಇಂಡೆಕ್ಸ್ ಫಂಡ್ ಪರಿಗಣಿಸಬಹುದು. ಹೂಡಿಕೆ ವೈವಿಧ್ಯತೆ ಕಾಯ್ದುಕೊಳ್ಳುವುದಕ್ಕೂ ಇಂಡೆಕ್ಸ್ ಫಂಡ್ ಒಳ್ಳೆಯ ಆಯ್ಕೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಅನಿಶ್ಚಿತತೆಯ ನಡುವೆ ಜಿಗಿದ ಷೇರುಪೇಟೆ

ಅನಿಶ್ಚಿತತೆಯ ನಡುವೆಯೂ ಆಗಸ್ಟ್ 27ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ. 56,124 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.43ರಷ್ಟು ಜಿಗಿದಿದೆ. 16,705 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.54ರಷ್ಟು ಹೆಚ್ಚಳವಾಗಿದೆ. ಬಿಎಸ್‌ಇ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 2ರಿಂದ ಶೇ 2.5ರಷ್ಟು ಏರಿಕೆ ದಾಖಲಿಸಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ತೈಲ ಮತ್ತು ಅನಿಲ ಸೂಚ್ಯಂಕ ಶೇ 4.4ರಷ್ಟು ಹೆಚ್ಚಳ ಕಂಡಿದೆ. ನಿಫ್ಟಿ ಎನರ್ಜಿ, ಲೋಹ ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕಗಳು ಶೇ 2ರಿಂದ ಶೇ 3ರಷ್ಟು ಜಿಗಿದಿವೆ. ವಾಹನ ಸೂಚ್ಯಂಕ ಶೇ 1ರಷ್ಟು ಕುಸಿದಿದೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಹಿಂಡಾಲ್ಕೋ ಶೇ 8.49ರಷ್ಟು, ಬಜಾಜ್ ಫಿನ್‌ಸರ್ವ್ ಶೇ 8.06ರಷ್ಟು, ಒಎನ್‌ಜಿಸಿ ಶೇ 5.85ರಷ್ಟು, ಅದಾನಿ ಪೋರ್ಟ್ಸ್ ಶೇ 5.65ರಷ್ಟು ಮತ್ತು ಟಿಸಿಎಸ್ ಶೇ 4.51ರಷ್ಟು ಜಿಗಿತ ಕಂಡಿವೆ. ಮಾರುತಿ ಸುಜುಕಿ, ಏರ್‌ಟೆಲ್, ಟೈಟಾನ್ ಮತ್ತು ಪಿರಾಮಲ್ ಎಂಟರ್‌ಪ್ರೈಸಸ್ ಕುಸಿತ ಕಂಡಿವೆ.

ಮುನ್ನೋಟ: ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕಳೆದ ವಾರ ಉತ್ತಮ ಏರಿಕೆ ಕಂಡಿವೆ. ಅದು ಈ ವಾರವೂ ಮುಂದುವರಿಯಲಿದೆಯೇ ಎನ್ನುವುದನ್ನು ಕಾದು ನೋಡಬೇಕಿದೆ. ಏರ್‌ಟೆಲ್ ಬಂಡವಾಳ ಸಂಗ್ರಹಣೆ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಆಗಸ್ಟ್ ವಾಹನ ಮಾರಾಟ ದತ್ತಾಂಶ ಹೊರಬೀಳಲಿದೆ. ಕಂಪನಿಗಳು ಮುಂದಿನ ತ್ರೈಮಾಸಿಕ ಫಲಿತಾಂಶಗಳ ಬಗ್ಗೆ ಯಾವ ಮುನ್ನೋಟ ಹೊಂದಿರಲಿವೆ ಎನ್ನುವುದು ಕೂಡ ಮುಖ್ಯವಾಗಲಿದೆ.

ವಾರಾಂತ್ಯದಲ್ಲಿ ಅಮೆರಿಕದ ಉದ್ಯೋಗ ಅಂಕಿ–ಅಂಶ ಹೊರಬೀಳಲಿದ್ದು, ಈ ಎಲ್ಲಾ ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿವೆ.

ಸುಲಲಿತ ವಹಿವಾಟಿಗೆ ತಳಮಟ್ಟದಲ್ಲಿ ತೊಡಕು: ಸಿಐಐ ಸಮೀಕ್ಷೆ

ನವದೆಹಲಿ (ಪಿಟಿಐ): ಸುಲಲಿತ ವಹಿವಾಟು ನಡೆಸುವುದಕ್ಕೆ ತಳಮಟ್ಟದಲ್ಲಿ ತೊಡಕು ಇರುವುದು ಹಾಗೂ ವ್ಯಾಪಾರ ನಡೆಸಲು ಹೆಚ್ಚು ವೆಚ್ಚ ಮಾಡಬೇಕಿರುವುದು ಖಾಸಗಿ ವಲಯದ ಉತ್ಸಾಹಕ್ಕೆ ಅಡ್ಡಿಪಡಿಸುತ್ತಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟವು (ಸಿಐಐ) ಭಾನುವಾರ ಬಿಡುಗಡೆ ಮಾಡಿರುವ ಸಮೀಕ್ಷೆಯಲ್ಲಿ ಹೇಳಲಾಗಿದೆ.

ಕೇಂದ್ರ ಸರ್ಕಾರವು ಜಾರಿಗೆ ತಂದ ಬೆಳವಣಿಗೆ ಪರ ಕ್ರಮಗಳು ಹಾಗೂ ಘೋಷಣೆಗಳಿಂದಾಗಿ ಖಾಸಗಿ ವಲಯದಲ್ಲಿನ ಉತ್ಸಾಹವು ಹೆಚ್ಚಾಗಲಿದ್ದು, 2021–22ರಲ್ಲಿ ಕಾರ್ಪೊರೇಟ್ ವಲಯದ ಕಾರ್ಯಕ್ಷಮತೆಯು ಗಣನೀಯ ಚೇತರಿಕೆ ಕಂಡುಕೊಳ್ಳುವ ನಿರೀಕ್ಷೆ ಮಾಡಲಾಗಿದೆ ಎಂದೂ ತಿಳಿಸಿದೆ.

ಸುಲಲಿತ ವಹಿವಾಟು ನಡೆಸುವುದಕ್ಕೆ ತಳಮಟ್ಟದಲ್ಲಿ ಈಗಲೂ ತೊಡಕುಗಳು ಇವೆ ಎಂದು ಶೇ 51ರಷ್ಟು ಸಿಇಒಗಳು ಪ್ರತಿಕ್ರಿಯೆ ನೀಡಿದ್ದಾರೆ. ವೆಚ್ಚವು ಗರಿಷ್ಠ (ಬಂಡವಾಳ ವೆಚ್ಚ ಹೊರತುಪಡಿಸಿ) ಮಟ್ಟದಲ್ಲಿರುವುದು ವಹಿವಾಟು ನಡೆಸಲು ಕಷ್ಟವಾಗುತ್ತಿದೆ ಎಂದು ಶೇ 32ರಷ್ಟು ಸಿಇಒಗಳು ಹೇಳಿದ್ದಾರೆ ಎಂದು ಸಿಐಐ ಪ್ರಕಟಣೆಯಲ್ಲಿ ತಿಳಿಸಿದೆ.

ಸಿಐಐ ನಡೆಸಿದ ಸಮೀಕ್ಷೆಯಲ್ಲಿ 117 ಸಿಇಒಗಳು ಭಾಗವಹಿಸಿದ್ದರು. 2019–20ರ ಮೊದಲಾರ್ಧಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ತಮ್ಮ ಕಂಪನಿಯ ವರಮಾನದ ಬೆಳವಣಿಗೆಯು ಶೇ 10ಕ್ಕಿಂತಲೂ ಹೆಚ್ಚಿಗೆ ಇರುವ ನಿರೀಕ್ಷೆ ಇದೆ ಎಂದು ಶೇ 46ರಷ್ಟು ಸಿಇಒಗಳು ಅಭಿಪ್ರಾಯಪಟ್ಟಿದ್ದಾರೆ.

ಕಂಪನಿಗಳ ವರಮಾನ ಮತ್ತು ಲಾಭದ ಬೆಳವಣಿಗೆಯು ಕೋವಿಡ್‌ಗೂ ಮುಂಚಿನ ಮಟ್ಟಕ್ಕಿಂತ ಉತ್ತಮವಾಗಿರಲಿದೆ ಎನ್ನುವುದನ್ನು ಸಿಇಒಗಳ ಅಭಿಪ್ರಾಯವು ಸೂಚಿಸುತ್ತಿದೆ ಎಂದು ಸಿಐಐ ಹೇಳಿದೆ.

2021–22ರಲ್ಲಿ ಹಣದುಬ್ಬರವು ಶೇ 6ರ ಮಟ್ಟದಲ್ಲಿ ಇರಲಿದ್ದು, ಬೆಳವಣಿಗೆಗೆ ಉತ್ತೇಜಿಸಲು ಆರ್‌ಬಿಐ ಬಡ್ಡಿದರವನ್ನು ಕಡಿಮೆ ಮಟ್ಟದಲ್ಲಿಯೇ ಕಾಯ್ದುಕೊಳ್ಳಲು ಸಹಾಯಕ ಆಗಲಿದೆ ಎನ್ನುವುದು ಶೇ 70ರಷ್ಟು ಸಿಇಒಗಳ ಅಭಿಪ್ರಾಯ ಎಂದು ಸಮೀಕ್ಷೆಯು ತಿಳಿಸಿದೆ.

ವಿವಾದ್ ಸೆ ವಿಶ್ವಾಸ್: ಸೆ. 30ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): 'ವಿವಾದ್ ಸೆ ವಿಶ್ವಾಸ್' ಯೋಜನೆಯ ಅಡಿ ನೇರ ತೆರಿಗೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳುವ ಗಡುವನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಣೆ ಮಾಡಿರುವುದಾಗಿ ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ವಿವಾದ್ ಸೆ ವಿಶ್ವಾಸ್ ಕಾಯ್ದೆಯ ಅಡಿಯಲ್ಲಿ ಪಾವತಿಗೆ ಸಂಬಂದಿಸಿದ ಅರ್ಜಿ ನಮೂನೆ ಸಂಖ್ಯೆ 3ರ ವಿತರಣೆ ಮತ್ತು ತಿದ್ದುಪಡಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಗಣಿಸಿ ಯಾವುದೇ ಹೆಚ್ಚುವರಿ ಮೊತ್ತ ಇಲ್ಲದೇ ಸೆಪ್ಟೆಂಬರ್ 30ರವರೆಗೂ ತೆರಿಗೆ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸಚಿವಾಲಯವು ಈ ಹಿಂದಿನ ಆದೇಶದಲ್ಲಿ ಗಡುವನ್ನು ಆಗಸ್ಟ್ 31ರವರೆಗೂ ವಿಸ್ತರಣೆ ಮಾಡಿತ್ತು. ಹೀಗಿದ್ದರೂ ಹೆಚ್ಚುವರಿ ಬಡ್ಡಿಯೊಂದಿಗೆ ಅಕ್ಟೋಬರ್ 31ರವರೆಗೂ ತೆರಿಗೆ ಮೊತ್ತ ಪಾವತಿಸಲು ತೆರಿಗೆದಾರರಿಗೆ ಅವಕಾಶ ಇದೆ. ಈ ದಿನಾಂಕವನ್ನು ಮತ್ತೆ ಮುಂದೂಡುವ ಪ್ರಸ್ತಾವ ಇಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಯೋಜನೆಯಡಿ ಆಗಸ್ಟ್ 9ರವರೆಗೆ ಸುಮಾರು ₹ 53,684 ಕೋಟಿ ಬೊಕ್ಕಸಕ್ಕೆ ಪಾವತಿಯಾಗಿದೆ. ಈಗಾಗಲೇ ಸಲ್ಲಿಸಿರುವ ಘೋಷಣೆಗಳ ಆಧಾರದ ಮೇಲೆ ಇನ್ನೂ ಹೆಚ್ಚಿನ ಮೊತ್ತ ಬರುವ ನಿರೀಕ್ಷೆಯಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಈಚೆಗಷ್ಟೇ ಸಂಸತ್ತಿಗೆ ಮಾಹಿತಿ ನೀಡಿದ್ದಾರೆ.

ಎಲ್‌ಐಸಿ ಐಪಿಒಗೆ 10 ಮರ್ಚೆಂಟ್ ಬ್ಯಾಂಕರ್

ನವದೆಹಲಿ (ಪಿಟಿಐ): ಗೋಲ್ಡ್‌ಮನ್ ಸ್ಯಾಚ್ಸ್ ಸಮೂಹ, ಜೆಪಿ ಮೋರ್ಗನ್ ಚೇಸ್ ಆ್ಯಂಡ್ ಕೊ ಮತ್ತು ಐಸಿಐಸಿಐ ಸೆಕ್ಯುರಿಟೀಸ್ ಸೇರಿದಂತೆ 10 ಮರ್ಚೆಂಟ್ ಬ್ಯಾಂಕರ್‌ಗಳು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ನಿರ್ವಹಣೆ ಮಾಡಲಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಈ ಸಂಬಂಧ 10 ಮರ್ಚೆಂಟ್ ಬ್ಯಾಂಕರ್‌ಗಳ ಪಟ್ಟಿಯನ್ನು ಸರ್ಕಾರ ಸಿದ್ಧಪಡಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಐಪಿಒ ನಿರ್ವಹಣೆ ಮಾಡುವ ಸಲುವಾಗಿ ಒಟ್ಟು 16 ದೇಶಿ ಮತ್ತು ಅಂತರರಾಷ್ಟ್ರೀಯ ಕಂಪನಿಗಳು ಆಗಸ್ಟ್ 26ರಂದು ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಗೆ (ಡಿಐಪಿಎಎಂ) ಅರ್ಜಿ ಸಲ್ಲಿಸಿದ್ದವು.

ಎಲ್‌ಐಸಿ ಐಪಿಒ ಗಾತ್ರವು ಭಾರತದ ಬಂಡವಾಳ ಮಾರುಕಟ್ಟೆಗಳಲ್ಲಿ ಇದುವರೆಗೆ ನಡೆದಿರುವ ಎಲ್ಲ ಐಪಿಒಗಳಿಗಿಂತ ಬಹಳ ದೊಡ್ಡದಾಗಿರುವ ನಿರೀಕ್ಷೆ ಇದೆ.

ಮಿಲಿಮನ್ ಅಡ್ವೈಸರಿ ಎಲ್‌ಎಲ್‌ಪಿ ಇಂಡಿಯಾ ಕಂಪನಿಯು ಎಲ್‌ಐಸಿಯ ಮೌಲ್ಯದ ಅಂದಾಜು ಮಾಡಿದ ಬಳಿಕ ಸರ್ಕಾರವು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಐಪಿಒ ದಾಖಲೆಪತ್ರಗಳನ್ನು ಸಲ್ಲಿಸಲಿದೆ.

65 ವರ್ಷ ಆಗಿದ್ದರೂ ಈಕ್ವಿಟಿಯಲ್ಲಿ ಶೇ 50ರಷ್ಟು ಹೂಡಿಕೆಗೆ ಅವಕಾಶ

ನವದೆಹಲಿ (ಪಿಟಿಐ): 65 ವರ್ಷ ವಯಸ್ಸಾದ ನಂತರ ಎನ್‌ಪಿಎಸ್ (ರಾಷ್ಟ್ರೀಯ ಪಿಂಚಣಿ ಯೋಜನೆ) ಸೇರುವವರಿಗೆ ಈ ಯೋಜನೆಯನ್ನು ಇನ್ನಷ್ಟು ಆಕರ್ಷಕವಾಗಿಸುವ ಉದ್ದೇಶದಿಂದ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ), ಚಂದಾದಾರರ ಹೂಡಿಕೆಯ ಶೇಕಡ 50ರಷ್ಟು ಮೊತ್ತವನ್ನು ಈಕ್ವಿಟಿಗಳಲ್ಲಿ ತೊಡಗಿಸಲು ಅವಕಾಶ ಕಲ್ಪಿಸಿದೆ.

70 ವರ್ಷ ವಯಸ್ಸಿನವರೆಗೆ ಎನ್‌ಪಿಎಸ್ ಸೇರಲು ಈಗ ಅವಕಾಶ ಇದೆ. ಭಾರತದ ಯಾವುದೇ ಪ್ರಜೆ ಅಥವಾ ಯಾವುದೇ ಸಾಗರೋತ್ತರ ಭಾರತೀಯ ಪ್ರಜೆ (ಒಸಿಐ) 65 ವರ್ಷದಿಂದ 70 ವರ್ಷ ವಯಸ್ಸಿನ ನಡುವೆ ಎನ್‌ಪಿಎಸ್ ಯೋಜನೆ ಸೇರಬಹುದು ಹಾಗೂ 75 ವರ್ಷ ವಯಸ್ಸಾಗುವವರೆಗೆ ಹೂಡಿಕೆ ಮುಂದುವರಿಸಬಹುದು ಎಂದು ಪಿಎಫ್‌ಆರ್‌ಡಿಎ ಹೇಳಿದೆ. ಎನ್‌ಪಿಎಸ್ ಖಾತೆ ಸ್ಥಗಿತಗೊಳಿಸಿರುವ ವ್ಯಕ್ತಿಗಳು ಕೂಡ, ವಯೋಮಿತಿ ಸಡಿಲಿಕೆಯ ಪ್ರಯೋಜನ ಪಡೆದು ಹೊಸ ಖಾತೆ ತೆರೆಯಬಹುದು ಎಂದು ಹೇಳಲಾಗಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹271-434
ದ್ವಿತಳಿ (ಬಿ.ವಿ)	₹259-521

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹421

'ಮನದ ಮಾತು' ಬಾನುಲಿ ಕಾರ್ಯಕ್ರಮ: ಬಾಹ್ಯಾಕಾಶ ಸಾಧನೆಗೆ ಮೋದಿ ಮೆಚ್ಚುಗೆ

'ಸ್ಟಾರ್ಟ್‌ಅಪ್ ಬೆಳವಣಿಗೆ ಆಶಾದಾಯಕ'

ಮನದ ಮಾತು

ನವದೆಹಲಿ (ಪಿಟಿಐ): 'ಯುವ ಜನತೆಯ ಸಕ್ರಿಯ ಪಾಲ್ಗೊಳ್ಳುವಿಕೆ, ಉತ್ಸಾಹ ಹೆಚ್ಚುತ್ತಿರುವ ಕಾರಣ ಭಾರತದಲ್ಲಿ ಸ್ಟಾರ್ಟ್‌ಅಪ್ ಸಂಸ್ಕೃತಿ ತೀವ್ರವಾಗಿ ಬೆಳೆಯುತ್ತಿದೆ. ಇದು ಆಶಾದಾಯಕ ಬೆಳವಣಿಗೆ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಅಭಿಪ್ರಾಯಪಟ್ಟರು.

ಮೋದಿ

'ಸಣ್ಣ ನಗರಗಳಲ್ಲಿರುವ ಯುವಕರು ಸಹ ಸ್ಟಾರ್ಟ್‌ಅಪ್ ಆರಂಭಿಸುತ್ತಿದ್ದು, ಇದು ದೇಶದ ಉಜ್ವಲ ಭವಿಷ್ಯದ ಸೂಚನೆಯಾಗಿದೆ' ಎಂದೂ ಹೇಳಿದರು.

'ಮನದ ಮಾತು' ಬಾನುಲಿ ಭಾಷಣ ಸರಣಿಯ ಆಗಸ್ಟ್ ತಿಂಗಳ ಸಂಚಿಕೆಯಲ್ಲಿ ಅವರು ಸ್ಟಾರ್ಟ್‌ಅಪ್ ಕ್ಷೇತ್ರ, ದೇಶದ ಆಧ್ಯಾತ್ಮಿಕ ಪರಂಪರೆ ಹಾಗೂ ತಂತ್ರಜ್ಞಾನದ ಕುರಿತು ತಮ್ಮ ವಿಚಾರಗಳನ್ನು ಹಂಚಿಕೊಂಡರು.

'ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದೆ. ಇದರ ಫಲವಾಗಿ ಬರುವ ದಿನಗಳಲ್ಲಿ ಅಂತರಿಕ್ಷದಲ್ಲಿ ಭಾರಿ ಸಂಖ್ಯೆಯ ಉಪಗ್ರಹಗಳನ್ನು ಕಾಣಬಹುದಾಗಿದೆ. ಇವುಗಳನ್ನು ನಮ್ಮ ವಿಶ್ವವಿದ್ಯಾಲಯಗಳು, ಪ್ರಯೋಗಾಲಯಗಳು ಹಾಗೂ ಅಂತರಿಕ್ಷ ಕ್ಷೇತ್ರದ ಕಂಪನಿಗಳಲ್ಲಿನ ಯುವ ಸಂಶೋಧಕರೇ ವಿನ್ಯಾಸಗೊಳಿಸಿರುತ್ತಾರೆ ಎಂಬ ವಿಶ್ವಾಸ ನನ್ನದು' ಎಂದರು.

'ಯುವ ಪೀಳಿಗೆಯ ಮನೋಭಾವ ಬದಲಾಗಿದೆ. ಹೊಸ ಗುರಿಯೊಂದಿಗೆ ಹೆಜ್ಜೆ ಇಡುತ್ತಿರುವ ಯುವ ಸಮುದಾಯ ತಮ್ಮ ಗುರಿ ಸಾಧನೆಗೆ ಹೊಸ ದಾರಿಗಳನ್ನು ಅನ್ವೇಷಿಸುತ್ತಿದ್ದಾರೆ' ಎಂದರು.

ದೇಶದ ಜನತೆಗೆ ಶ್ರೀಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳನ್ನು ಕೋರಿದ ಅವರು, 'ನಮ್ಮ ಹಬ್ಬಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಅವುಗಳ ಹಿಂದಿರುವ ವೈಜ್ಞಾನಿಕ ಅರ್ಥ– ಆಶಯವನ್ನು ತಿಳಿದುಕೊಳ್ಳಬೇಕು' ಎಂದೂ ಹೇಳಿದರು.

'ಮುಂಬರಲಿರುವ ವಿಶ್ವಕರ್ಮ ಪೂಜಾ ದಿನವು, ವಿವಿಧ ಕೌಶಲಗಳಿಗೆ ಗೌರವ ಸಲ್ಲಿಸುವುದನ್ನು ಸೂಚಿಸುತ್ತದೆ' ಎಂದರು.

ಗುಜರಾತ್‌ನ ಕೇವಡಿಯಾದಲ್ಲಿನ ಎಫ್‌ಎಂ ರೇಡಿಯೊ ಕಾರ್ಯಕ್ರಮದಲ್ಲಿ ರೇಡಿಯೊ ಜಾಕಿಗಳು ಸಂಸ್ಕೃತ ಭಾಷೆಗೆ ಉತ್ತೇಜನ ನೀಡುವ ಕೆಲಸ ಮಾಡುತ್ತಿರುವುದನ್ನೂ ಪ್ರಸ್ತಾಪಿಸಿದರು.

ಸಾರ್ವಜನಿಕರು, ಕೋವಿಡ್–19 ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಪ್ರಧಾನಿ ಆಗ್ರಹಿಸಿದರು.

'ಒಲಿಂಪಿಕ್ಸ್ ಸಾಧನೆಯಿಂದ ಕ್ರೀಡೆಗೆ ಉತ್ತೇಜನ'

ಹಾಕಿ ಮಾಂತ್ರಿಕ ಧ್ಯಾನ್ ಚಂದ್ ಅವರ ಜನ್ಮದಿನದ ಸ್ಮರಣೆಗಾಗಿ ಪ್ರತಿ ವರ್ಷ ಆಗಸ್ಟ್ 29ರಂದು ರಾಷ್ಟ್ರೀಯ ಕ್ರೀಡಾ ದಿನ ಆಚರಿಸಲಾಗುತ್ತದೆ. ಈ ಸಂದರ್ಭವನ್ನು, ಕ್ರೀಡಾ ಕ್ಷೇತ್ರದ ಸಾಧನೆ–ಕನಸುಗಳನ್ನು ಜನರ ಮುಂದಿಡಲು ಪ್ರಧಾನಿ ಮೋದಿ ಬಳಸಿಕೊಂಡರು.

'ಟೋಕಿಯೊ ಒಲಿಂಪಿಕ್ಸ್‌ನಲ್ಲಿನ ಸಾಧನೆಯಿಂದ ದೇಶದ ಕ್ರೀಡಾ ಸಂಸ್ಕೃತಿಗೆ ಉತ್ತೇಜನ ಸಿಕ್ಕಿದೆ' ಎಂದ ಅವರು, 'ನಾಲ್ಕು ದಶಕಗಳ ನಂತರ ಹಾಕಿಯಲ್ಲಿ ಪುರುಷರ ತಂಡ ಪದಕ ಗೆದ್ದಿದೆ. ಇದರಿಂದ ಪ್ರೇರಣೆಗೊಂಡಿರುವ ಯುವಕರು ಕ್ರೀಡೆಗಳತ್ತ ಒಲವು ತೋರುತ್ತಿದ್ದಾರೆ. ಇದುವೇ ಧ್ಯಾನ್ ಚಂದ್ ಅವರಿಗೆ ನಾವು ಸಲ್ಲಿಸಬಹುದಾದ ಬಹು ದೊಡ್ಡ ಗೌರವ' ಎಂದರು.

'ಕ್ರೀಡಾ ಚಟುವಟಿಕೆಗಳತ್ತ ಯುವ ಜನರು ಆಕರ್ಷಿತರಾಗಿದ್ದಾರೆ. ಈ ಬದಲಾವಣೆ ಹಾಗೂ ಆದ್ಯತೆಗೆ ಎಷ್ಟು ಸಾಧ್ಯವೋ ಅಷ್ಟು ನಾವೆಲ್ಲರೂ ನೀರೆರೆದು ಪೋಷಿಸಬೇಕು. ಗ್ರಾಮೀಣ ಮಟ್ಟದಲ್ಲಿಯೂ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಬೇಕು. ಸರ್ವರ ಪ್ರಯತ್ನದಿಂದ ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಸಾಧನೆ ಸಾಧ್ಯ' ಎಂದು ಪ್ರತಿಪಾದಿಸಿದರು.

ಉದ್ಧವ್ ಠಾಕ್ರೆ ಆಪ್ತ ಅನಿಲ್ ಪರಬ್‌ಗೆ ಇ.ಡಿ ನೋಟಿಸ್

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಆಪ್ತ ಹಾಗೂ ಸಾರಿಗೆ ಸಚಿವ ಅನಿಲ್ ಪರಬ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ನೋಟಿಸ್ ನೀಡಿದೆ.

ಪರಬ್ ಅವರಿಗೆ ನೀಡಿರುವ ನೋಟಿಸ್‌ನ ವಿವರಗಳು ತಿಳಿದಿಲ್ಲ. ಆದರೆ, ಶಿವಸೇನಾದ ಮುಖ್ಯ ವಕ್ತಾರ ಹಾಗೂ ಸಂಸದ ಸಂಜಯ್ ರಾವುತ್ ಅವರು ಪರಬ್‌ಗೆ ಇ.ಡಿ ನೋಟಿಸ್ ಜಾರಿಯಾಗಿರುವ ಕುರಿತು ದೃಢಪಡಿಸಿದ್ದಾರೆ.

'ಮಂಗಳವಾರ ಇ.ಡಿ ಮುಂಬೈ ಕಚೇರಿಗೆ ಹಾಜರಾಗುವಂತೆ ಪರಬ್‌ಗೆ ಸೂಚಿಸಲಾಗಿದೆ. ಬಿಜೆಪಿಯ 'ಜನ ಆಶೀರ್ವಾದ್ ಯಾತ್ರೆ' ಮುಕ್ತಾಯಗೊಂಡಿದ್ದು, ಪರಬ್ ತಕ್ಷಣವೇ ನೋಟಿಸ್ ಸ್ವೀಕರಿಸಿದ್ದಾರೆ' ಎಂದೂ ರಾವುತ್ ತಿಳಿಸಿದ್ದಾರೆ.

ಒಂದು ದಿನದ ಹಿಂದೆಯಷ್ಟೆ ಬಿಜೆಪಿ ಸಂಸದ ಹಾಗೂ ಕೇಂದ್ರ ಸಚಿವ ನಾರಾಯಣ ರಾಣೆ ಅವರು 'ಜನ ಆಶೀರ್ವಾದ್ ಯಾತ್ರೆ' ಸಂದರ್ಭದಲ್ಲಿ ಮರಾಠಿ ಟಿ.ವಿ ವಾಹಿನಿಯೊಂದರಲ್ಲಿ ನಡೆದ ಚರ್ಚೆಯಲ್ಲಿ, 'ಅನೇಕ ನಾಯಕರು ಇ.ಡಿ ಮತ್ತು ಸಿಬಿಐ ನಿಗಾದಲ್ಲಿದ್ದಾರೆ' ಎಂದು ಹೇಳಿದ್ದರು.

'ಉದ್ಧವ್ ಠಾಕ್ರೆ ಕೆನ್ನೆಗೆ ಹೊಡೆಯುತ್ತಿದ್ದೆ' ಎನ್ನುವ ರಾಣೆ ಹೇಳಿಕೆಗೆ ಪ್ರತಿಕ್ರಿಯಿಸಿದ್ದ ಪರಬ್, ರಾಣೆಯನ್ನು ಬಂಧಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಅನಿಲ್ ಪರಬ್ ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಸರ್ಕಾರ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಪೊಲೀಸ್ ಅಧಿಕಾರಿ ಸಚಿನ್ ವಾಜೆ ಪ್ರಕರಣದಲ್ಲೂ ಪರಬ್ ಅವರ ವಿರುದ್ಧ ಆರೋಪ ಕೇಳಿಬಂದಿತ್ತು.

ಸಂಕ್ಷಿಪ್ತ ಸುದ್ದಿ

ಕೇರಳದಲ್ಲಿ ಭಾರಿ ಮಳೆ: ಆರೆಂಜ್ ಅಲರ್ಟ್ ಘೋಷಣೆ

ಕೊಚ್ಚಿ: ಕೇರಳದಲ್ಲಿ ಭಾರಿ ಮಳೆಯಾಗುತ್ತಿದ್ದು, ಕೆಲವು ಪ್ರದೇಶಗಳಲ್ಲಿ ಭಾನುವಾರ 10 ಸೆ.ಮೀ. ಮಳೆ ಸುರಿದಿದೆ. ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಆರೆಂಜ್ ಅಲರ್ಟ್ ಘೋಷಿಸಿದೆ.

ಭಾರಿ ಮಳೆ ಸುರಿಯುವ ಸಾಧ್ಯತೆ ಇರುವುದರಿಂದ ಕೊಟ್ಟಾಯಂ, ಎರ್ನಾಕುಳಂ, ಇಡುಕ್ಕಿ, ತ್ರಿಶ್ಶೂರ್, ಪಾಲಕ್ಕಾಡ್, ಮಲಪ್ಪುರ, ಕೋಯಿಕ್ಕೋಡ್, ವಯನಾಡ್ ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಅರಬ್ಬಿ ಸಮುದ್ರದಲ್ಲಿ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ ಮೀನುಗಾರರು ಆಗಸ್ಟ್ 30ರವರೆಗೆ ಸಮುದ್ರಕ್ಕಿಳಿಯಬಾರದು ಎಂದು ಐಎಂಡಿ ಎಚ್ಚರಿಕೆ ನೀಡಿದೆ.

ಟಿಎಂಸಿಗೆ ಮರಳಿದ ಶಿಖಾ ಮಿತ್ರಾ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಕಾಂಗ್ರೆಸ್ ರಾಜ್ಯ ಘಟಕದ ಮಾಜಿ ಅಧ್ಯಕ್ಷ ದಿವಂಗತ ಸೋಮೆನ್ ಮಿತ್ರಾ ಅವರ ಪತ್ನಿ ಶಿಖಾ ಮಿತ್ರಾ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಭಾನುವಾರ ಮರಳಿದ್ದಾರೆ.

ತೃಣಮೂಲ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಶಾಸಕರಾಗಿದ್ದ ಶಿಖಾ ಮಿತ್ರಾ ಅವರು 2014ರಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆದರೆ, ತಾವು ಅಧಿಕೃತವಾಗಿ ಪಕ್ಷವನ್ನು ತೊರೆದಿರಲಿಲ್ಲ ಎಂದು ಮಿತ್ರಾ ಹೇಳಿಕೊಂಡಿದ್ದಾರೆ.

ಗಾಜಾ ನಗರದ ಮೇಲೆ ಇಸ್ರೇಲ್ ವಾಯುಪಡೆ ದಾಳಿ

ಗಾಜಾ ನಗರ, ಪ್ಯಾಲೆಸ್ಟೀನ್ ಪ್ರಾಂತ್ಯ (ಎಎಫ್‌ಪಿ): ಇಸ್ರೇಲ್ ವಾಯುಪಡೆಯು ಗಾಜಾ ನಗರದ ಎರಡು ಕಡೆ ದಾಳಿ ನಡೆಸಿದೆ ಎಂದು ಸೇನೆಯು ತಿಳಿಸಿದೆ. ಸ್ಥಳೀಯರು ಸೇನೆ ಸಿಬ್ಬಂದಿ ಜೊತೆಗೆ ಸಂಘರ್ಷಕ್ಕೆ ಇಳಿದಿದ್ದು, ಸೇನೆ ವಿರುದ್ಧ ಬಿಸಿಗಾಳಿ ಬಲೂನು ಉಡಾವಣೆ ಮಾಡಿದ ಹಿಂದೆಯೇ ಈ ದಾಳಿ ನಡೆದಿದೆ ಎಂದು ತಿಳಿಸಿದೆ.

ಗಾಜಾ ಪಟ್ಟಿಯುದ್ದಕ್ಕೂ ಇದ್ದ ಪ್ರವಾಸ ನಿರ್ಬಂಧವನ್ನು ಇಸ್ರೇಲ್ ಮತ್ತು ಈಜಿಪ್ಟ್ ತೆರವುಗೊಳಿಸಿದ ಬೆಳವಣಿಗೆ ಹಿಂದೆಯೇ ಈ ದಾಳಿ ನಡೆದಿದೆ. ಶಸ್ತ್ರಾಸ್ತ್ರಗಳ ಉತ್ಪಾದನಾ ಮತ್ತು ತರಬೇತಿ ನೆಲೆ ಇದ್ದ ಹಮಾಸ್ ಸೇನೆ ತಾಣದ ಮೇಲೆ ಯುದ್ಧ ವಿಮಾನಗಳು ದಾಳಿ ನಡೆಸಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ದಾಳಿಯಿಂದ ಅನಾಹುತ ಸಂಭವಿಸಿರುವ ಕುರಿತು ಯಾವುದೇ ವರದಿ ಆಗಿಲ್ಲ.

ದೆಹಲಿ ಮೆಟ್ರೊ: ಲೈಂಗಿಕ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಶೌಚಾಲಯ

ಚಿತ್ರಕೃಪೆ: ಟ್ವಿಟರ್

ನವದೆಹಲಿ (ಪಿಟಿಐ): 'ದೆಹಲಿ ಮೆಟ್ರೊ ರೈಲುಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತ ಪ್ರಯಾಣಿಕರ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ಈ ಸಮುದಾಯಕ್ಕೆ ಮೆಟ್ರೊ ನಿಲ್ದಾಣಗಳಲ್ಲಿ ಪ್ರತ್ಯೇಕ ಶೌಚಾಲಯ ಸೌಲಭ್ಯಬಳಕೆಗೆ ಅವಕಾಶ ಕಲ್ಪಿಸಲಾಗಿದೆ' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಪ್ರಸ್ತುತ ದೆಹಲಿ ಮೆಟ್ರೊದ ವಿವಿಧ ನಿಲ್ದಾಣಗಳಲ್ಲಿ ಒಟ್ಟು 347 ಪ್ರತ್ಯೇಕ ಶೌಚಾಲಯಗಳಿವೆ. ಅಲ್ಪಸಂಖ್ಯಾತ ವ್ಯಕ್ತಿಯು ತಾನು ಗುರುತಿಸಿಕೊಂಡಿರುವಂತೆ ಲಿಂಗಾನುಸಾರ ಶೌಚಾಲಯ ವ್ಯವಸ್ಥೆಯನ್ನು ಬಳಸಬಹುದು' ಎಂದು ದೆಹಲಿ ಮೆಟ್ರೊ ರೈಲು ನಿಗಮದ (ಡಿಎಂಆರ್‌ಸಿ) ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಲೈಂಗಿಕ ಅಲ್ಪಸಂಖ್ಯಾತರ ವಿರುದ್ಧ ಲೈಂಗಿಕ ತಾರತಮ್ಯವನ್ನು ತಡೆಯುವುದು ಮತ್ತು ಅವರಿಗೆ ಸುರಕ್ಷಿತ ಸ್ಥಳವನ್ನು ಒದಗಿಸುವ ಪ್ರಯತ್ನದ ಭಾಗವಾಗಿ ದೆಹಲಿ ಮೆಟ್ರೊ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಿದೆ. ಅಂಗವಿಕಲರಿಗೆ ಮಾತ್ರವೇ ನಿಗದಿಗೊಳಿಸಲಾಗಿದ್ದ ಶೌಚಾಲಯಗಳನ್ನೇ ಲೈಂಗಿಕ ಅಲ್ಪಸಂಖ್ಯಾತರಿಗೂ ಬಳಕೆಗೆ ಮುಕ್ತಗೊಳಿಸಲಾಗಿದೆ' ಎಂದು ಡಿಎಂಆರ್‌ಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಯೆಮೆನ್ ಸೇನಾ ನೆಲೆ ಮೇಲೆ ದಾಳಿ: 30 ಯೋಧರ ಸಾವು

ಅಡೆನ್: ನೈಋತ್ಯ ಯೆಮೆನ್‌ನಲ್ಲಿ ಸೌದಿ ನೇತೃತ್ವದ ಮೈತ್ರಿಪಡೆಗಳ ಸೇನೆ ಮೇಲೆ ಹೂಥಿ ಬಂಡುಕೋರರು ನಡೆಸಿದ ದಾಳಿಯಲ್ಲಿ ಕನಿಷ್ಠ 30 ಯೋಧರು ಸಾವಿಗೀಡಾಗಿದ್ದಾರೆ. ಡ್ರೋನ್‌ಗಳು ಮತ್ತು ಖಂಡಾಂತರ ಕ್ಷಿಪಣಿಗಳ ಮೂಲಕ ಅಲ್–ಅನಾದ್ ಪ್ರದೇಶದಲ್ಲಿ ಈ ದಾಳಿ ನಡೆಸಲಾಗಿದೆ. ಈ ದಾಳಿಯಲ್ಲಿ 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸಾವಿಗೀಡಾದವರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಯೆಮಿನಿ ಪಡೆಗಳ ವಕ್ತಾರ ಮೊಹಮ್ಮದ್ ಅಲ್–ನಖೀಬ್ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ವಿಮಾನಯಾನ ಸೆ.30ರವರೆಗೆ ಸ್ಥಗಿತ

ನವದೆಹಲಿ: ಅಂತರರಾಷ್ಟ್ರೀಯ ಪ್ರಯಾಣಿಕರ ವಿಮಾನಯಾನವನ್ನು ಸ್ಥಗಿತಗೊಳಿಸಿರುವುದನ್ನು ಸೆಪ್ಟೆಂಬರ್ 30ರವರೆಗೂ ವಿಸ್ತರಿಸಲಾಗಿದೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

ಆದರೆ, ಕೆಲವು ಆಯ್ದ ಮಾರ್ಗಗಳಲ್ಲಿ ಸಂಬಂಧಿಸಿದ ಪ್ರಾಧಿಕಾರದ ಅನುಮತಿಯೊಂದಿಗೆ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದೆ.

ಬಾಹ್ಯಾಕಾಶ ನಿಲ್ದಾಣಕ್ಕೆ ಸ್ಪೇಸ್‌ಎಕ್ಸ್ ರಾಕೆಟ್

ಕೇಪ್ ಕ್ಯಾನವೆರಲ್ (ಎಪಿ): ಸ್ಪೇಸ್‌ಎಕ್ಸ್ ಈ ಬಾರಿ ಮತ್ತೊಂದು ಹೊಸ ಸಾಹಸ ಕೈಗೊಂಡಿದೆ. ಇರುವೆಗಳು, ಬೆಣ್ಣೆ ಹಣ್ಣು ಮತ್ತು ಮಾನವ ಗಾತ್ರದಷ್ಟು ರೊಬೊಟಿಕ್ ಕೈ ಇರುವ ರಾಕೆಟ್ ಅನ್ನು ಬಾಹ್ಯಾಕಾಶಕ್ಕೆ ಭಾನುವಾರ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಉಡಾವಣೆ ಮಾಡಿದೆ.

ದಶಕದಲ್ಲೇ ಇದು ನಾಸಾಗಾಗಿ ಸ್ಪೇಸ್‌ಎಕ್ಸ್ ಕಂಪನಿ ಕೈಗೊಂಡಿರುವ 23ನೇ ಕಾರ್ಯಾಚರಣೆಯಾಗಿದೆ. ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಭಾನುವಾರ ಬೆಳಿಗ್ಗೆ ಫಾಲ್ಕನ್ 9 ರಾಕೆಟ್ ಅನ್ನು ಉಡಾವಣೆ ಮಾಡಲಾಗಿದೆ. ಇದು ಸಾಮಗ್ರಿಗಳ ಮರುಪೂರೈಕೆಯ ಕಾರ್ಯಾಚರಣೆಯಾಗಿದೆ ಎಂದು ಸ್ಪೇಸ್‌ಎಕ್ಸ್ ಹೇಳಿದೆ.

ಸ್ಪೇಸ್‌ಎಕ್ಸ್ ಸಂಸ್ಥಾಪಕ ಎಲಾನ್ ಮಸ್ಕ್ ಅವರು ಈ ರಾಕೆಟ್‌ಗೆ ವಿಜ್ಞಾನ ಕಥೆಗಾರ ಇಯನ್ ಬ್ಯಾಂಕ್ಸ್ ಅವರ ಹೆಸರನ್ನು ನಾಮಕರಣ ಮಾಡಿದ್ದಾರೆ.

ಈ ರಾಕೆಟ್ ಒಟ್ಟಾರೆಯಾಗಿ 21.70 ಕ್ವಿಂಟಲ್ ತೂಕ ಹೊಂದಿದೆ. ಬಾಹ್ಯಾಕಾಶ ನಿಲ್ದಾಣದಲ್ಲಿರುವ ಏಳು ಗಗನಯಾತ್ರಿಗಳಿಗೆ ಬೆಣ್ಣೆ ಹಣ್ಣು, ಲಿಂಬೆ ಹಣ್ಣು, ಐಸ್‌ಕ್ರೀಂ ಸೇರಿದಂತೆ ವಿವಿಧ ಉಪಕರಣಗಳು ಮತ್ತು ಆಹಾರವನ್ನು ಕೊಂಡೊಯ್ಯಲಾಗಿದೆ.

ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಭಾನುವಾರ ಉಡಾವಣೆಯಾದ ಸ್ಪೇಸ್‌ಎಕ್ಸ್ ರಾಕೆಟ್ –ಎಪಿ/ಪಿಟಿಐ ಚಿತ್ರ

ಶನಿವಾರವೇ ಈ ರಾಕೆಟ್ ಉಡಾವಣೆಗೆ ಪ್ರಯತ್ನಿಸಲಾಗಿತ್ತು. ಆದರೆ, ಹವಾಮಾನ ವೈಪರೀತ್ಯದಿಂದ ಕೈಬಿಡಲಾಗಿತ್ತು. ಪರೀಕ್ಷೆಯ ಉದ್ದೇಶಕ್ಕಾಗಿ ಇರುವೆಗಳನ್ನು ಸಹ ಕಳುಹಿಸಲಾಗಿದೆ. ಜಪಾನ್‌ನ ನವೋದ್ಯಮ ಕಂಪನಿಯೊಂದು ಪ್ರಾಯೋಗಿಕವಾಗಿ ರೊಬೊಟಿಕ್ ಕೈ ಅನ್ನು ಕಳುಹಿಸಿದೆ.

ಅನಿಲ್ ದೇಶಮುಖ್‌ಗೆ ಕ್ಲೀನ್‌ಚಿಟ್ ನೀಡಿಲ್ಲ: ಸಿಬಿಐ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರನ್ನು ಸಿಬಿಐ ದೋಷಮುಕ್ತಗೊಳಿಸಿದೆ ಎನ್ನಲಾದ ವರದಿಗಳು ಪ್ರಕಟವಾಗಿದ್ದು ವಿವಾದಕ್ಕೀಡಾಗಿದೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಸಿಬಿಐ 'ದೇಶಮುಖ್ ಅವರ ವಿರುದ್ಧದ ಆರೋಪಗಳ ಬಗ್ಗೆ ನಡೆಯುತ್ತಿರುವ ತನಿಖೆ ಪ್ರಗತಿಯಲ್ಲಿದೆ. ದೇಶಮುಖ್ ಅವರಿಗೆ ಕ್ಲೀನ್‌ಚಿಟ್ ನೀಡಿಲ್ಲ' ಎಂದು ತಿಳಿಸಿದೆ.

'2021ರ ಏಪ್ರಿಲ್ 21ರಂದು ದಾಖಲಿಸಿರುವ ಎಫ್‌ಐಆರ್ ಸಿಬಿಐ ವೆಬ್‌ಸೈಟ್‌ನಲ್ಲಿ ಈಗಲೂ ಲಭ್ಯವಿದೆ' ಎಂದು ತಿಳಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಎನ್‌ಸಿಪಿ ವಕ್ತಾರ ಮತ್ತು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ನವಾಬ್ ಮಲೀಕ್, 'ಇದು ರಾಜಕೀಯ ದ್ವೇಷ ತೀರಿಸಿಕೊಳ್ಳುತ್ತಿರುವುದನ್ನು ತೋರಿಸುತ್ತದೆ ಮತ್ತು ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ' ಎಂದು ದೂರಿದ್ದಾರೆ. 'ಈ ಪ್ರಕರಣದ ಬಗ್ಗೆ ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ತನಿಖೆಯಾಗಬೇಕು' ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ರಾಮನಿಲ್ಲದ ಅಯೋಧ್ಯೆ ಏನೂ ಅಲ್ಲ: ರಾಷ್ಟ್ರಪತಿ

ಲಖನೌ (ಪಿಟಿಐ): 'ಭಗವಾನ್ ರಾಮನಿಲ್ಲದ ಅಯೋಧ್ಯೆಯು ಏನೂ ಅಲ್ಲ' ಎಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಹೇಳಿದ್ದಾರೆ. ಅಯೋಧ್ಯೆಗೆ ಭಾನುವಾರ ಭೇಟಿ ನೀಡಿದ್ದ ಅವರು ರಾಮಾಯಣ ಕುರಿತಾದ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

'ರಾಮನಿಲ್ಲದೆ ಅಯೋಧ್ಯೆಯು ಅಯೋಧ್ಯೆಯಾಗಿರುವುದಿಲ್ಲ. ರಾಮ ಇರುವಲ್ಲಿಯೇ ಅಯೋಧ್ಯೆ ಅಸ್ತಿತ್ವದಲ್ಲಿರುತ್ತದೆ. ಈ ನಗರದಲ್ಲಿ ಭಗವಾನ್ ರಾಮನು ಶಾಶ್ವತವಾಗಿ ನೆಲೆಸಿದ್ದಾನೆ. ಆದ್ದರಿಂದ ನಿಜವಾದ ಅರ್ಥದಲ್ಲಿ ಈ ಸ್ಥಳವು ಅಯೋಧ್ಯೆಯಾಗಿದೆ' ಎಂದಿದ್ದಾರೆ.

2019 ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಐತಿಹಾಸಿಕ ತೀರ್ಪಿನ ನಂತರ ಇದೇ ಮೊದಲ ಬಾರಿಗೆ ರಾಷ್ಟ್ರಪತಿಗಳು ರಾಮ ಮಂದಿರ ನಿರ್ಮಾಣವಾಗುತ್ತಿರುವ ಅಯೋಧ್ಯೆಗೆ ಭೇಟಿ ನೀಡಿದ್ದಾರೆ.

'ನನ್ನ ಕುಟುಂಬದ ಸದಸ್ಯರು ನನಗೆ ರಾಮನಾಥ ಕೋವಿಂದ ಎಂದು ಹೆಸರಿಟ್ಟಾಗ, ಅವರು ರಾಮ ಕಥಾ ಮತ್ತು ಭಗವಾನ್ ರಾಮನ ಬಗ್ಗೆ ಗೌರವ ಮತ್ತು ಪ್ರೀತಿಯ ಭಾವನೆಯನ್ನು ಹೊಂದಿದ್ದರು' ಎಂದು ತಿಳಿಸಿದ್ದಾರೆ.

ನಿಶಾದ್ ಕುಮಾರ್ ಅವರ ಜಿಗಿತದ ಭಂಗಿ –ರಾಯಿಟರ್ಸ್ ಚಿತ್ರ

ಭಾವಿನಾ ಬೆನ್ ಪಟೇಲ್ ಆಟದ ವೈಖರಿ– ಪಿಟಿಐ ಚಿತ್ರ

ಪ್ಯಾರಾಲಿಂಪಿಕ್ಸ್: ಪದಕ ಗೆದ್ದ ಭಾರತದ ಎರಡನೇ ಮಹಿಳಾ ಕ್ರೀಡಾಪಟು; ಹೈಜಂಪ್‌ನಲ್ಲಿ ದಾಖಲೆ

ಭಾವಿನಾ, ನಿಶಾದ್ ಬೆಳ್ಳಿ ಬೆಳಕು

ಟೋಕಿಯೊ (ಪಿಟಿಐ): ಪ್ಯಾರಾಲಿಂಪಿಕ್ಸ್‌ನ ಟೇಬಲ್ ಟೆನಿಸ್‌ನಲ್ಲಿ ಚಿನ್ನ ಗೆಲ್ಲುವ ಭಾವಿನಾ ಬೆನ್ ಪಟೇಲ್ ಅವರ ಕನಸು ಕೈಗೂಡಲಿಲ್ಲ. ಆದರೆ ಬೆಳ್ಳಿ ಪದಕ ಗಳಿಸಿ ಇತಿಹಾಸ ಬರೆದರು. ನಿಶಾದ್ ಕುಮಾರ್ ಪುರುಷರ ಟಿ–47 ವಿಭಾಗದ ಹೈಜಂಪ್‌ನಲ್ಲಿ ದಾಖಲೆಯೊಂದಿಗೆ ಬೆಳ್ಳಿ ಪದಕ ಗೆದ್ದು ಸಂಭ್ರಮಿಸಿದರು.

ಭಾನುವಾರ ನಡೆದ ಕ್ಲಾಸ್–4 ವಿಭಾಗದ ಫೈನಲ್ ಹಣಾಹಣಿಯಲ್ಲಿ ಭಾವಿನಾ ಬೆನ್ ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಚೀನಾದ ಯಿಂಗ್ ಜೌ ಎದುರು 7-11, 5-11, 6-11ರಲ್ಲಿ ಸೋತರು. ಈ ಮೂಲಕ ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಭಾರತದ ಎರಡನೇ ಮಹಿಳಾ ಕ್ರೀಡಾಪಟು ಎನಿಸಿಕೊಂಡರು. ಟೇಬಲ್ ಟೆನಿಸ್‌ನಲ್ಲಿ ಭಾರತಕ್ಕೆ ಇದು ಮೊದಲ ಪದಕ.

ಭಾರತ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷೆ, ದೀಪಾ ಮಲಿಕ್ ಕಳೆದ ಬಾರಿ ರಿಯೊ ಪ್ಯಾರಾಲಿಂಪಿಕ್ಸ್‌ನ ಶಾಟ್‌ಪಟ್‌ನಲ್ಲಿ ಬೆಳ್ಳಿ ಪದಕ ಗೆದ್ದು ಪದಕ ಗಳಿಸಿದ ಭಾರತದ ಮೊದಲ ಮಹಿಳಾ ಅಥ್ಲೀಟ್ ಎಂಬ ಶ್ರೇಯಸ್ಸು ತಮ್ಮದಾಗಿಸಿಕೊಂಡಿದ್ದರು.

ಲಂಡನ್ ಮತ್ತು ಬೀಜಿಂಗ್ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಸೇರಿದಂತೆ ಒಟ್ಟು ಐದು ಪದಕಗಳನ್ನು ಗೆದ್ದುಕೊಂಡಿರುವ ಮತ್ತು ಆರು ಬಾರಿಯ ವಿಶ್ವ ಚಾಂಪಿಯನ್ ಯಿಂಗ್ ಜೌ ಕೇವಲ 19 ನಿಮಿಷಗಳಲ್ಲಿ ಭಾವಿನಾ ಅವರನ್ನು ಮಣಿಸಿದರು.

ಹೈಜಂಪ್‌ನಲ್ಲಿ 2.6 ಮೀಟರ್ಸ್ ಸಾಧನೆ ಮಾಡಿದ ನಿಶಾದ್ ಕುಮಾರ್ ಏಷ್ಯನ್ ದಾಖಲೆ ಮುರಿದರು. ಇಷ್ಟೇ ಎತ್ತರ ಜಿಗಿದ ಅಮೆರಿಕದ ಡಲಾಸ್ ವೈಸ್ ಕೂಡ ಬೆಳ್ಳಿ ಪದಕ ಗಳಿಸಿದರು. ಅಮೆರಿಕದ ರೊಡೆರಿಕ್ ಟೌನ್‌ಸೆಂಡ್ ವಿಶ್ವ ದಾಖಲೆಯ 2.15 ಮೀ ಸಾಧನೆಯೊಂದಿಗೆ ಚಿನ್ನ ಗೆದ್ದರು. ಭಾರತದ ರಾಂಪಾಲ್ (1.94 ಮೀ) ಐದನೇ ಸ್ಥಾನ ಗಳಿಸಿದರು.

ಪ್ರಧಾನಿ ಅಭಿನಂದನೆ: ಪ್ರಧಾನಮಂತ್ರಿ ನರೇಂದ್ರ ಮೋದಿ ಒಳಗೊಂಡಂತೆ ಪ್ರಮುಖರು ಭಾವಿನಾ ಅವರನ್ನು ಅಭಿನಂದಿಸಿದ್ದಾರೆ. ಫೈನಲ್ ಪಂದ್ಯದ ನಂತರ ಮೋದಿ ಅವರು ಕರೆ ಮಾಡಿ ಭಾವಿನಾ ಅವರೊಂದಿಗೆ ಮಾತನಾಡಿದ್ದಾರೆ.

ಭಾವಿನಾ ಬೆನ್ ಅವರ ತಾಯಿ ನಿರಂಜನಾ ಬೆನ್ (ಮಧ್ಯ) ಗ್ರಾಮಸ್ಥರೊಂದಿಗೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ಆರ್ಚರಿಯಲ್ಲಿ ನಿರಾಸೆ

ಆರ್ಚರಿಯ ಕಾಂಪೌಂಡ್ ಮಿಶ್ರ ವಿಭಾಗದಲ್ಲಿ ಭಾರತದ ಸವಾಲು ಕೊನೆಗೊಂಡಿತು. ರಾಕೇಶ್ ಕುಮಾರ್ ಮತ್ತು ಜ್ಯೋತಿ ಬಲಿಯನ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರು.

ಆರನೇ ಶ್ರೇಯಾಂಕಿತ ಭಾರತದ ಜೋಡಿ ಟರ್ಕಿಯ ಒಜ್ನುರ್ ಕೂರ್ ಮತ್ತು ಬ್ಯುಲೆಂಟ್ ಕೊರ್ಕ್‌ಮಜ್ ವಿರುದ್ಧ 151-153ರಲ್ಲಿ ಮಣಿದರು. ಬೆಳಿಗ್ಗೆ ನಡೆದ 16ರ ಘಟ್ಟದ ಪಂದ್ಯದಲ್ಲಿ ಥಾಯ್ಲೆಂಡ್‌ನ ಆ್ಯನನ್ ಮತ್ತು ಪ್ರಫಾಪರ್ನ್ ಅವರನ್ನು 147-141ರಲ್ಲಿ ಭಾರತದ ಜೋಡಿ ಮಣಿಸಿತು.

> ಮನೆಯೊಳಗೇ ತಮ್ಮನ್ನು ತಾವು ಬಂಧಿಯಾಗಿಸಿಕೊಂಡಿರುವ ಮಹಿಳೆಯರೆಲ್ಲರೂ ತಮ್ಮ ಶಕ್ತಿ–ಸಾಮರ್ಥ್ಯ ಅರಿತು ಸಾಧನೆ ಮಾಡಲು ಮುಂದಾಗಬೇಕು. ಹಾಗೆ ಮಾಡಲು ಮನಸ್ಸು ಮಾಡದೇ ಇದ್ದರೆ ನನಗೆ ಈಗ ಈ ಪದಕ ಒಲಿಯುತ್ತಿರಲಿಲ್ಲ.
> **ಭಾವಿನಾ ಬೆನ್** ಬೆಳ್ಳಿ ವಿಜೇತ ಅಥ್ಲೀಟ್

12ನೇ ತಿಂಗಳಲ್ಲಿ ಕಾಡಿದ ಪೋಲಿಯೊ

ಗುಜರಾತ್‌ನ ಮೆಹ್ಸಾನ ಜಿಲ್ಲೆಯ ಸುಂಧಿಯಾ ಗ್ರಾಮದಲ್ಲಿ ಜನಿಸಿದ ಭಾವಿನಾ 12 ತಿಂಗಳ ಮಗುವಾಗಿದ್ದಾಗ ಪೋಲಿಯೊ ಇರುವುದು ಪತ್ತೆಯಾಗಿತ್ತು. 13 ವರ್ಷಗಳ ಹಿಂದೆ ಕ್ರೀಡಾ ಜೀವನ ಆರಂಭಿಸಿದ ಅವರು ಅಹಮದಾಬಾದ್‌ನ ವಸ್ತ್ರಾಪುರ್ ಪ್ರದೇಶದಲ್ಲಿರುವ ಅಂಧರ ಸಂಸ್ಥೆಯಲ್ಲಿ ಟೇಬಲ್ ಟೆನಿಸ್ ಆಡಲು ಶುರು ಮಾಡಿದರು. ವಸ್ತ್ರಾಪುರದಲ್ಲಿರುವ ಅಂಗವಿಕಲರ ಶಿಕ್ಷಣ ಸಂಸ್ಥೆಯಲ್ಲಿ ಭಾವಿನಾ ಅವರು ಐಟಿಐ ವಿದ್ಯಾರ್ಥಿಯಾಗಿದ್ದರು. ಅಂಧ ಮಕ್ಕಳು ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದುದನ್ನು ಕಂಡು ಅವರು ಕ್ರೀಡಾಪಟು ಆಗಲು ನಿರ್ಧರಿಸಿದ್ದರು.

ಅಹಮದಾಬಾದ್ ರೋಟರಿ ಕ್ಲಬ್ ತಂಡವನ್ನು ಪ್ರತಿನಿಧಿಸುತ್ತಿದ್ದ ಭಾವಿನಾ ಅಲ್ಲಿದ್ದಾಗಲೇ ಮೊದಲ ಪದಕ ಗೆದ್ದುಕೊಂಡಿದ್ದರು. 2011ರಲ್ಲಿ ಪಿಟಿಟಿ ಥಾಯ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದ ನಂತರ ಅವರು ವಿಶ್ವ ಕ್ರಮಾಂಕದಲ್ಲಿ ಎರಡನೇ ರ‍್ಯಾಂಕಿಂಗ್ ಗಳಿಸಿದ್ದರು. ಅವರಿಗೆ ಈಗ 34 ವರ್ಷ.



ವಿನೋದ್ ಕುಮಾರ್

ದಾಖಲೆಯ ಸಂಭ್ರಮಕ್ಕೆ ಕವಿದ ಮಂಕು

ಡಿಸ್ಕಸ್ ಥ್ರೋವರ್ ವಿನೋದ್ ಕುಮಾರ್ ಪುರುಷರ ಎಫ್–52 ವಿಭಾಗದಲ್ಲಿ ಏಷ್ಯನ್ ದಾಖಲೆಯೊಂದಿಗೆ ಕಂಚಿನ ಪದಕ ಗಳಿಸಿದ್ದರು. ಆದರೆ ಆಕ್ಷೇಪ ಸಲ್ಲಿಕೆಯಾದ ಕಾರಣ ಸಂಭ್ರಮ ಮಂಕಾಯಿತು.

ವಿನೋದ್ ಕುಮಾರ್ 19.91 ಮೀಟರ್ಸ್ ದೂರ ಡಿಸ್ಕ್ ಎಸೆದರು. ಪೋಲೆಂಡ್‌ನ ಪಿಯೊಟರ್ ಕೊಜೆವಿಜ್ (20.02 ಮೀ) ಮತ್ತು ಕ್ರೊವೇಷ್ಯಾದ ವೆಲಿಮಿರ್ ಸ್ಯಾಂಡರ್ (19.98 ಮೀ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗಳಿಸಿದರು.

ಬಿಎಸ್‌ಎಫ್ ಸೈನಿಕನಾಗಿರುವ 41 ವರ್ಷದ ವಿನೋದ್ ಸೈನಿಕ ತರಬೇತಿಯ ಸಂದರ್ಭದಲ್ಲಿ ಹಿಮದಲ್ಲಿ ಬಿದ್ದು ಕಾಲುಗಳ ಸ್ವಾಧೀನ ಕಳೆದುಕೊಂಡಿದ್ದರು. ಅವರನ್ನು ಎಫ್–52 ವಿಭಾಗಕ್ಕೆ ಆಯೋಜಕರು ಸೇರಿಸಿದ್ದರು.

ಬಾಕ್ಸಿಂಗ್: ಭಾರತಕ್ಕೆ 4 ಚಿನ್ನ

ಚಿನ್ನ ಗೆದ್ದ ರೋಹಿತ್ ಚಮೋಲಿ ಸಂಭ್ರಮ (ಎಡ)– ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಅಮೋಘ ಸಾಮರ್ಥ್ಯ ತೋರಿದ ಭಾರತದ ಬಾಕ್ಸರ್‌ಗಳು ದುಬೈನಲ್ಲಿ ನಡೆಯುತ್ತಿರುವ ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಕೊರಳಿಗೇರಿಸಿಕೊಂಡಿದ್ದಾರೆ.

ರಾಷ್ಟ್ರೀಯ ಚಾಂಪಿಯನ್, ರೋಹಿತ್ ಚಮೋಲಿ (48 ಕೆಜಿ ವಿಭಾಗ) ಹಾಗೂ ಭರತ್ ಜೂನ್ (+81 ಕೆಜಿ), ವಿಷು ರಾಠಿ (ಮಹಿಳೆಯರ 48 ಕೆಜಿ) ಮತ್ತು ತನು (ಮಹಿಳೆಯರ 52 ಕೆಜಿ) ಅವರು ಪ್ರಶಸ್ತಿ ಗೆದ್ದವರು.

ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ರೋಹಿತ್ 3–2ರಿಂದ ಮಂಗೋಲಿಯಾದ ಒಟ್‌ಗಾನ್‌ಬಯರ್ ತುವ್ಶಿಂಜಯ ಅವರನ್ನು ಮಣಿಸಿದರು.

ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಭರತ್ 5–0ಯಿಂದ ಕಜಕಸ್ತಾನದ ಯೆರ್ದೋಸ್ ಶರೀಫ್‌ಬೆಕ್ ವಿರುದ್ಧ ಗೆಲುವು ಸಾಧಿಸಿದರು. ಫೈನಲ್ ತಲುಪಿದ್ದ ಭಾರತದ ಇನ್ನೊರ್ವ ಬಾಕ್ಸರ್ ಗೌರವ್ ಸೈನಿ (70 ಕೆಜಿ) 0–5ರಿಂದ ಉಜ್ಬೆಕಿಸ್ತಾನದ ಬೊಲ್ಟಯೆವ್ ಶೌಕತ್‌ಜೊನ್ ಎದುರು ಮುಗ್ಗರಿಸಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದಲ್ಲಿ ವಿಷು ಅವರು ಉಜ್ಬೆಕಿಸ್ತಾನದ ಬಕ್ತಿಯೊರೊವಾ ರೊಬಿಯಾಕೊನ್ ಎದುರು, ತನು 3–2ರಿಂದ ಕಜಕಸ್ತಾನದ ತೊಮಿರಿಸ್ ಮಿರ್ಜಾಕುಲ್ ಎದುರು ಗೆಲುವು ಸಾಧಿಸಿದರು.

ಮುಸ್ಕಾನ್ ಅವರು (46 ಕೆಜಿ ವಿಭಾಗ) ಉಜ್ಬೆಕಿಸ್ತಾನದ ಗನೀವಾ ಗುಲ್ಸೆವರ್ ಎದುರು ಸೋತು ಬೆಳ್ಳಿ ಗಳಿಸಿದರು.

ಜೂನಿಯರ್ ವಿಭಾಗದಲ್ಲಿ ಭಾರತ ಈಗಾಗಲೇ ಆರು ಕಂಚಿನ ಪದಕಗಳನ್ನು ಗೆದ್ದುಕೊಂಡಿದೆ.

2019ರಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದ ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳು 21 ಪದಕಗಳನ್ನು (ಆರು ಚಿನ್ನ, ಒಂಬತ್ತು ಬೆಳ್ಳಿ ಮತ್ತು ಆರು ಕಂಚು) ಜಯಿಸಿದ್ದರು.

ಸಾನಿಯಾ–ಕ್ರಿಸ್ಟಿನಾ ರನ್ನರ್‌ಅಪ್



ಸಾನಿಯಾ ಮಿರ್ಜಾ

ಕ್ಲೀವ್‌ಲ್ಯಾಂಡ್, ಅಮೆರಿಕ (ಪಿಟಿಐ): ಟೂರ್ನಿಯುದ್ದಕ್ಕೂ ಭರ್ಜರಿ ಆಟವಾಡಿದ್ದ ಭಾರತದ ಸಾನಿಯಾ ಮಿರ್ಜಾ– ಅಮೆರಿಕದ ಕ್ರಿಸ್ಟಿನಾ ಮೆಕಾಲೆ ಫೈನಲ್‌ನಲ್ಲಿ ಎಡವಿದರು. ಇಲ್ಲಿ ನಡೆದ ಡಬ್ಲ್ಯುಟಿಎ 250 ಟೆನಿಸ್ ಟೂರ್ನಿಯ ಮಹಿಳಾ ಡಬಲ್ಸ್ ವಿಭಾಗದಲ್ಲಿ ರನ್ನರ್ ಅಪ್ ಸ್ಥಾನ ಗಳಿಸಿದರು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಸಾನಿಯಾ–ಕ್ರಿಸ್ಟಿನಾ 5–7, 3–6ರಿಂದ ಜಪಾನ್‌ನ ಶುಕೊ ಓಯಮಾ– ಈನಾ ಶಿಬಹಾರ ವಿರುದ್ಧ ಸೋತರು. ಒಂದು ತಾಸು 24 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.

ಸಾನಿಯಾ ಅವರಿಗೆ ಇದು ಈ ಋತುವಿನ ಮೊದಲ ಫೈನಲ್ ಪಂದ್ಯವಾಗಿತ್ತು. 180 ರ‍್ಯಾಂಕಿಂಗ್ ಪಾಯಿಂಟ್ಸ್ ಗಳಿಸುವದರೊಂದಿಗೆ ₹ 2 ಲಕ್ಷ 20 ಸಾವಿರ ಬಹುಮಾನವಾಗಿ ಅವರು ಪಡೆದರು.

ಡೇವಿಸ್ ಕಪ್; ಸುಮಿತ್ ನಗಾಲ್ ಅಲಭ್ಯ: ಭಾರತದ ಟೆನಿಸ್ ಆಟಗಾರ ಸುಮಿತ್ ನಗಾಲ್ ಅವರು ಮುಂಬರುವ ಫಿನ್‌ಲೆಂಡ್ ಎದುರಿನ ಡೇವಿಸ್ ಕಪ್ ಪಂದ್ಯಕ್ಕೆ ಲಭ್ಯರಿಲ್ಲ. ಗಾಯದ ಕಾರಣ ಅವರು ಹಿಂದೆ ಸರಿದಿದ್ದು ಬದಲಿಗೆ ಸಾಕೇತ್ ಮೈನೇನಿ ಅವರನ್ನು ಐದು ಮಂದಿಯ ತಂಡದಲ್ಲಿ ಸೇರಿಸಿಕೊಳ್ಳಲಾಗಿದೆ. ಈ ಪಂದ್ಯವು ಫಿನ್‌ಲೆಂಡ್‌ನಲ್ಲಿ ಸೆಪ್ಟೆಂಬರ್ 18ರಿಂದ 19ರವರೆಗೆ ನಿಗದಿಯಾಗಿದೆ.

24x7 Helpline: 85568 09999

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ; ಕೆಒಎನಲ್ಲಿ ಕ್ರೀಡಾಪಟುಗಳಿಗೆ ಸನ್ಮಾನ

ಸರ್ಕಾರಿ ಇಲಾಖೆಗಳ ಉದ್ಯೋಗ: ಕ್ರೀಡಾ ಮೀಸಲಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇಕಡಾ ಎರಡರಷ್ಟು ಕ್ರೀಡಾ ಮೀಸಲಾತಿ ನೀಡಿರುವ ಮಾದರಿಯನ್ನು ಉಳಿದ ಸರ್ಕಾರಿ ಇಲಾಖೆಗಳಲ್ಲಿ ಜಾರಿ ಮಾಡಲು ಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶ್ವಾಸನೆ ನೀಡಿದರು.

ಭಾನುವಾರ ಕರ್ನಾಟಕ ಒಲಿಂಪಿಕ್ ಸಂಸ್ಥೆಯು ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಒಲಿಂಪಿಯನ್ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ನಾನು ಗೃಹ ಸಚಿವನಾಗಿದ್ದಾಗ ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿಗೆ ಕ್ರಮ ಕೈಗೊಂಡಿದ್ದೆ. ಈಗ ರಾಜ್ಯ ಸರ್ಕಾರದ ಇತರೆ ಇಲಾಖೆಗಳಲ್ಲಿ ನೇಮಕಮಾಡಿಕೊಳ್ಳುವ ಬಗ್ಗೆ ಚಿಂತನೆ ನಡೆಸಲಾಗುವುದು. ರಾಜ್ಯದಲ್ಲಿ ಕ್ರೀಡಾಭಿವೃದ್ಧಿಗೆ ಮತ್ತು ಕ್ರೀಡಾಪಟುಗಳಿಗೆ ಪ್ರೋತ್ಸಾಹಿಸಲು ಇನ್ನೂ ಕೆಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಒಲಿಂಪಿಕ್ಸ್‌ನಲ್ಲಿ ಕನ್ನಡಿಗರ ಪ್ರಾತಿನಿಧ್ಯ ಯಾಕಿರಬಾರದು ಎಂಬ ಘೋಷವಾಕ್ಯದಡಿಯಲ್ಲಿ ಅಭಿವೃದ್ಧಿ ಮಾಡುತ್ತೇವೆ. ಮುಂದಿನ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕರ್ನಾಟಕದಲ್ಲಿ 75 ಅಥ್ಲೀಟ್‌ಗಳನ್ನು ದತ್ತು ಪಡೆದು ತರಬೇತಿ ನೀಡುವ ಯೋಜನೆ ಘೋಷಿಸಿದ್ದೇವೆ. ಇದಕ್ಕಾಗಿ ಕ್ರೀಡಾ ಸಚಿವರ ನೇತೃತ್ವದ ಸಮಿತಿ ಕಾರ್ಯಪ್ರವೃತ್ತವಾಗಿದೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಖೇಲೊ ಇಂಡಿಯಾ ಘೋಷಿಸಿದ್ದಾರೆ. ಇದೊಂದು ಅರ್ಥಪೂರ್ಣ ಯೋಜನೆಯಾಗಿದೆ. ಯುವಜನತೆಯನ್ನು ಕ್ರೀಡೆ ಮತ್ತು ಆರೋಗ್ಯ ರಕ್ಷಣೆಯತ್ತ ಸೆಳೆದುಕೊಂಡಿದೆ. ಜೀವನದಲ್ಲಿ ವ್ಯಕ್ತಿತ್ವ, ಶಿಸ್ತು ಮತ್ತು ಆರೋಗ್ಯವನ್ನು ನೀಡುವ ಕ್ರೀಡೆಗಳು ಮುಖ್ಯ. ಇದು ಪ್ರಧಾನಿಗಳ ದೂರದೃಷ್ಟಿಯ ಫಲವಾಗಿದೆ. ಖೇಲ್ ರತ್ನ ಪ್ರಶಸ್ತಿಗೆ ಮೇಜರ್ ಧ್ಯಾನಚಂದ್ ಅವರ ಹೆಸರು ನೀಡುವ ಮೂಲಕ ದಿಗ್ಗಜ ಹಾಕಿ ಆಟಗಾರನನ್ನೂ ಗೌರವಿಸಿದ್ದಾರೆ’ ಎಂದು ಬೊಮ್ಮಾಯಿ ಬಣ್ಣಿಸಿದರು.

‘ರಾಜ್ಯದಲ್ಲಿ ಕ್ರೀಡಾ ಬಜೆಟ್‌ನಲ್ಲಿ ಅನುದಾನ ಹೆಚ್ಚಳ ಮಾಡುವ ಬೇಡಿಕೆಗೆ ಸ್ಪಂದಿಸಲಾಗುವುದು. ಮಾರ್ಚ್‌ನಲ್ಲಿ ನಡೆಯುವ ಆಯವ್ಯಯ ಪತ್ರ ಮಂಡನೆಯಲ್ಲಿ ಅನುದಾನ ಘೋಷಿಸಲಾಗುವುದು. ವಲಯವಾರು ಅಂತರರಾಷ್ಟ್ರೀಯ ಕ್ರೀಡಾ ಕಾಂಪ್ಲೆಕ್ಸ್ ನಿರ್ಮಿಸುವುದು. ಮುಖ್ಯವಾಗಿ ತರಬೇತುದಾರರನ್ನು ನೇಮಕ ಮಾಡುವ ಮತ್ತಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಶ್ರೀಹರಿ ನಟರಾಜ್ (ಟೋಕಿಯೊ ಒಲಿಂಪಿಕ್ಸ್ ಈಜು), ಬಿ.ಎಸ್. ಅಂಕಿತಾ (ಮಹಿಳಾ ಹಾಕಿ ತಂಡದ ಸಹಾಯಕ ಕೋಚ್), ಫವಾದ್ ಮಿರ್ಜಾ (ಈಕ್ವೆಸ್ಟ್ರಿಯನ್), ಅದಿತಿ ಅಶೋಕ್ (ಗಾಲ್ಫ್) ಅವರಿಗೆ ತಲಾ ₹ 2 ಲಕ್ಷ ರೂಪಾಯಿ ಚೆಕ್ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಫವಾದ್ ಮಿರ್ಜಾ ಮತ್ತು ಅದಿತಿ ಅಶೋಕ್ ಅವರು ಖುದ್ದು ಹಾಜರಿರಲಿಲ್ಲ. ಫವಾದ್ ಪರವಾಗಿ ಅವರ ತಂದೆ ಡಾ. ಹಸ್ನೈನ್ ಮಿರ್ಜಾ ಚೆಕ್ ಸ್ವೀಕರಿಸಿದರು.

ಧ್ಯಾನಚಂದ್ ಪ್ರಶಸ್ತಿ ಪುರಸ್ಕೃತ ಅಥ್ಲೀಟ್ ಉದಯ ಕೆ ಪ್ರಭು, ಒಲಿಂಪಿಯನ್ ಹಾಕಿಪಟುಗಳಾದ ಅಲನ್, ಶೊಫೀಲ್ಡ್, ರವಿ ನಾಯ್ಕರ್, ಸಾಬು ವರ್ಕಿ, ಒಲಿಂಪಿಯನ್ ಜುಡೊಕಾ ನಜೀಬ್ ಆಗಾ, ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ ಸಿ. ಹೊನ್ನಪ್ಪಗೌಡ ಮತ್ತು ಕಬಡ್ಡಿ ಆಟಗಾರ್ತಿ ವಿ. ತೇಜಸ್ವಿನಿ ಬಾಯಿ (ಕಾರ್ಯಕ್ರಮದಲ್ಲಿ ಹಾಜರಿರಲಿಲ್ಲ) ಅವರನ್ನು ಗೌರವಿಸಲಾಯಿತು.

ಜೂನಿಯರ್ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪದಕವಿಜೇತ ಅಥ್ಲೀಟ್ ಪ್ರಿಯಾ ಮೋಹನ್ ಅವರಿಗೆ ಉದಯೋನ್ಮುಖ ಅಥ್ಲೀಟ್ ಗೌರವ ನೀಡಲಾಯಿತು. ಅವರಿಗೆ ಕೆಒಎಯಿಂದ ಒಂದು ಲಕ್ಷ ಮತ್ತು ರಾಜ್ಯ ಸರ್ಕಾರದಿಂದ ಐದು ಲಕ್ಷ ರೂಪಾಯಿಗಳ ಚೆಕ್ ನೀಡಲಾಯಿತು.

ಬೆಂಗಳೂರಿನಲ್ಲಿ ಭಾನುವಾರ ಕ್ರೀಡಾ ದಿನಾಚರಣೆ ಅಂಗವಾಗಿ ಕರ್ನಾಟಕ ಒಲಿಂಪಿಕ್ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಒಲಿಂಪಿಯನ್ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು (ಎಡದಿಂದ ಬಲಕ್ಕೆ), ನಿಂತವರು; ಹಸ್ನೈನ್ ಮಿರ್ಜಾ, (ಫವಾದ್ ಮಿರ್ಜಾ ತಂದೆ), ಸಾಬು ವರ್ಕಿ, ಅಂಕಿತಾ, ಶ್ರೀಹರಿ ನಟರಾಜ್, ಹೊನ್ನಪ್ಪಗೌಡ (ಕಬಡ್ಡಿ), ಉದಯ ಕೆ. ಪ್ರಭು, ಅಲೆನ್ ಶೋಫೀಲ್ಡ್, ರವಿ ನಾಯ್ಕರ್, ಪ್ರಿಯಾ ಮೋಹನ್, ನಜೀಬ್ ಆಗಾ, ಕುಳಿತವರು: ರಾಜೇಶ್ ಜಗದಾಳೆ (ಕೆಒಎ ಖಜಾಂಚಿ), ಶಾಲಿನಿ ರಜನೀಶ್ (ಹೆಚ್ಚುವರಿ ಮುಖ್ಯ ಕಾರ್ಯದರ್ಶಿ), ಕೆ. ಗೋವಿಂದರಾಜ್ (ಕೆಒಎ ಅಧ್ಯಕ್ಷ), ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್, ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿ), ಕೆ.ಸಿ. ನಾರಾಯಣಗೌಡ (ಕ್ರೀಡಾ ಸಚಿವ), ವೆಂಕಟೇಶ್ ಕುಮಾರ್ (ಕ್ರೀಡಾ ಇಲಾಖೆ ಆಯುಕ್ತರು), ಟಿ. ಅನಂತರಾಜು (ಕೆಒಎ ಕಾರ್ಯದರ್ಶಿ) – ಪ್ರಜಾವಾಣಿ ಚಿತ್ರ

‘ದೈಹಿಕ ಶಿಕ್ಷಣ ಶಿಕ್ಷಕರ ನೇಮಿಸದಿದ್ದರೆ ಪರವಾನಿಗೆ ರದ್ದು’

ಬೆಂಗಳೂರು: ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಕ ಮಾಡಿಕೊಳ್ಳದ ಖಾಸಗಿ ಶಾಲೆಗಳ ಪರವಾನಿಗೆಯನ್ನು ರದ್ದು ಮಾಡಲಾಗುವುದು ಎಂದು ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಹೇಳಿದರು.

ಕ್ರೀಡಾ ಭಾರತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ, ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆಗಳು ಜಂಟಿಯಾಗಿ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ರಾಜ್ಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜ್, ಕ್ರೀಡಾಭಾರತಿ ದಕ್ಷಿಣ ಭಾರತ ಸಂಯೋಜಕ ಚಂದ್ರಶೇಖರ್ ಜಹಗೀರ್‌ದಾರ, ದಕ್ಷಿಣ ಕರ್ನಾಟಕ ಅಧ್ಯಕ್ಷ ಎಸ್. ಲಕ್ಷ್ಮೀಶ್ ಕಾರ್ಯಕ್ರಮದಲ್ಲಿ ಇದ್ದರು.

ಇನಿಯನ್‌ಗೆ ಪ್ರಶಸ್ತಿ

ನೊಯಿಸಿಲ್, ಫ್ರಾನ್ಸ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಪಿ.ಇನಿಯನ್ ಅವರು ನೊಯಿಸಿಲ್ ಅಂತರರಾಷ್ಟ್ರೀಯ ಓಪನ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಕ್ಲಾಸಿಕಲ್ ವಿಭಾಗದಲ್ಲಿ ಅವರು ಒಂಬತ್ತು ಸುತ್ತುಗಳಲ್ಲಿ 8 ಪಾಯಿಂಟ್ಸ್ ಕಲೆಹಾಕಿದರು.

ಅಮೆರಿಕ ಓಪನ್: ನೊವಾಕ್‌ಗೆ ಕ್ಲೀನ್ ಸ್ವೀಪ್ ಗುರಿ

ನ್ಯೂಯಾರ್ಕ್ (ಎಎಫ್‌ಪಿ): ವರ್ಷದ ಕೊನೆಯ ಗ್ರ್ಯಾನ್‌ಸ್ಲಾಂ ಟೆನಿಸ್ ಟೂರ್ನಿ ಅಮೆರಿಕ ಓಪನ್ ಸೋಮವಾರ ಆರಂಭಗೊಳ್ಳಲಿದ್ದು ಸರ್ಬಿಯಾದ ನೊವಾಕ್ ಜೊಕೊವಿಚ್ ಈ ಋತುವಿನ ಎಲ್ಲ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಳ್ಳುವ ಕನಸಿನೊಂದಿಗೆ ಕಣಕ್ಕೆ ಇಳಿಯಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಜಪಾನ್‌ನ ನವೊಮಿ ಒಸಾಕ ಮೂರನೇ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ.

ಪುರುಷರ ವಿಭಾಗದಲ್ಲಿ ಐವರು ಮಾಜಿ ಚಾಂಪಿಯನ್ನರು ಈ ಬಾರಿ ಆಡುತ್ತಿಲ್ಲ. ರೋಜರ್ ಫೆಡರರ್, ರಫೆಲ್ ನಡಾಲ್, ಸ್ಟ್ಯಾನ್ ವಾವ್ರಿಂಕ, ಜುವಾನ್ ಮಾರ್ಟಿನ್ ಡೆಲ್ ಪೊಟ್ರೊ ಮತ್ತು ಡೊಮಿನಿಕ್ ಥೀಮ್ ಗಾಯದಿಂದಾಗಿ ಆಡದೇ ಇರಲು ನಿರ್ಧರಿಸಿದ್ದಾರೆ. ಆದರೆ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್, ಗ್ರೀಸ್‌ನ ಸ್ಟೆಫನೋಸ್ ಸಿಟ್ಸಿಪಾಸ್ ಹಾಗೂ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರ ಸವಾಲನ್ನು ಜೊಕೊವಿಚ್ ಮೀರಿ ನಿಲ್ಲಬೇಕಾಗಿದೆ.

ನವೊಮಿ ಒಸಾಕ

ವಿಂಬಲ್ಡನ್ ಟೂರ್ನಿಯ ಚಾಂಪಿಯನ್ ಆ್ಯಶ್ಲಿ ಬಾರ್ಟಿ ಕೂಡ ಪ್ರಶಸ್ತಿ ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ. 83 ವಾರ ವಿಶ್ವ ರ‍್ಯಾಂಕಿಂಗ್‌ನ ಅಗ್ರ ಸ್ಥಾನ ಕಾಯ್ದುಕೊಂಡಿದ್ದ ಬಾರ್ಟಿ ಈ ವರ್ಷದ ವಿಂಬಲ್ಡನ್ ಮತ್ತು ಸಿನ್ಸಿನಾಟಿ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದಾರೆ.

ಸೆರೆನಾ ವಿಲಿಯಮ್ಸ್ ಗಾಯದ ಕಾರಣದಿಂದ ಅಮೆರಿಕ ಓಪನ್‌ನಲ್ಲಿ ಆಡದೇ ಇರಲು ನಿರ್ಧರಿಸಿದ್ದಾರೆ. ಬಾರ್ಬೊರಾ ಕ್ರೆಜಿಕೋವ, ಸಬಲೆಂಕಾ, ಕರೊಲಿನಾ ಪ್ಲಿಸ್ಕೋವ, ಸೋಫಿಯಾ ಕೆನಿನ್, ಬಿಯಾಂಕ ಆ್ಯಂಡ್ರ್ಯುಸ್ಕು, ಇಗಾ ಸ್ವೆಟೆಕ್ ಅವರೂ ಕಣದಲ್ಲಿದ್ದಾರೆ.

ಆರಂಭ: ರಾತ್ರಿ 8.30



ಜೊಕೊವಿಚ್– ಎಎಫ್‌ಪಿ ಚಿತ್ರ

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕ್ರಿಕೆಟ್: ಮಹಿಳಾ ತಂಡದ ಅಭ್ಯಾಸಕ್ಕಿಲ್ಲ ಅವಕಾಶ?

ಬೆಂಗಳೂರು (ಪಿಟಿಐ): ಪೂರ್ಣಪ್ರಮಾಣದ ಸರಣಿಗಾಗಿ ಭಾರತ ಮಹಿಳಾ ಕ್ರಿಕೆಟ್ ತಂಡವು ಭಾನುವಾರ ಆಸ್ಟ್ರೇಲಿಯಾಕ್ಕೆ ತೆರಳಿತು. ಆದರೆ ಕೋವಿಡ್ ಸಂಬಂಧಿತ ನಿರ್ಬಂಧಗಳ ಕಾರಣ ತಂಡದ ಅಭ್ಯಾಸಕ್ಕೆ ಅವಕಾಶ ಸಿಗುವ ಸಾಧ್ಯತೆಯಿಲ್ಲ. ನಿಯಮಗಳ ಅನ್ವಯ ಆಟಗಾರ್ತಿಯರು ಬ್ರಿಸ್ಬೇನ್‌ನಲ್ಲಿ 14 ದಿನಗಳ ಕಾಲ ಕ್ವಾರಂಟೈನ್ ಇರಬೇಕಾಗುತ್ತದೆ.

ಒಂದು ವಾರದ ಕಠಿಣ ಕ್ವಾರಂಟೈನ್ ಬಳಿಕ ಆಟಗಾರ್ತಿಯರು ತಾಲೀಮು ನಡೆಸಬಹುದು ಎಂದು ಬಿಸಿಸಿಐ ಈ ಮೊದಲು ಆಶಿಸಿತ್ತು.